## MATTER UNDER RULE 59

### Notice regarding Police firing in Nargund, Navalgund, etc. in Dharwar District

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಆ ಬಗ್ಗೆ...

MR. SPEAKER:—A good number of hon. Members from both the sides have given notices regarding police firing in Dharwar, Navalgud Naragund Soundatti & Gadag. Since this is a very important matter I will hear 3 Members from the Opposition side and 3 Members from the Ruling party. After hearing their submissions, the Hon'ble Chief Minister will make a statement.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ನಾನೂ ಸಹ ಇದೇ ವಿಷಯದಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಒಂದೊಂದು ಪಕ್ಷದ ವತಿಯಿಂದ ಒಬ್ಬೊಬ್ಬರು ವಿಷಯದ ಬಗ್ಗೆ ಪ್ರಿಲಿಮಿನರಿಯಾಗಿ ಮಾತನಾಡಲಿ. ಅನಂತರ ಅದಕ್ಕೆ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಎ.ಜಿ. ಕೊಡಗಿ.—ಎಲ್ಲ ಸಂದರ್ಭಗಳಲ್ಲಿಯೂ ಪಕ್ಷದ ಮುಖಂಡರುಗಳೇ ಮಾತನಾಡುವುದಾದರೆ, ನಾವು ಇಲ್ಲಿ ಏತಕ್ಕೆ ಇರಬೇಕು? ನಾವು ಇಲ್ಲಿರುವುದಕ್ಕಿಂತ ಮನೆಗೆ ಹೋಗುವುದು ಒಳ್ಳೆಯದೆಂದು ಕಾಣುತ್ತದೆ.

ಶ್ರೀ ಅಜೀಜ್ ಸೇಠ್.—ತಾವು ಕೆಲವರಿಗೆ ಮಾತ್ರ ಅವಕಾಶ ಕೊಡುವುದು ಸರಿಯಲ್ಲ. ತಾವು ಈ ಮನೆಯ ಎಲ್ಲ ಸದಸ್ಯರನ್ನು ಒಂದೇ ರೀತಿಯಿಂದ ನೋಡಿಕೊಳ್ಳಬೇಕು. ಮತ್ತು ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ವಿ.ಬಿ. ಬಾವಿ.—ಸ್ವಾಮಿ, ಇದು ರೈತರ ಅಳಿವು ಉಳಿವಿನ ಪ್ರಶ್ನೆಯಾಗಿ ಇದೆ, ಆದಕಾರಣ ತಾವು ಧಾರವಾಡ ಜಿಲ್ಲೆಯ ಎಲ್ಲ ಮಾನ್ಯ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡಲೇಬೇಕು.

ಅಧ್ಯಕ್ಷರು.—ನಾನು ಅವಕಾಶ ಮಾಡಿಕೊಡುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ಎಂ.ಸಿ. ಬಸಪ್ಪ.—ಈ ಕಡೆಯಿಂದ ನಾವು ನಿಲುವಳಿ ಸೂಚನೆಯನ್ನು ಏನು ಕೊಟ್ಟಿದ್ದೇವೆ, ಅದನ್ನು ತಾವು ಅಲೋ ಮಾಡಿದ್ದೀರಾ?

ಅಧ್ಯಕ್ಷರು.—ಈಗ ಈ ವಿಚಾರದಲ್ಲಿ ಪ್ರಿಲಿಮಿನರಿಯಾಗಿ ಮಾತನಾಡಲು ಅವಕಾಶ ಕೊಡುತ್ತೇನೆ. ನಂತರ ಬೇರೆ ವಿಚಾರ.

ಶ್ರೀ ಎಂ.ಸಿ. ಬಸಪ್ಪ—ರೂಲಿಂಗ್ ಪಾರ್ಟಿಯವರೂ ಸಹ ಈ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದರೆ, ಈ ಕೂಡಲೇ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು.

MR. SPEAKER.—I do not think the Ruling Party Members can give an adjournment motion. They can rise this matter in some other form.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಇಲ್ಲಿ ಚರ್ಚೆ ಮಾಡಲು ನನ್ನ ವಿರೋಧವೇನೂ ಇಲ್ಲ. ಸರ್ಕಾರದ ವರದಿಯೂ ಸಹ ಇಷ್ಟರಲ್ಲಿಯೇ ಬರುತ್ತದೆ ಅದನ್ನು ಈ ಸಭೆಯ ಮುಂದಿಡುತ್ತೇನೆ ಈ ಘಟನೆಯಲ್ಲಿ ಜನರೂ ಸತ್ತಿದ್ದಾರೆ ಮತ್ತು ಪೋಲಿಸ್-ಸಬ್-ಇನ್ಸ್‌ಪೆಕ್ಟರ್ ಸತ್ತಿದ್ದಾರೆ. ಆದಕಾರಣ ವಿಷಯ ಬಹಳ ಗಂಭೀರವಾಗಿದೆ. ಆದಕಾರಣ ಇದರ ಬಗ್ಗೆ ಚರ್ಚೆ ಮಾಡಬೇಕೆ ಹೊರತು ಯಾರು ಮೊದಲು ಮಾತನಾಡಬೇಕು, ಯಾರು ಅನಂತರ ಮಾತನಾಡಬೇಕು

ಎಂಬುದರ ಬಗ್ಗೆಯೇ ಚರ್ಚೆ ಮಾಡುತ್ತಾ ಹೋಗುವುದು ಸರಿಯಲ್ಲ. ಈ ಘಟನೆ ಯಾವ ಭಾಗದಲ್ಲಿ ನಡೆದಿದೆ, ಅಲ್ಲಿಯ ಶಾಸಕರಿಗೆ ಮಾತನಾಡಲು ಹೆಚ್ಚಿನ ಆತುರವಿದೆ. ಅದೇ ರೀತಿ ಬೇರೆಯವರಿಗೂ ಇದೆ. ಆದ್ದರಿಂದ...

ಶ್ರೀ ಎಂ. ಸಿ. ಬಸಪ್ಪ.—ನಾನು ಹೇಳಿದ್ದೇನೆಂದರೆ, ರೂಲಿಂಗ್ ಪಾರ್ಟಿಯವರೂ ಸಹ ಈ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದರೆ...

SRI B.B. SAYANAK.—Sir, I have given a notice of an adjournment motion. So, I should be given a chance to submit my views about the incident.

SRI R. GUNDU RAO.—The incident has happened. I do agree that this matter should be taken up for discussion right now. It is also true that Members from both the sides like to speak on this issue At the same time Members coming from the concered constituencies are very eagre to express their concern about the incident that has taken place in Dharwar District. Taking all these aspects in to consideration let us sit and discuss this matter in a calm atmosphere and let us see how best we could find a solution to this problem. I am awaiting for the report. As soon as the report is received I will place it before the House Therefore, my submission is let us not give any political thinking to this incident.

SRI M. C. BASAPPA.—Sir, now the Hon'ble Chief Minister has come forward with a statement that the matter may be taken up for discussion. I would like to know are we taking up the adjournment motion sent by us or are we going to discuss this matter under some other rules of this House.

MR. SPEAKER.—I would like the hon. Member to make a preliminary submission.

SRI B.B SAYANAK.—Sir, I would like to know whether the adjournment motion has been admitted or not?

MR. SPEAKER.-That will be decided after hearing the preliminary submission of the hon. Members.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಈ ವಿಚಾರದಲ್ಲಿ ಬಹಳ ಟೆಕ್ನಿಕಲ್ ಆಗಿ ಹೋಗುವುದು ಬೇಡ. ಯಾವ ನಿಯಮದ ಪ್ರಕಾರ ಇದನ್ನು ಚರ್ಚೆ ಮಾಡಬೇಕೆಂಬುದನ್ನು ಮಾನ್ಯ ಅಧ್ಯಕ್ಷರೇ ತಿರ್ಮಾನ ಮಾಡಲಿ ಒಟ್ಟಿನಲ್ಲಿ ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳ ಮನಸ್ಸಿನಲ್ಲಿರುವಂತಹ ಆತಂಕವನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದು ಬಹಳ ಗಂಭೀರವಾದಂಥ ವಿಚಾರ ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಆದಕಾರಣ ಸಂಬಂಧಪಟ್ಟ ಸದಸ್ಯರುಗಳಿಗೆ ಹಾಗೂ ಇತರರಿಗೆ ಇದರ ಮೇಲೆ ಮಾತನಾಡಬೇಕೆಂಬ ಕಳಕಳಿ ಇದೆ. ಆದರೆ ಎಲ್ಲರೂ ಮಾತನಾಡಬೇಕೆಂದರೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ನೋಟೀಸ್ ಕೊಟ್ಟಿರುವವರು ಪ್ರಿಲಿಮಿನರಿಯಾಗಿ ಮಾತನಾಡಲಿ, ನಂತರ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆಮೇಲೆ ನಾನು ಇದರ ಬಗ್ಗೆ ನನ್ನ ತೀರ್ಮಾನ ಕೊಡುತ್ತೇನೆ.

† ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೆ, ನಾವು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ. ಅದರ ಅಡ್ಮಿಷನ್ ಬಗ್ಗೆ ತಮ್ಮ ಮನವೊಲಿಸುವುದಕ್ಕಾಗಿ ಪ್ರಾಸ್ತಾವಿಕ ವಾಗಿ ಕೆಲವು ವಿಚಾರಗಳನ್ನು ಹೇಳಬಯಸುತ್ತಾ ಇದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರ ಬಹಳ ಗಂಭೀರವಾಗಿದೆ, ಆ ಕಡೆಯ ಸದಸ್ಯರೂ ಬಹಳ ಕಳವಳದಿಂದ ಇದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಈ ಕಡೆ, ಆ ಕಡೆ ಎನ್ನುವ ಪ್ರಶ್ನೆಯಲ್ಲ, ಇಡೀ ಸದನಕ್ಕೆ, ಇಡೀ ಕರ್ನಾಟಕದ ಜನತೆಗೆ ಸಂಬಂಧಪಟ್ಟ ಒಂದು ಮಹತ್ವದ ವಿಚಾರ. ನಾನು ಪ್ರಾರಂಭದಲ್ಲಿ ಹೇಳಬಯಸುತ್ತಾ ಇದ್ದೇನೆ. ನಿನ್ನೆಯ ದಿವಸ ೨೧-೭-೧೯೮೦ ರಂದು ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿವಸ ಎಂದು ಹೇಳಬೇಕಾಗಿದೆ. ರೈತರ ಬಗ್ಗೆ ನಿನ್ನೆ ಚರ್ಚೆ ಮಾಡಿದ್ದೇವೆ. ಇವತ್ತು ಕರ್ನಾಟಕದಲ್ಲಿ ರೈತರು ಸಂಘಟನೆಯಾಗಿಲ್ಲ, ಸಂಘಟನೆಯಾಗತಕ್ಕ ಒಂದು ಪ್ರಯತ್ನ ನಡೆದಿದೆ. ರೈತರಿಗೆ ತಮ್ಮ ಮೇಲೆ ಆಗತಕ್ಕ ಅನ್ಯಾಯಗಳನ್ನು, ದಬ್ಬಾಳಿಕೆಗಳನ್ನು ಕಾನೂನು ಬಾಹಿರವಾಗಿ ನಡೆದಂಥ ಸರ್ಕಾರದ ಒತ್ತಡ ಗಳನ್ನು ವಿರೋಧ ಮಾಡಿ ಪರಿಹಾರ ಕಂಡುಕೊಂಡು ಶಾಂತ ರೀತಿಯಿಂದ ಸಂಘಟನೆ ಮತ್ತು ಚಳುವಳಿ ಯನ್ನು ಪ್ರಾರಂಭ ಮಾಡಿದ್ದಾರೆ. ಈ ಮಲಪ್ರಭ ಅಚ್ಚುಕಟ್ಟು ಪ್ರದೇಶದ ನರಗುಂದ್, ನವಲ್ ಗುಂದ್, ಸವದತ್ತಿ, ರಾಮದುರ್ಗ ಈ ಭಾಗಗಳ ರೈತರು ಕಳೆದ ಎರಡು ವರ್ಷಗಳಿಂದ ತಮ್ಮ ಸಮಸ್ಯೆಗಳ ಬಗ್ಗೆ ಶಾಂತರೀತಿಯ ಚಳುವಳಿ ಮಾಡುತ್ತಾ ಇದ್ದಾರೆ. ಅಲ್ಲಿ ನೀರು ಕೊಡದೆ ಬೆಟರ್ ಮೆಂಟ್ ಲೆವಿ ಹಾಕಿರತಕ್ಕಂಥಾದ್ದು ವಾಟರ್ ರೇಟ್ ಹಾಕಿರತಕ್ಕಂಥಾದ್ದು, ಇದರ ಜೊತೆಗೆ ವಿಚಾರಣೆ ಮಾಡದೆ ಸರಿಯಾಗಿ ಆ ಸ್ಥಾನಕ್ಕೆ ಹೋಗಿ ಪರಿಶೀಲನೆ ಮಾಡದೆ, ಲೆವಿ ಹಾಕಿದ್ದಾರೆ. ಈ ಪ್ರಶ್ನೆಯನ್ನು ಕಳೆದ ಎರಡು ವರ್ಷಗಳಿಂದ ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಎತ್ತಿದ್ದೇವೆ. ಅದರ ವಿವರಣೆ ಗಳನ್ನು ನಾನು ಕೊಡುವುದಕ್ಕೆ ಹೋಗುವುದಿಲ್ಲ ಏಕೆಂದರೆ, ಅನೇಕ ಸಲ ಹೇಳಿದ್ದೇವೆ. ನೀರು ಇಲ್ಲದ ಭೂಮಿಗೆ ಆಫೀಸರ್ ಕೂತುಕೊಂಡು ಬೆಟರ್‌ಮೆಂಟ್ ಲೆವಿ ಬಗ್ಗೆ ಇಂಗ್ಲೀಷಿನಲ್ಲಿ ನೋಟೀಸ್ ಕೊಟ್ಟಿದ್ದಾರೆ, ಅದಕ್ಕೆ ಟೈಂ ಕೊಡದೆ ಎಕ್ಸ್‌ಪಾರ್ಟಿ ಡಿಸಿಷನ್ ಮಾಡಿದ್ದಾರೆ. ಇದರ ಬಗ್ಗೆ ಅನೇಕ ಕಡೆ ಭಾರಿ ಚರ್ಚೆ ಮಾಡಿದ್ದೇವೆ. ಜಿಲ್ಲಾ ಕೌನ್ಸಿಲ್‌ನಲ್ಲಿ ಚರ್ಚೆ ಮಾಡಿದ್ದೇವೆ. ಅಸೆಂಬ್ಲಿಯಲ್ಲಿ ಚರ್ಚೆ ಮಾಡಿದ್ದೇವೆ. ಹಿಂದೆ ಅವರು ಮಂತ್ರಿಗಳನ್ನು ಭೇಟಿಯಾಗಿದ್ದಾರೆ, ಮುಖ್ಯ ಮಂತ್ರಿಗಳನ್ನು ಭೆಟ್ಟಿಯಾಗಿದ್ದಾರೆ, ಸಭೆಗಳನ್ನು ಮಾಡಿದ್ದಾರೆ, ಮೆರವಣಿಗೆಗಳನ್ನು ಮಾಡಿದ್ದಾರೆ, ಹರತಾಳಗಳನ್ನು ಮಾಡಿದ್ದಾರೆ ಆದರೂ ಸಹ ಪರಿಹಾರ ಸಿಕ್ಕಲಿಲ್ಲ. ನರಗುಂದ್ ಸದಸ್ಯರಾದ ಮಾನ್ಯ ಬಿ ಆರ್. ಪಾಟೀಲರು ಮತ್ತು ನಾನು ಎರಡು ವಾರಗಳ ಹಿಂದೆ ಈ ವಿಚಾರವಾಗಿ ಒಂದು ಗಂಟೆ ಕಾಲ ಈ ಮನೆಯಲ್ಲಿ ವಾದ ಮಾಡಿದ್ದೇವೆ. ರೈತರು ಉಪವಾಸ ಕೂತಿದ್ದಾರೆ, ಪ್ರತಿಯೊಂದು ಗ್ರಾಮದಿಂದ ಬಂದು ಪ್ರತಿ ದಿವಸ ತಹಶೀಲ್ದಾರ್ ಆಫೀಸ್ ಮುಂದೆ ರೈತರು ಉಪವಾಸ ಕೂತಿದ್ದಾರೆ. ಅವರ ಮೇಲೆ ಒತ್ತಡ ತಂದು ವಸೂಲಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ, ಅವರ ಮನೆ ಮಠಗಳನ್ನು ಜಪ್ತಿ ಮಾಡುತ್ತಿದ್ದಾರೆ, ಎತ್ತುಗಳನ್ನು ಹಿಡಿದುಕೊಂಡಿದ್ದಾರೆ, ಜಮೀನುಗಳನ್ನು ಪರ್‌ಫ್ಯೂಚರ್ ಮಾಡಿ ನೋಟೀಸ್ ತೆಗೆದಿದ್ದಾರೆ. ಇದರ ಬಗ್ಗೆ ನಾನು ಡೆಪ್ಯುಟಿ ಕಮಿಷನರ್ ಜೊತೆಗೆ, ಡಿವಿಜನಲ್ ಕಮಿಷನರ್ ಜೊತೆಗೆ, ರೆವಿನ್ಯೂ ಕಮಿಷನರ್ ಜೊತೆಗೆ, ಕಂದಾಯ ಸಚಿವರ ಜೊತೆಗೆ ಮಾತನಾಡಿದ್ದೇನೆ. ಕೂಡಲೇ ತಾವು ವಸೂಲಿ ಕ್ರಮ ತಡೆಹಿಡಿಯಿರಿ, ಎಂದು ಹೇಳಿದ್ದೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸದನ ಮುಗಿಯುವುದರೊಳಗೆ ಸಂಪೂರ್ಣವಾಗಿ ಅಭ್ಯಾಸಮಾಡಿ ಹೇಳಿಕೆ ಕೊಡುತ್ತೇನೆಂದು ಹೇಳಿದರು, ಅದನ್ನು ಒಪ್ಪಿಕೊಂಡಿದ್ದೇನೆ. ವಸೂಲಿ ಕ್ರಮ ನಿಲ್ಲಿಸತಕ್ಕ ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿದರೂ ಕೂಡ ಇದುವರೆಗೆ ತೆಗೆದುಕೊಳ್ಳಲಿಲ್ಲ. ಅಧಿಕಾರಿಗಳಿಗೆ ಟೆಲಿಫೋನ್ ಮೂಲಕ ಆದೇಶ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಆದರೆ ಅಲ್ಲಿ ಮಾತ್ರ, ವಸೂಲಿ ಕ್ರಮ ನಿಲ್ಲಲಿಲ್ಲ ಈ ಎಲ್ಲಾ ತಾಲ್ಲೂಕಿನ ರೈತರು ಸಭೆ ಮಾಡಿ, ನಿರ್ಣಯಗಳನ್ನು ಮಾಡಿಕೊಂಡು ಬೆಂಗಳೂರಿಗೆ ಬಂದು ಎಲ್ಲಾ ಶಾಸಕರಿಗೂ ಭೆಟ್ಟಿಯಾಗಿ ತಮ್ಮ ಬೇಡಿಕೆಗಳನ್ನು ರೂಮು ರೂಮಿಗೂ ಹಂಚಿದರು. ಪುನಃ ತಾವು ಈ ಪ್ರಶ್ನೆಯನ್ನು ಎತ್ತಿದೆವು. ಅಲ್ಲಿ ಸತ್ಯಾಗ್ರಹ ನಡೆಯುತ್ತಾ ಇದೆ, ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್‌ನವರು, ರೆವಿನ್ಯು ಡಿಪಾರ್ಟ್

---

†Indicates that remarks or speaches have not been revised by the member concerned.

ಮೆಂಟ್‌ನವರು ಸರಿಯಾಗಿ ವಿಚಾರ ಮಾಡಿದ್ದಿಲ್ಲ. ಮಾನ್ಯ ದೇವರಾಜ ಅರಸ್ ಅವರು ಲೋಕ ಸಭೆ ಚುನಾವಣೆಗೆ ಮೊದಲು ಅಲ್ಲಿಗೆ ಬಂದಾಗ ೧೦ ಸಾವಿರ ಜನ ರೈತರು ಅವರನ್ನು ತಡೆದು ಇದರ ಬಗ್ಗೆ ವಿಚಾರಣೆಯಾಗಬೇಕು ಎಂದು ಹೇಳಿದರು. ತಾತ್ಕಾಲಿಕವಾಗಿ ಅವರು ತಡೆ ಕೊಟ್ಟರು. ನನಗೆ ಗೊತ್ತಿದ್ದ ಹಾಗೆ, ಪಿ.ಡಬ್ಲ್ಯು.ಡಿ. ಅಧಿಕಾರಿಗಳು ರೆವಿನ್ಯು ಅಧಿಕಾರಿಗಳು ಜಾಯಿಂಟ್ ಇನ್ಸ್‌ಪೆಕ್ಷನ್ ಮಾಡಿ ಎಲ್ಲೆಲ್ಲಿ ನೀರು ಬಂದಿದೆ, ಎಲ್ಲೆಲ್ಲಿ ನೀರು ಬಂದಿಲ್ಲ, ಎಕ್ಸ್‌ಪಾರ್ಟಿ ಡಿಸಿಷನ್ ಆಗಿದೆ ಎಂದು ನೋಡಿ ಆದೇಶ ಮಾಡುತ್ತಾರೆ ಎನ್ನುವ ಮಾತನ್ನು ರೈತರಿಗೆ ಕೊಟ್ಟರು. ಆದರೆ ಮುಂದೆ ಕೃತಿಯಲ್ಲಿ ಬಂದಿಲ್ಲ. ತಾವು ಹೇಳಿದರೂ ಕೂಡ ಇದುವರೆಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಕರ್ನಾಟಕ ರೈತರು ಎರಡು ತಿಂಗಳವರೆಗೆ ಸತತವಾಗಿ ಉಪವಾಸ ಸತ್ಯಾಗ್ರಹ ಮಾಡಿದರೂ ರಾಜ್ಯದ ಒಬ್ಬ ಮಂತ್ರಿ ಹೋಗಿ ಅವರನ್ನು ಭೆಟ್ಟಿಯಾಗತಕ್ಕ ಸೌಜನ್ಯವಿಲ್ಲ ಎಂದು ನಾನು ಕೇಳುತ್ತೇನೆ. ಎನ್.ಜಿ.ಓ. ೧೦ ಜನ ವಿಧಾನಸೌಧಕ್ಕೆ ಬಂದರೆ ಮಾತನಾಡುತ್ತೀರಿ, ಕಾರ್ಮಿಕ ಸಂಘದವರಿಗೆ ಮಾತನಾಡಿಸುತ್ತೀರಿ, ೫ ತಾಲ್ಲೂಕಿನ ರೈತರು ಸಂಘಟಿತರಾಗಿ ತಹಶೀಲ್ದಾರ್ ಆಫೀಸ್ ಮುಂದೆ ಎರಡು ತಿಂಗಳಿಂದ ಪ್ರತಿನಿತ್ಯ ತಂಡತಂಡವಾಗಿ ಬಂದು ಉಪವಾಸ ಕೂತಿದ್ದಾರೆ. ಅಲ್ಲಿಗೆ ಯಾರಾದರೂ ಹೋದರೆ, ಯಾರಾದರೂ ವಿಚಾರಣೆ ಮಾಡಿದರೆ, ಅವರ ಬೇಡಿಕೆಗಳನ್ನು ಕೇಳಿದರೆ, ಅನ್ಯಾಯ ಹೇಗೆ ಆಗಿದೆ ಎಂದು ಕೇಳಿದರೆ ಇಲ್ಲ. ಕೊನೆಗೆ ಅವರು ೨೧ನೇ ತಾರೀಖಿಗೆ ಸಂಪೂರ್ಣವಾಗಿ ಹರತಾಳ ಮಾಡತಕ್ಕ ಕರೆ ಕೊಟ್ಟರು; ಕರೆ ಕೊಟ್ಟ ನಂತರ ಶಾಂತರೀತಿಯಿಂದ ಎಲ್ಲಾ ಕಡೆಗೂ ಹರತಾಳ ಆಯಿತು. ನರಗುಂದ್‌ದಲ್ಲಿ ಮೆರವಣಿಗೆ ಹೋಗುತ್ತಾ ಇದ್ದಾರೆ ಸಾವಿರಾರು ಜನರು ಒಟ್ಟಿಗೆ ಕೂತಿದ್ದಾರೆ ಉಪವಾಸ ಕೂತಂಥ ಜನರ ಮುಂದೆ ಪ್ರದರ್ಶನ ಮಾಡತಕ್ಕ ಜನ ಬರುತ್ತಾರೆ, ನೀವು ಏಳಬೇಕು ಎಂದು ಪೋಲೀಸ್ ಅಧಿಕಾರಿಗಳು ಹೇಳಿದರು. ಅದಕ್ಕೆ ಅವರು ಒಪ್ಪಲಿಲ್ಲ. ನಮ್ಮ ಬೇಡಿಕೆಗಳಿಗೆ ಸರ್ಕಾರದಿಂದ ಉತ್ತರ ಬರಬೇಕು ಅಲ್ಲಿಯವರೆಗೆ ಹೋಗುವುದಿಲ್ಲ ಎಂದಾಗ ಅವರು ಲಾಠಿಚಾರ್ಜ್ ಮಾಡಿ ಹೋದವರ ಮೇಲೆ ಅನ್ಯಾಯವಾಗಿ ಪೋಲೀಸ್ ಅಧಿಕಾರಿಗಳು ಕ್ರಮ ತೆಗೆದುಕೊಂಡರೆ ಸಾವಿರಾರು ಜನರು ಕೂತಾಗ ಲಾಠಿಚಾರ್ಜ್ ಮಾಡಿದರೆ ವಾತಾವರಣ ಹೇಗೆ ಆಗುತ್ತದೆ ಎಂಬುದನ್ನು ತಾವು ಆಲೋಚನೆ ಮಾಡಬೇಕು. ಸಾಮಾನ್ಯವಾಗಿ ಕಲುಷಿತ ವಾತಾವರಣ ಉಂಟಾಗಿ, ಗಲಭೆ ಗಲಾಟೆಯಾದಾಗ ಕೆಲವು ಪುಂಡರು ಇದರ ಅವಕಾಶವನ್ನು ದುರುಪಯೋಗ ಮಾಡಿಕೊಂಡಿದ್ದಾರೆ, ಕಲ್ಲು ಎಸೆದಿದ್ದಾರೆ. ಈ ಗಲಭೆಯಲ್ಲಿ ಪೋಲೀಸ್ ಅಧಿಕಾರಿಗಳೂ ಸತ್ತಿದ್ದಾರೆ, ರೈತರೂ ಸತ್ತಿದ್ದಾರೆ. ನಾನು ಇದರಲ್ಲಿ ಯಾವುದೇ ಒಂದು ತಪ್ಪು ಮಾಡಿದವರನ್ನು ರಕ್ಷಣೆ ಮಾಡಬೇಕು ಎಂದು ಹೇಳುತ್ತಾ ಇಲ್ಲ. ಚಳುವಳಿಯ ಹಿನ್ನೆಲೆಯಲ್ಲಿ ಶಾಂತರೀತಿಯಿಂದ ಚಳುವಳಿಯನ್ನು ಮಾಡಿದಂಥ ರೈತರ ಮೇಲೆ ಆದಂಥ ಅತ್ಯಾಚಾರಕ್ಕೆ ಪರಿಹಾರ ಎಲ್ಲಿ ಎಂದು ನಾನು ಕೇಳುತ್ತೇನೆ. ಆ ಭಾಗದ ರೈತರು ಕಂಗಾಲಾಗಿದ್ದಾರೆ, ಗಾಬರಿಯಾಗಿದ್ದಾರೆ, ಅಧಿಕಾರಿಗಳು ದಬ್ಬಾಳಿಕೆ ನಡೆಸತಕ್ಕ ಪ್ರಯತ್ನ ನಡೆದಿದೆ, ಸರಿಯಾದ ವರದಿ ಇಲ್ಲ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ವರದಿಯನ್ನು ತರಿಸಿಕೊಳ್ಳುತ್ತಾರೆ ಅದನ್ನು ಸಭೆಯ ಮುಂದೆ ಇಡುತ್ತಾರೆ. ಅವರ ಹೇಳಿಕೆಯನ್ನು ನಾನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ತಮಗೆ ಬರತಕ್ಕ ವರದಿಯಲ್ಲಿ ಪೋಲೀಸ್ ಅಧಿಕಾರಿಗಳು ನಿಜ ಸಂಗತಿಯನ್ನು ಬಚ್ಚಿಟ್ಟು, ಈ ವಾತಾವರಣ ಹೇಗೆ ಆಯಿತು, ಈ ವ್ಯವಸ್ಥೆ ಏಕೆ ಆಯಿತು ಎನ್ನುವ ಜವಾಬನ್ನೇ ಮುಚ್ಚಿಡುತ್ತಾರೆ. ರೈತರು ಹ್ಯಾಂಡ್ ಬಿಲ್ ಹಂಚಿದ್ದಾರೆ, ನೋಟೀಸ್ ಕೊಟ್ಟಿದ್ದಾರೆ, ಮೆರವಣಿಗೆ ಯಾವರೀತಿ ತೆಗೆಯುತ್ತಾರೆ, ಹರತಾಳ ಯಾವರೀತಿ ಮಾಡುತ್ತಾರೆಂದು ಹೇಳಿದ್ದಾರೆ. ಅಲ್ಲಿ ಸಾಕಷ್ಟು ಪೋಲೀಸ್ ಪಡೆ ಇಲ್ಲ. ಇಂತಹ ಒಂದು ಮೆರವಣಿಗೆ, ಸಭೆ ಆದಾಗ ಅಧಿಕಾರಿಗಳು ಮುಂಜಾಗ್ರತೆ ಕ್ರಮ ತೆಗೆದುಕೊಂಡಿಲ್ಲ. ಪೋಲೀಸ್ ಅಧಿಕಾರಿಗಳು ಶಾಂತರೀತಿಯಿಂದ ಇರತಕ್ಕ ಜನರನ್ನು ಕೆಣಕಿದ ಮೇಲೆ ಈರೀತಿ ಗಲಭೆಯಾಗಿದೆ. ಇವತ್ತು ರೈತ ಮಣ್ಣಿನ ಮಗ, ಬೇಡಿಕೆಯನು ಕೇಳಿದರೆ ಗುಂಡಿನೇಟು ಕೊಡತಕ್ಕದ್ದು ಸರ್ಕಾರದ ನೀತಿಯೇ ಎಂದು ಕೇಳಬಯಸುತ್ತೇನೆ. ಮಾನ್ಯ ಗುಂಡೂರಾಯರನ್ನು ನಾವೆಲ್ಲಾ ಕೆಲವು ವಿಚಾರಗಳಲ್ಲಿ ಮೆಚ್ಚಿಕೊಂಡಿದ್ದೇವೆ. ನ್ಯಾಯಕ್ಕೆ ಅನುಗುಣವಾಗಿ, ನೀತಿಗನುಗುಣವಾಗಿ ನಿಲುವನ್ನು ತೆಗೆದುಕೊಂಡು ಏನು ಮಾಡಬೇಕೋ ಅದನ್ನು ಮಾಡುತ್ತಾರೆನ್ನುವ ಭರವಸೆ ನಮಗಿದೆ. ತಮ್ಮ ರಾಜ್ಯದಲ್ಲಿ ಮಣ್ಣಿನ ಮಗನಿಗೆ ಗುಂಡು ಹಾಕಿದ ಪ್ರಕರಣ, ಇದು ಒಂದು ಕೆಟ್ಟ ಹೆಸರು ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಇದು ಕಳಂಕವಾಗಿದೆ. ರೈತನ ರಕ್ತ ಏನು ಬಿದ್ದಿದೆ, ಅದು ಭುಗಿಲೆದ್ದು ರಾಜ್ಯದ ಎಲ್ಲಾ ರೈತರ ಕ್ರಾಂತಿಯಾಗುತ್ತದೆ ಎಂದು ನಾನು ನಿನ್ನೆ ಹೇಳಿದ್ದೇನೆ. ಇಲ್ಲಿ ಒಪ್ಪದೇ ಹೋದರೆ ಧರಣ ಮಾಡಬೇಕಾಗಿ ಬರಬಹುದು ಎಂದು ಕೂಡ ಹೇಳಿದೆ. ಮಾನ್ಯ ಅರ್ಥ ಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯ್ಲಿಯವರಿಗೂ ಹೇಳಿದೆ.

ಅವರು ಬೇರೆ ಬೇರೆ ರಾಜ್ಯದ ರೈತರ ಸೌಕರ್ಯಗಳನ್ನು ಕೂಡಿಸಿ ಅಧಿವೇಶನ ಮುಗಿಯುವುದರೊಳಗಾಗಿ ಕೊಡುತ್ತೇನೆಂದು ಹೇಳಿದರು. ರೈತರು ಕಂಗಾಲಾಗಿದ್ದಾರೆ, ಅವರ ಕೈ ಮುರಿಯುತ್ತಿದೆ ಎಂದು ಹೇಳಿದರೂ ಸರ್ಕಾರದಿಂದ ಯಾವುದೇ ರೀತಿಯ ಮನ್ನಣೆ ಸಿಕ್ಕಲಿಲ್ಲ ಎಂದು ನಾನು ಹೇಳಬೇಕಾಗುತ್ತದೆ.

(SRI H. T. KRISHNAPPA IN THE CHAIR)

ನಾನು ಈ ವಿಚಾರವನ್ನು ಪಕ್ಷದ ದೃಷ್ಟಿಯಿಂದ ಹೇಳುತ್ತಿಲ್ಲ. ರಾಜ್ಯದ ಬಹುಪಾಲು ಜನರು ರೈತರೇ, ರೈತರ ಸಮಸ್ಯೆಗಳ ಪರಿಹಾರಕ್ಕೆ ನ್ಯಾಯ ಸಿಕ್ಕಬೇಕಾಗುತ್ತದೆ. ರೈತರ ಈ ಚಳುವಳಿ ಏನಿದೆ, ಇದು ಶಾಂತಯುತವಾಗಿ ಸಂಘಟನೆಯಾಗುವುದಕ್ಕೆ ಪ್ರೋತ್ಸಾಹ ಕೊಡಬೇಕಾಗುತ್ತದೆ ಇದಕ್ಕೆ ಸರ್ಕಾರದ ಸರಿಯಾದ ಪ್ರೋತ್ಸಾಹ ಕೊಡದೇ ಹೋದರೆ, ಅವರಿಗೆ ನ್ಯಾಯವನ್ನು ದೊರಕಿಸಿ ಕೊಡದೇ ಹೋದರೆ ರಾಜ್ಯದ ತುಂಬಾ ರೈತರು ಹೋರಾಟ ಮಾಡಬೇಕಾದೀತು. ಆದುದರಿಂದ ಅದನ್ನು ತಪ್ಪಿಸಿ ಎಂದು ಸರ್ಕಾರದವರಲ್ಲಿ ಒತ್ತಾಯಪಡಿಸುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ಈ ಘಟನೆಯ ಬಗ್ಗೆ ನರಗುಂದ ಮತ್ತು ಸವದತ್ತಿ ಈ ಎಲ್ಲಾ ಭಾಗಗಳಲ್ಲಿ ನಡೆದ ಫೈರಿಂಗ್ ಬಗ್ಗೆ ಒಂದು ಜುಡಿಶಿಯಲ್ ಪ್ರೋಬ್ ಹೈಕೋರ್ಟ್ ಜಡ್ಜ್‌ರವರ ಅಧ್ಯಕ್ಷತೆಯಲ್ಲಿ ಆಗಬೇಕು. ಎರಡನೆಯದಾಗಿ ಕೂಡಲೇ ಈ ಮನೆಯ ಒಂದು ಸಮಿತಿಯನ್ನು ಮಾಡಿ. ಅವರು ಆ ಸ್ಥಳಕ್ಕೆ ಹೋಗಿ ಭೇಟಿ ಮಾಡಿ ಅಲ್ಲಿಯ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ಅಲ್ಲಿಯ ಸಂಗತಿಗಳನ್ನು ತಿಳಿದುಕೊಂಡು ಅಲ್ಲಿರುವ ಸಾರ್ವಜನಿಕರಲ್ಲಿ ಮತ್ತು ರೈತರಲ್ಲಿ ಏನೊಂದು ವಾತಾವರಣ ಉಂಟಾಗಿದೆ ಅದನ್ನು ನಿರ್ಮೂಲನ ಮಾಡುವುದಕ್ಕೆ ಮತ್ತು ಪುನಹ ಅಲ್ಲಿ ಶಾಂತಿಯ ವಾತಾವರಣವನ್ನು ವ್ಯವಸ್ಥೆ ಮಾಡುವುದಕ್ಕೆ ಈ ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸುವುದು ಅವಶ್ಯಕವಿದೆ. ಮೂರನೆಯದಾಗಿ ಪೋಲೀಸ್ ಅಧಿಕಾರಿಗಳು ಕರ್ತವ್ಯ ಚ್ಯುತಿ ಮಾಡಿದ್ದಾರೆ, ಸಾಕಷ್ಟು ಇದರ ಬಗ್ಗೆ ಮುಂಜಾಗ್ರತೆಯನ್ನು ವಹಿಸಿಲ್ಲ. ಏತಕ್ಕೆಂದರೆ ಅಲ್ಲಿ ಶಾಂತ ರೀತಿಯಲ್ಲಿ ಪ್ರದರ್ಶನ ಮಾಡತಕ್ಕ ಜನರನ್ನು ಕೆಣಕಿ ಪ್ರಚೋದನೆ ಮಾಡಿ ಪರಿಸ್ಥಿತಿಯನ್ನು ಹದಗೆಡಿಸಿದ್ದಾರೆ ಅವರ ಮೇಲೆ ಕೂಡಲೇ ಕ್ರಮವನ್ನು ಕೈಗೊಳ್ಳಬೇಕು ಮತ್ತು ಸಂಬಂಧಪಟ್ಟವರನ್ನು ಸಸ್‌ಪೆಂಡ್ ಮಾಡಬೇಕು. ಮತ್ತು ಇವರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕೆಂದು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಸ್ವಾಮಿ, ಇದು ಕೇವಲ ನಮ್ಮ ಕ್ಷೇತ್ರದ.

(ಮಧ್ಯದಲ್ಲಿಗೊಂದಲ)

SRI M. C. BASAPPA.—Sir, on a point of order. We are discussing an adjournment motion, I want to know whether it is admissible or not.

(INTERRUPTIONS)

SRI BHASKAR NAIDU.—It is not an adjournment motion.

SRI B. V. KAKKILAYA.—Sri M. C. Basappa is arguing about the admissibility of the adjournment motion. Therefore, we have to discuss that first.

ಶ್ರೀ ವರಪ್ಪ ಕಳ್ಳಿಗುಡ್ಡ.—ಯಾವ ಭಾಗದಲ್ಲಿ ಗಲಾಟೆ ಆಗಿದೆ ಆ ಭಾಗದವರಿಗೆಮಾತನಾಡಲು ಅವಕಾಶ ಮಾಡಿಕೊಡಿ. ಧಾರವಾಡ ಜಿಲ್ಲೆಯಲ್ಲಿ ಗಲಾಟೆ ಆಗಿದ್ದರೆ ಮೈಸೂರಿನವರಿಗೆ ಮಾತನಾಡಲು ಕೊಟ್ಟರೆ ಹೇಗೆ ಸ್ವಾಮಿ?

ಛೇರ್ಮನ್.—ಮಾನ್ಯ ಮುಖ್ಯಮಂತ್ರಿಗಳವರು ಹೇಳಿದರು ಇದನ್ನು ಸರ್ಕಾರ ಒಂದು ಪ್ರತಿಷ್ಠಿತಪ್ರಶ್ನೆಯಾಗಿ ತೆಗೆದುಕೊಂಡಿಲ್ಲ. ಬೇಕಾದರೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಹೇಳಿದ್ದಾರೆ ವಿಷಯ ತುಂಬಾ ಗಂಭೀರವಾಗಿದೆ ಅದನ್ನು ಒಪ್ಪುತ್ತೇನೆ ಚರ್ಚೆ ಮಾಡೋಣ, ಸರ್ಕಾರ ಏನು ಮಾಡಿದೆ, ಏನು ಮಾಡಬೇಕು ಎಂಬುದರ ಬಗ್ಗೆ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನುಸೂಚಿಸಲಿ. ಮಾನ್ಯ ಶ್ರೀ

ಹಾರನಹಳ್ಳಿ ರಾಮಸ್ವಾಮಿಯವರು ಯಾವ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಎಂದು ಹೇಳುತ್ತಿದ್ದರು, ಅದು ಮುಖ್ಯವಲ್ಲ. ಅಲ್ಲಿ ಏನು ಘಟನೆ ನಡೆದಿದೆ ಅದರ ಬಗ್ಗೆ ಯಾವುದೋ ಒಂದು ಫಾರಂನಲ್ಲಿ ಚರ್ಚೆಯಾಗಬೇಕು, ಅದಕ್ಕಾಗಿ ವಿಶೇಷವಾದ ತಾಂತ್ರಿಕತೆಗೆ ಗಮನವನ್ನು ಕೊಡುವುದು ಬೇಡ. ಅದರ ಬಗ್ಗೆ ಹೆಚ್ಚಿನ ವಿವಾದಕ್ಕೆ ಹೋಗುವುದು ಬೇಡವೆಂದು ಹೇಳಿದ್ದೇನೆ, ಆದುದರಿಂದ ಚರ್ಚೆ ನಡೆಯುತ್ತಿದೆ. ಈಗ ಶ್ರೀಮಾನ್ ಬೊಮ್ಮಾಯಿರವರು ಏನು ನಡೆದಿದೆ ಎನ್ನುತಕ್ಕದರ ಬಗ್ಗೆ ಹೇಳಿದ್ದಾರೆ. ಆದುದರಿಂದ ಆಯಾಯಾ ಕ್ಷೇತ್ರಗಳಿಂದ ಬಂದಿರತಕ್ಕ ಸದಸ್ಯರುಗಳು ಸಹ ಅವರವರ ಅಭಿಪ್ರಾಯಗಳನ್ನು ಹೇಳುವುದರಿಂದ ಈ ಚರ್ಚೆಗೆ ಸ್ವಲ್ಪ ಇಂಬು ಕೊಟ್ಟ ಹಾಗಾಗುತ್ತದೆ. ಆದುದರಿಂದ ಈಗ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಇಲ್ಲಿ ಹೇಳುವುದಕ್ಕೆ ಪ್ರತಿಬಂಧಕ ಹಾಕತಕ್ಕಂಥದ್ದು ಸರಿಯಲ್ಲ.

(ಮಧ್ಯೆ ಗೊಂದಲ)

MR. CHAIRMAN.—Is this the way of respecting and co-operating with the Chair?

SRI K. BHASKAR NAIDU.—Sir, Government officials and police officers ...

MR. CHAIRMAN.—When I am standing, the hon. Members have no business to stand and speak.

SRI S. R. BOMMAI.—When we have given a motion and when it is a very serious matter......

CHAIRMAN.—Please resume your seat......

SRI S. R. BOMMAI.—On a point of order.......

SRI M.C BASAPPA.—I have already raised a point of order and I will substantiate it in a minute.

SRI B. B. SAYANAK.—Are you going to suspend rules?

SRI B. V. BHAVI.—Whether it is the propriety of some Members only to speak......

ಛೇರ್ಮನ್.—ನೀವು ಚರ್ಚೆ ಮಾಡಬೇಕೆಂದು ಇದ್ದೀರೋ ಅಥವಾ ಗಲಭೆ ಮಾಡಬೇಕೆಂದು ಇದ್ದೀರೋ?

(ಸಭೆಯಲ್ಲಿ ಗೊಂದಲ)

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ರೆಕಾರ್ಡ್ ಮಾಡಬೇಡಿ.

x x x

ಶ್ರೀ ಆರ್. ಗುಂಡೂರಾವ್.—ನಾನು ಆಗಲೇ ಹೇಳಿದೆ, ಎಲ್ಲವೂ ಸಮಾಧಾನದಿಂದ ನಡೆಯಲಿ ಎಂದು. ಪ್ರತಿಷ್ಠೆ ಪ್ರಶ್ನೆ ಮಾಡುವುದಾದರೆ ಮಾಡಿಕೊಳ್ಳಲಿ. I am agreeing and we can discuss the matter for one hour, two hours, 3 hours. What has happened? Where is the challenge? ನೀವು ಯಾರು ಮಾತನಾಡಬೇಡಿ, ನಾವೇ ಮಾತನಾಡುತ್ತೇವೆಂದರೆ ಇದರ ಅರ್ಥವೇನು?

(ಸಭೆಯಲ್ಲಿ ಭಾರೀ ಗೊಂದಲ)

---

* As directed by the Chair the matter was not recorded.

ಅಧ್ಯಕ್ಷರು.—ರೆಕಾರ್ಡ್ ಮಾಡಬೇಡಿ. ಈ ರೀತಿ ಒಬ್ಬರಿಗಿಂತ ಜಾಸ್ತಿ ಜನ ನಿಂತು ಮಾತನಾಡಿದ ರೆಕಾರ್ಡ್ ಆಗುವುದಿಲ್ಲ ಆದ್ದರಿಂದ, ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಶಾಂತಿಯಿಂದ ಚರ್ಚೆ ಮಾ ಈಗ ಈ ಮನೆಯ ನಾಯಕರು ಮಾತನಾಡುವುದಕ್ಕೆ ನಿಂತಿರುವಾಗ ಅವರು ಮಾತನಾಡಲಿ. ನಂತರ ನೀ ಮಾತನಾಡಿ. There is no use in being emotional.

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರುಗಳಿಗೆ ಅವರವರ ಕ್ಷೇತ್ರದಲ್ಲಿ ನಡೆದ ಘಟನೆಗ ಬಗ್ಗೆ ಮಾತನಾಡಬೇಕೆಂಬ ಆತುರ-ಕಾತುರ ಇರುವುದು ಸಹಜ. ಮಾನ್ಯ ಬೊಮ್ಮಾಯಿಯವರ ಹೇಳಿದ್ದಕ್ಕೆ ನಾನು ಮೊದಲೇ ಹೇಳಿದ್ದೇನೆ, ಇದರಲ್ಲಿ ಪಕ್ಷದ ಪ್ರಶ್ನೆಯಾಗಲೀ ಪ್ರತಿಷ್ಠೆಯ ಪ್ರಶ್ನೆಯಾಗಲಿ ಇಲ್ಲ: ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಮಾನ್ಯ ಬೊಮ್ಮಾಯಿಯವರು ಕೆಲವು ಸಲಹೆಗಳನು ಕೊಟ್ಟಿದ್ದಾರೆ. ಅಲ್ಲಿ ನಡೆದಿರತಕ್ಕ ಘಟನೆಗಳನ್ನು ನೋಡಿಕೊಂಡು ಬರುವ ಸಲುವಾಗಿ ಈ ಸದನ ಸದಸ್ಯರನ್ನು ಕಳುಹಿಸಬೇಕು, ಆ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು ಮತ್ತು ಅಲ್ಲಿ ಅಸು ನೀಗಿರ ವವರ ಕುಟುಂಬಕ್ಕೆ ಪರಿಹಾರಧನವನ್ನು ಕೊಡಬೇಕೆಂದು ಹೇಳಿದ್ದಾರೆ, ಈ ವಿಷಯ ಇಡೀ ದೇಶಕೆ ಸಂಬಂಧಪಟ್ಟದ್ದಾಗಿದೆ. ಆ ಕ್ಷೇತ್ರದಲ್ಲಿ ನಡೆದ ಘಟನೆ ಬಗ್ಗೆ ಆ ಕ್ಷೇತ್ರದ ಶಾಸಕರಿಗೆ ಚರ್ಚೆ ಮಾಡಬೇಕೆಂ ಆಸೆ ಸ್ವಾಭಾವಿಕವಾಗಿ ಇರುತ್ತದೆ. ಅವಕ್ಕೋಸ್ಕರ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾಗೆ. ಆದ ನೀವು ಯಾರೂ ಮಾತನಾಡಬೇಡಿ ಎಂದು ಹೇಳುವ ಮಾತು ಸರಿಯಲ್ಲ. ಬಹುಶಃ ಈ ಮಾತನ್ನು ಮಾನ ಬಸಪ್ಪನವರು ಹೇಳಿದರೆಂದು ಕಾಣುತ್ತದೆ.

(ಸಭೆಯಲ್ಲಿ ಮತ್ತೆ ಗೊಂದಲ)

SRI M. C. BASAPPA.—The Chief Minister has mentioned my nam and said that I am coming in the way of discussion It is no correct.

MR. SPEAKER.—When the Leader of the House is speaking how can you rise like this? Is it the way you are expected to behave i the House?

ಶ್ರೀ ಆರ್. ಗುಂಡೂರಾವ್.—ಈಗ ಮಾನ್ಯ ಬೊಮ್ಮಾಯಿಯವರು ಸಲಹೆ ಕೊಟ್ಟಿದ್ದಾರೆ. ಆ ವಿಚಾರದ ಬಗ್ಗೆ ಬೇಕಾದರೆ ಒಂದೆರಡು ಗಂಟೆಗಳ ಕಾಲ ಕುಳಿತು ಚರ್ಚೆ ಮಾಡೋಣ. ಅಲ್ಲಿ ಏನೇನ ನಡೆದಿದೆ ಎಂಬುದನ್ನು ಎಲ್ಲ ಮಾನ್ಯ ಸದಸ್ಯರುಗಳಿಂದ ಶಾಂತವಾಗಿ ಕೇಳೋಣ. ಯಾವ ಸದಸ್ಯರು ಅಲ್ಲಿಗೆ ಹೋದವರಲ್ಲ; ನಾವು ಕೂಡ ಹೋಗಿಲ್ಲ. ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ಫೋನ್ ಮೂಲ ತಿಳಿದುಕೊಂಡಿರಬಹುದು. ಚಳುವಳಿಗೂ, ನಡೆದಂತಹ ಘಟನೆಗೂ ಬಹಳ ವ್ಯತ್ಯಾಸ ಇರುತ್ತದೆ. ಕಳೆ ಐದಾರು ತಿಂಗಳಿಂದ ಮಾತ್ರವಲ್ಲ, ಎರಡು ವರ್ಷಗಳಿಂದಲೂ ಚಳುವಳಿ ನಡೆಯುತ್ತಿದೆ. ಅದೇನು ನಿನ್ನೆ ಮೊನ್ನೆಯ ಚಳುವಳಿಯಲ್ಲ. ೧೯೭೬ ರಿಂದಲೂ ಚಳುವಳಿ ನಡೆಯುತ್ತಿದೆ, ೧೯೭೭-೭೮ರಲ್ಲಿ ತೀವ್ರ ಸ್ವರೂಪ ತಾಳಿತು ೧೯೭೯ರಲ್ಲಿ ನಾನು ಹೋಗಿ ಅವರನ್ನು ಒಂದು ಸಾರಿ ಭೇಟಿ ಮಾಡಿದ್ದೆ. ಆ ಕ್ಷೇತ್ರದ ಮಾನ್ಯ ಸದಸ್ಯರುಗಳಾದ ಬಿ. ಆರ್. ಪಾಟೀಲರು, ಮುತ್ತಿನಪೆಂಡಿಯವರು, ಭಾವಿಯವರು ವೀರಣ್ಣನವರು-ಹೀಗೆ ಪ್ರತಿಯೊಬ್ಬರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದಾರೆ ಅದರ ಬಗ್ಗೆ ಏನ ತೀರ್ಮಾನ ಕೈಗೊಳ್ಳಬೇಕೆಂಬುದರ ಬಗ್ಗೆ ಸಹಾನುಭೂತಿಯಿಂದ ಇದ್ದೇವೆ. ಮೊದಲು ಯಾವ ರೀ ಮೆರವಣಿಗೆ ಬಂದರು, ನಂತರದ ಪ್ರಚೋದನೆಗೆ ಯಾರು ಕಾರಣರು, ಪೋಲೀಸರಿಗೂ ರೈತರಿಗೂ ಏ ರೀತಿ ಪರಿಸ್ಥಿತಿ ಏಕೆ ಬಂತು ಎಂಬುದನ್ನೆಲ್ಲಾ ಹೇಳಿದ ಮೇಲೆ ತಾನೆ ಚರ್ಚೆ ಮಾಡುವುದು? ಅದಕೆ ಮೊದಲೇ ಮಾಡುತ್ತೇವೆಂದರೆ, ನಿಮಗೆ ವಿಷಯವಾದರೂ ಹೇಗೆ ಗೊತ್ತಿರಬೇಕು. ನಿಮಗೆ ವರ ಬಂದಿದ್ದರೂ ಫೋನ್ ಮೂಲಕ ಬಂದಿರಬಹುದು. ಸಂಜೆ ನಡೆದ ಘಟನೆಯ ಸರಿಯಾದ ವರದಿ ಇಷ್ಟು ಬೇಗ ಯಾರಿಗೂ ಸಿಗುವುದಿಲ್ಲ. ತಮಗೆ ಸಿಕ್ಕಿರುವ ಮಾಹಿತಿ ಪ್ರಕಾರ ಪ್ರತಿಯೊಬ್ಬರೂ ಹತ್ತತ್ತು ನಿಮಿಷ ಮಾತನಾಡಬಹುದು; ಅದಕ್ಕೆ ನನ್ನದೇನು ವಿರೋಧವಿಲ್ಲ. ನಂತರ ಸರ್ಕಾರ ತನ್ನ ವರ ಯನ್ನು ಸಭೆಯ ಮುಂದಿಡುತ್ತದೆ. ಮತ್ತೆ ಸ್ಪಷ್ಟೀಕರಣ ಕೇಳಬಹುದು ಮತ್ತು ಸಲಹೆಗಳನ್ನು ಕೊಡಬಹುದು. ಹೀಗೆ ನಾವು ನೀವು ಚರ್ಚೆ ಮಾಡಿದ ನಂತರ ಮುಂದೆ ಯಾವ ರೀತಿ ಮಾಡಬೇಕೆಂಬುದನ್ನು ತೀರ್ಮಾನ ಮಾಡೋಣ, ಚರ್ಚೆ ಮಾಡುವುದು ಬೇಡವೆಂದು ಹೇಳಲಿಕ್ಕೆ ನಾನು ತಯಾರಿಲ್ಲ. ಈ

ಮಾನ್ಯ ಬೊಮ್ಮಾಯಿಯವರು ಮಾತನಾಡಿದರು, ನಂತರ ಮಾನ್ಯ ರಾಮಸ್ವಾಮಿಯವರು ಮಾತನಾಡಲಿ. ಏತಕ್ಕೆ ಈ ರೀತಿ ಆದ್ಯತೆ ಕೊಡುತ್ತೇವೆಂದರೆ, ಆಯಾಯ ಕ್ಷೇತ್ರದ ಶಾಸಕರಿಗೆ ಅಲ್ಲಿನ ಅಧಿಕಾರಿಗಳ ವಿಚಾರ ಮತ್ತು ಜನರ ಸಮಸ್ಯೆಗಳು ಚೆನ್ನಾಗಿ ಗೊತ್ತಿರುತ್ತವೆ ಎಂದು. ಜೊತೆಗೆ ಅಲ್ಲಿನ ಮುಖ್ಯ ಕಾರ್ಯಕರ್ತರು ಯಾರು ಎಂಬುದು ಗೊತ್ತಿರುತ್ತದೆ. ಅದಕ್ಕೋಸ್ಕರ ಆದ್ಯತೆ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುವುದು ಸ್ವಾಭಾವಿಕ. ಉದಾಹರಣೆಗೆ, ಮೊನ್ನೆ ಶ್ರೀನಿವಾಸಪುರದಲ್ಲಿ ನಡೆದ ಗಲಾಟೆಯ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡಿದರು. ಮಡಕೇರಿಯಲ್ಲಿ ಗಲಾಟೆಯಾದರೆ ಶ್ರೀಮಾನ್ ನಾಣಯ್ಯನವರು ಮಾತನಾಡುತ್ತಾರೆ. ಮೈಸೂರಿನಲ್ಲಿ ಗಲಾಟೆಯಾದರೆ ಶ್ರೀಮಾನ್ ಅಜೀಜ್ ಸೇಠ್ ಅವರು ಮಾತನಾಡುತ್ತಾರೆ. ಇದು ಸ್ವಾಭಾವಿಕ. ಸದನದಲ್ಲಿ ಇದು ನಡೆದುಬಂದ ಪದ್ಧತಿ. ನಾವೇ ಮಾತನಾಡಬೇಕು, ನೀವೇ ಮಾತನಾಡಬೇಕು ಎಂಬ ಪ್ರಶ್ನೆಯಿಲ್ಲ. ಪ್ರತಿಯೊಬ್ಬರೂ ಮಾತನಾಡಲಿ ಎಲ್ಲರ ಮಾತನ್ನೂ ಸರ್ಕಾರ ಪೂರ್ತಿ ಕೇಳುತ್ತದೆ. ನಂತರ ಸರ್ಕಾರದ ವರದಿಯನ್ನು ಅವರು ಕೇಳಲಿ. ಆಮೇಲೆ ಮಾನ್ಯ ಸದಸ್ಯರು ಏನಾದರೂ ವಿವರಣೆ ಕೇಳಲಿ, ಸಲಹೆ ಕೊಡಲಿ. ಕೊನೆಯಲ್ಲಿ ಏನು ಮಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡೋಣ. ಸುಮ್ಮನೆ ಏತಕ್ಕೆ ಗಡಿಬಿಡಿ ಮಾಡಿಕೊಳ್ಳಬೇಕು? ನಡೆದಂಥ ಘಟನೆ ಬಗ್ಗೆ ಎಲ್ಲರಿಗೂ ಸಹಾನುಭೂತಿ ಇದೆ. ರೈತರ ಬಗ್ಗೆ ಇಂಥಾದ್ದು ನಡೆಯಬಾರದಾಗಿತ್ತು. ಏತಕ್ಕೋಸ್ಕರ ನಡೆಯಿತು ಎಂಬ ಬಗ್ಗೆ ಮಾನ್ಯ ಸದಸ್ಯರು ವಿವರಣೆ ಕೊಟ್ಟಿದ್ದಾರೆ. ಆ ರೀತಿ ಗಲಾಟೆ ನಡೆಯಬೇಕು ಎಂದು ಆಸೆ ಯಾರಿಗೆತಾನೇ ಇರುತ್ತದೆ? ಬಡರೈತನಾಗಲೀ, ಬಡಕಾರ್ಮಿಕನಾಗಲೀ, ಕಾನ್‌ಸ್ಟೇಬಲ್ ಆಗಲೀ, ನೌಕರನಾಗಲೀ ಅಥವಾ ಒಬ್ಬ ಹುಡುಗನಾಗಲೀ ಯಾರೇ ಆಗಲಿ ಗುಂಡು ಹೊಡೆದು ಅಥವಾ ಲಾಠಿ ಚಾರ್ಜ್ ಮಾಡಿ ಸತ್ತುಹೋದರೆ ಅದನ್ನು ಒಳ್ಳೆಯ ವಿಷಯ ಎಂದು ಹೆಗ್ಗಳಿಕೆಯಿಂದ ಯಾರೂ ತೆಗೆದುಕೊಳ್ಳುವುದಿಲ್ಲ. ಯಾವಸರ್ಕಾರವೂ ಅದು ಒಳ್ಳೆಯ ವಿಷಯ ಎಂದು ಅದರ ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಪರಿಸ್ಥಿತಿ ಈ ತರಹ ಆಯಿತಲ್ಲ ಎಂಬ ವ್ಯಸನ ನಮಗೂ ಇದೆ, ನಿಮಗೂ ಇದೆ, ಎಲ್ಲರಿಗೂ ಇದೆ. ಆದ್ದರಿಂದ ಶಾಂತ ರೀತಿಯಿಂದ ಚರ್ಚೆ ಮಾಡೋಣ. ಅಲ್ಲಿ ನಡೆದ ಘಟನೆಗಿಂತ ಹೆಚ್ಚಾಗಿ ಆವೇಶಪೂರಿತವಾಗಿ ನಾವು ಹೊರಟು ಹೋದರೆ ವಿಷಯದ ಮಹತ್ವ ಹೊರಟು ಹೋಗುತ್ತದೆ. ವಿಷಯದ ಮಹತ್ವ ಹೋಗಬಾರದು. ಅದರ ಬಗ್ಗೆ ಸಾಕಷ್ಟು ಚರ್ಚೆ ಆಗಬೇಕು. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಸಲಹೆಗಳನ್ನು ಕೊಡಲಿ. ಸರ್ಕಾರ ಅದನ್ನು ಪರಿಶೀಲಿಸುತ್ತದೆ. ವರದಿ ಬಂದ ಮೇಲೆ ಚರ್ಚೆ ಮಾಡಿ ತೀರ್ಮಾನ ಮಾಡೋಣ. ಮಾನ್ಯ ಅಧ್ಯಕ್ಷರು ಯಾರ ಯಾರ ಹೆಸರನ್ನು ಕರೆಯುತ್ತಾರೋ ಅವರು ಎದ್ದು ಮಾತನಾಡಲಿ.

ಶ್ರೀ ಎಂ. ಸಿ. ಬಸಪ್ಪ.—ಒಂದೇ ಒಂದು ಮಾತು ಹೇಳುತ್ತೇನೆ.

ಅಧ್ಯಕ್ಷರು.—ನಾನು ಒಂದು ನಿರ್ಣಯ ತೆಗೆದುಕೊಳ್ಳುತ್ತಿದ್ದೇನೆ. ದಯಮಾಡಿ ಕುಳಿತುಕೊಳ್ಳಿ

ಶ್ರೀ ಎಂ. ಸಿ. ಬಸಪ್ಪ.—Sir, I have raised a Point of order. ಮಾನ್ಯ ಮುಖ್ಯ ಮಂತ್ರಿಗಳು ಒಂದು ದೀರ್ಘವಾದ ಹೇಳಿಕೆಯನ್ನು ಮಾಡಿ ನಮಗೆಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಹೇಳಿದ್ದಾರೆ. ವಿಷಯ ಚರ್ಚೆಯಾಗಬೇಕು, ಪರಿಹಾರ ಸಿಗಬೇಕು ಎಂದು ಹೇಳಿದ್ದಾರೆ. ನಾವು ಅದಕ್ಕೆ ಅಡ್ಡಿ ಮಾಡುತ್ತಿಲ್ಲ. ಎಲ್ಲರೂ ಕೂಡ ಅವರ ಜೊತೆಯಲ್ಲಿ ಸಹಕರಿಸುತ್ತೇವೆ. ಈಗ ಪ್ರಶ್ನೆ ಏನೆಂದರೆ regarding admissibility of the adjournment motion ಮೇಲೆ ಮಾತನಾಡಿ ಎಂದು ಹೇಳಿದಾಗ you are going to tell our members not to speak on merits, but speak on the point of admissibility. The point is this: now the Hon. Chief Minister has made abundantly clear that the motion may be adopted and it may be discussed on the floor of this House and it will be replied. So, I request the Speaker to please admit the adjournment motion.

MR. SPEAKER.—It is true that there is a notice for an Adjournment Motion. Some of the Hon. Members from the treasury benches also have given notice of an adjournment motion. There is a convention that the hon. members from the treasury benches cannot accuse

the government. Now, there are two issues. Firstly. there is an agitation and firing. ಅನೇಕ ಜನರನ್ನು ಉದ್ರೇಕ ಮಾಡತಕ್ಕ ವಾತಾವರಣ ಇವೆ. I know this is a very important matter. There is not even an *iota* of doubt about it. ಆದ್ದರಿಂದ ಈ ವಿಚಾರದ ಬಗ್ಗೆ ನಿಲುವಳಿ ಸೂಚನೆಗೆ ಅವಕಾಶ ಕೊಡದೆ ಬೇರೆ ರೀತಿಯಲ್ಲಿ ರೂಲ್ ೫೯ ರ ಕೆಳಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಸಮಯ ಎಷ್ಟು ಬೇಕೆಂದು ಸಭೆ ನಿರ್ಧರಿಸುತ್ತದೋ ಅಷ್ಟು ಕೊಡುತ್ತೇನೆ, I am not against the wishes of the House. ತಮ್ಮ ಕಳಕಳಿ ಏನಿದೆ ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ತಾವು ಹೇಳುವುದನ್ನು ಹೇಳಿ ಈ ಕಡೆಯುವರು ಆ ಕಡೆಯುವರೂ ಇಬ್ಬರೂ ಮಾತನಾಡಲಿ. ನಂತರ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ಮತ್ತೆ ಸದಸ್ಯರಲ್ಲಿ ಏನಾದರೂ ಅನುಮಾನ ಇದ್ದರೆ ನಂತರ ಸ್ಪಷ್ಟೀಕರಣ ಕೇಳಬಹುದು. ಆದ್ದರಿಂದ ಈಗ ಚರ್ಚೆ ಮಾಡಿ ಮಾನ್ಯ ಸದಸ್ಯರು ತಮ್ಮ ಅಮೂಲ್ಯ ಸಲಹೆಗಳನ್ನು ಕೊಡಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಗಂಭೀರತೆ ಹೋಗಬಾರದು ಎಂಬ ದೃಷ್ಟಿಯಿಂದ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ, ಆ ಕಡೆ ಸದಸ್ಯರಾಗಲೀ ಈ ಕಡೆ ಸದಸ್ಯರಾಗಲೀ ಯಾರು ಮಾತನಾಡಬೇಕು ಯಾರು ಮಾತನಾಡಬಾರದು ಎಂಬ ಪ್ರಶ್ನೆಯಿಲ್ಲ. ಎಲ್ಲರೂ ಮಾತನಾಡೋಣ. ಆ ಮತ ಕ್ಷೇತ್ರದ ಸದಸ್ಯರೂ ಮಾತನಾಡುವುದಕ್ಕೆ ಅವಕಾಶ ಕೊಡೋಣ. ಆದರೆ ನಿಲುವಳಿ ಸೂಚನೆಗೆ ಅವಕಾಶ ಕೋರಿ ನೋಟೀಸ್ ಕೊಟ್ಟಿರುವ ವಿರೋಧಪಕ್ಷದವರಿಗೆ ಮೊದಲ ಪ್ರಾಶಸ್ತ್ಯ ಕೊಡತಕ್ಕ ಸಂಪ್ರದಾಯ ಮೊದಲಿನಿಂದ ಇದೆ. ಆದ್ದರಿಂದ ಮೊದಲು ವಿರೋಧಪಕ್ಷದ ಕಡೆಯಿಂದ ಒಬ್ಬರು ಮಾತನಾಡಿದಮೇಲೆ ನಂತರ ಆಡಳಿತ ಪಕ್ಷ ಸದಸ್ಯರಿಗೆ ಅವಕಾಶ ಕೊಡಿ.

(ಆಡಳಿತ ಪಕ್ಷದ ಸದಸ್ಯರು ಹತ್ತಾರು ಜನ ಒಟ್ಟಿಗೆ ಮಾತನಾಡತೊಡಗಿದರು)

ಅಧ್ಯಕ್ಷರು.—ಅವರು ಹೇಳುವುದನ್ನು ಹೇಳಲಿ. ಅದಕ್ಕೆ ಅವರಿಗೆ ಹಕ್ಕಿದೆ. ನಿರ್ಣಯ ತೆಗೆದುಕೊಳ್ಳುವವನು ನಾನು. ನೀವು ಹೀಗೆ ಏತಕ್ಕೆ ಎದ್ದುನಿಂತು ಕೂಗುತ್ತೀರಿ? ಸಮಾಧಾನವಾಗಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ನಾವೆಲ್ಲಾ ಶಾಂತರೀತಿಯಿಂದ ಕುಳಿತು ಕೇಳಿದ್ದೇವೆ. ಅದೇ ರೀತಿ ನನ್ನ ಮಾತನ್ನೂ ನೀವು (ಆಡಳಿತ ಪಕ್ಷದವರು) ಕೇಳಬೇಕು. ನಾನು ಏನು ಹೇಳುತ್ತಿದ್ದೇನೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಆ ಕಡೆ ಸದಸ್ಯರು ಚರ್ಚೆ ಮಾತಡುವುದಕ್ಕೆ ನನ್ನ ವಿರೋಧವಿಲ್ಲ. ಈ ಕಡೆ ವಿರೋಧಪಕ್ಷದ ಸದಸ್ಯರು ಆ ಕಡೆ ಸದಸ್ಯರು ಮಾತನಾಡುವುದಕ್ಕೆ ಅಡ್ಡಿಯಾಗಿದ್ದಾರೆ ಎಂಬುದನ್ನು ತೆಗೆದುಹಾಕಿ. ಆ ಅಭಿಪ್ರಾಯ ಬೇಡ. ಎಲ್ಲರೂ ಭಾಗವಹಿಸೋಣ. ಶಾಂತರೀತಿಯಿಂದ ಚರ್ಚೆ ಮಾಡೋಣ. ಆದರೆ ಎಲ್ಲರೂ ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಕೆಲವೊಂದು ರೂಢಿಗಳನ್ನು ಮೊದಲಿನಿಂದ ನಡೆಸಿಕೊಂಡುಬಂದಿದ್ದೇವೆ. ಅದರಂತೆ ನಡೆದುಕೊಳ್ಳೋಣ. ನಿಲುವಳಿ ಸೂಚನೆ ಕೊಟ್ಟಾಗ ಸೂಚನೆ ಕೊಟ್ಟವರು ಮೊದಲು ಮಾತನಾಡಿ ಆಮೇಲೆ ಆ ಕಡೆ ಆಡಳಿತಪಕ್ಷದ ಕಡೆಯವರು ಮಾತನಾಡಬೇಕು. ರೂಲ್ ೫೯ರ ಕೆಳಗೆ ಚರ್ಚೆಗೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಾರೆ. ಇದನ್ನು ಮಾಡುವಾಗ ಮೊದಲ ಪ್ರಾಶಸ್ತ್ಯ ವಿರೋಧ ಪಕ್ಷದವರಿಗೆ ಕೊಡುವುದು ಸಂಪ್ರದಾಯ. ಇದು ಸರ್ವೆಸಾಧಾರಣವಾಗಿ ನಡೆದುಕೊಂಡುಬಂದ ಪದ್ಧತಿ. ವಿರೋಧಪಕ್ಷದವರು ಮಾತನಾಡಿದಮೇಲೆ ಅವರಿಗೆ ಅವಕಾಶ ಕೊಡಬಹುದು.

MR. SPEAKER.—I have admitted the matter to be discussed under rule 59 of the Rules of Procedure and Conduct of Business in the Karnataka Legislative Assembly. Now, I call upon Sri C.S. Muthinapendimath.

†ಶ್ರೀ ಮುತ್ತಿನ ಪೆಂಡಿಮಠ್ (ಗದಗ).—ಸನ್ಮಾನ್ಯ ಅಧ್ಯಕ್ಷರೇ, ಈ ಘಟನೆಯ ಗಂಭೀರತೆಯನ್ನು ರ್ಥ ಮಾಡಿಕೊಂಡು ಯಾವುದೇ ನಿಯಮಗಳನ್ನು ಮುಂದೆ ತಂದು ಅಡ್ಡಿ ಮಾಡದೇ ಚರ್ಚೆ ಾಡುವುದಕ್ಕೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸುತ್ತಾ ಘಟನೆಯ ಬಗ್ಗೆ ಂದೆರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ನರಗುಂದ, ನವಲಗುಂದ, ಸವದತ್ತಿ ಮತ್ತು ದಗ ಮುಂತಾದ ಭಾಗಗಳಲ್ಲಿ ನಡೆದಿರುವ ಘಟನೆ ಇಂದಿನ ಇತಿಹಾಸದಲ್ಲೇ ಆಗದಿರುವಂಥಾದ್ದು. ್ವಾತಂತ್ರ್ಯ ಪೂರ್ವದಲ್ಲಿ ಇಂಥ ಘಟನೆ ನಡೆದಿದ್ದು ಆದಾದನಂತರ ನಿನ್ನೆ ಆಗಿರುವುದು ಮೊದಲನೆಯದು. ರಗುಂದ, ನವಲಗುಂದದಲ್ಲಿ ರೈತರ ಸಮಸ್ಯೆ ಆದರೆ ಗದಗದಲ್ಲಿ ರೈತರನ್ನು ಒಳಗೊಂಡ ಕಾರ್ಮಿಕರ, ಡಜನರ, ಕೂಲಿಕಾರರ ಸಮಸ್ಯೆ ಯನ್ನೊಳಗೊಂಡ ಪ್ರಕರಣ. ಬೆಲೆ ಏರಿಕೆ ವಿರುದ್ಧ ಅಲ್ಲಿಯ ಜನ ಳುವಳಿ ಶುರು ಮಾಡಿದರು ನಿನ್ನೆ ದಿವಸ ಅಂಗಡಿಗಳನ್ನು ಬಂದ್ ಮಾಡಿ ಶಾಂತರೀತಿಯಿಂದ ಪ್ರದರ್ಶನ ಾಡಿದರು. ಈ ಪ್ರಕರಣದ ಬಗ್ಗೆ ಪೋಲೀಸರ ಮೇಲೆ ಅಪಾದನೆ ಮಾಡಿದರೆ ಅದು ತಪ್ಪಾಗುವುದಿಲ್ಲ. he insufficient police force is incapable to bring the situation under ontrol. ಪೋಲೀಸರ ವಿಚಾರದಲ್ಲಿ ಮಾನ್ಯ ಬೊಮ್ಮಾಯಿಯವರು ಏನು ಹೇಳಿದ್ದಾರೆ ಅದನ್ನು ನು ಸ್ವಾಗತ ಮಾಡುತ್ತಿದ್ದೇನೆ. ಅಲ್ಲಿ ೨೫–೩೦ ಎಸ್. ಟಿ. ಬಸ್ಸುಗಳನ್ನು ಲುಕ್ಸಾನು ಮಾಡಿದ್ದಾರೆ. ಂಗಡಿಗಳಿಗೆ ಲೂಟಿ ಮಾಡಿ ಬೆಂಕಿ ಹಚ್ಚಿದ್ದಾರೆ. ಫೈರಿಂಗ್ ಆಗಿ ೧೦–೧೫ ಜನ ಆಸ್ಪತ್ರೆಗೆ ದಾಖಲು ಾಗಿದ್ದಾರೆ. ಪೋಲೀಸ್ ಅಧಿಕಾರಿಗಳಿಗೂ ಏಟು ಬಿದ್ದಿದೆ. ಈ ಗಲಭೆಗೆಲ್ಲಾ ಪೋಲೀಸ್ ಅಧಿಕಾರಿಗಳೇ ರಣರೆಂದರೆ ತಪ್ಪಾಗಲಾರದು. ಆದ್ದರಿಂದ ಆದ ಘಟನೆಗಳ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಸಗಿಸಿಕೊಡುವುದಕ್ಕೆ ಅನುಕೂಲವಾಗುವಂತೆ ಮಾನ್ಯ ಬೊಮ್ಮಾಯಿಯವರು ಸೂಚಿಸಿದಂತೆ ಸದನದ ಮಿತಿಯನ್ನು ಮಾಡಿ ತಕ್ಷಣ ಅಲ್ಲಿಗೆ ಕಳುಹಿಸಿಕೊಡಬೇಕು. ಇದರ ಜೊತೆಗೆ ನರಗುಂದ ನವಲಗುಂದ, ವದತ್ತಿ ಮತ್ತು ಗದಗ್‌ನಲ್ಲಿ ನಡೆದ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು, ನೊಂದವರಿಗೆ ಆದಷ್ಟು ಗ್ರತೆ ಪರಿಹಾರವನ್ನು ಒದಗಿಸಿಕೊಡಬೇಕು. ಈ ಚಳುವಳಿ ಶುರುವಾಗುವುದಕ್ಕೆ ಮುಖ್ಯ ಕಾರಣ ಡಜನರಿಗೆ ಆದಂಥ ಅನ್ಯಾಯ ಎಂದರೆ ತಪ್ಪಾಗಲಾರದು. ಸರ್ಕಾರ ಈ ಬಗ್ಗೆ ತೀವ್ರರೀತಿಯಿಂದ ಮನ ಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧೦–೦೦ ಎ.ಎಂ.

† ಶ್ರೀ ಹಾನ್ನಳ್ಳಿ ರಾಮಸ್ವಾಮಿ (ಗಂಡಸಿ). —ಮಾನ್ಯ ಸಭಾಧ್ಯಕ್ಷರೇ, ಇದು ಬಹಳ ಗಂಭೀರವಾದ ಾರ. ಸಂಬಂಧಪಟ್ಟ ಕ್ಷೇತ್ರಗಳ ಸದಸ್ಯರುಗಳಿಗೆ ಮೊಟ್ಟಮೊದಲನೆಯದಾಗಿ ನಾನು ಅರಿಕೆ ಮಾಡಿ ಳ್ಳುತ್ತೇನೆ. ಇದು ಕೇವಲ ಆ ಕ್ಷೇತ್ರಗಳ ಸಮಸ್ಯೆಯಲ್ಲ. ಇದು ಇಡೀ ರಾಜ್ಯದ ಸಮಸ್ಯೆ. ಇದರಿಂದ ೀ ಸದನಕ್ಕೆ ಕಳವಳವಾಗಿದೆ. ರಾಜ್ಯದ ಎಲ್ಲ ರೈತವರ್ಗದವರಿಗೂ ಕಳವಳವಾಗಿದೆ. ಆದುದರಿಂದ, ಆ ತ್ರಗಳ ಜನ ಈ ಮನೆಯ ಪ್ರತಿಯೊಬ್ಬ ಸದಸ್ಯರೂ ಕಳವಳವನ್ನು ವ್ಯಕ್ತಮಾಡುವುದನ್ನು ಸ್ವಾಗತ ಡಬೇಕು. ನಮ್ಮ ದೇಶದಲ್ಲಾಗಲೀ ಅಥವಾ ಬೇರೆ ಯಾವುದೇ ದೇಶದಲ್ಲಾಗಲೀ ರೈತರು ಚಳವಳಿ ಡುವುದು ಬಹಳ ನಿಧಾನ. ಸಾಮಾನ್ಯವಾಗಿ ಅವರು ಚಳವಳಿ ಮಾಡುವುದೇ ಇಲ್ಲ. ರೈತರ ಸಂಘಟನೆ ಡುವುದು ಬಹಳ ಕಷ್ಟ. ಹೀಗಾಗಿ ಅವರು ತಮ್ಮ ದಿನನಿತ್ಯದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವು ್ಯಗುವುದಿಲ್ಲ. ಕೂಲಿಕಾರರಿಂದ ಚಳವಳಿಯಾಗಿದೆ. ಕಾರ್ಮಿಕರಿಂದ ಕ್ರಾಂತಿಯಾಗಿದೆ. ಆದರೆ, ತ್ತಿನ ಇತಿಹಾಸದಲ್ಲಿ ರೈತರಿಂದ ಚಳವಳಿಯಾಗಿರುವುದು ಬಹಳ ವಿರಳ. ಕಮ್ಯೂನಿಸ್ಟ್ ದೇಶವಾದ ಾದಲ್ಲಿ ಮಾತ್ರ ರೈತರ ಚಳವಳಿಯಾಗಿದೆಯೇ ಹೊರತು ಬೇರಾವ ದೇಶದಲ್ಲೂ ಆಗಿಲ್ಲ. ರೈತರಿಂದ ವಳಿ ನಡೆಯುವುದು ಬಹಳ ಕಷ್ಟ. ಈ ದೇಶದಲ್ಲಿ ನೂರಕ್ಕೆ ಎಂಬತ್ತರಷ್ಟು ಜನ ರೈತರಿದ್ದಾರೆ. ಅವರ ಸ್ಯೆಗಳ ಮೇಲೆ ಕ್ಷ-ಕಿರಣ ಈ ಚಳವಳಿಯಿಂದಾಗಿ ಬಿದ್ದಿದೆ. ಅದಕ್ಕಾಗಿ ನಾನು ರೈತರ ಚಳವಳಿಯನ್ನು ಗತ ಮಾಡುತ್ತೇನೆ. ಈ ಚಳವಳಿಯನ್ನು ಹತ್ತಿಕ್ಕಲು ತೆಗೆದುಕೊಂಡಿರುವ ಕ್ರಮ ಮತ್ತು ಯಾವುದೇ ಣವಿರಲಿ–ಸರ್ಕಾರಕ್ಕೂ ಮತ್ತು ರೈತರಿಗೂ ಘರ್ಷಣೆ ಸಂಭವಿಸಿರುವುದು ಅತ್ಯಂತ ಖಂಡನೀಯ ಸುದು. ರೈತರ ಚಳವಳಿಯನ್ನು ಹತ್ತಿಕ್ಕಲು ಪೋಲೀಸರು ಮತ್ತು ಅಧಿಕಾರವರ್ಗದವರು ಪ್ರಯತ್ನ ಡಿದರೆ ರೈತರಿಂದ ಏನು ಪ್ರತಿಕ್ರಿಯೆ ಬರುತ್ತದೆನ್ನುವುದನ್ನು ನಾವು ಈ ಘಟನೆಯಲ್ಲಿ ಕಂಡುಕೊಂಡ ್ಯೊಂದು ಪಾಠ. ಈ ಸಂದರ್ಭದಲ್ಲಿ ನಾವು ಈ ಸಮಸ್ಯೆಯನ್ನು ಮೇಲ್ನೋಟದಲ್ಲಿ ನೋಡಬಾರದು. ವ ಕಾರಣಕ್ಕಾಗಿ ರೈತರು ಚಳವಳಿಯನ್ನು ಮಾಡಿದ್ದಾರೆನ್ನುವುದನ್ನು ನಾವು ಮೊದಲು ನೋಡ

ಬೇಕಾಗಿದೆ. ಸಾಮಾನ್ಯವಾಗಿ ನೌಕರವರ್ಗದವರು ಕೇಳಿದ ತಕ್ಷಣ ಅವರ ಬೇಡಿಕೆಗಳಿಗೆ ಪರಿಹಾರ ಸಿಗುತ್ತದೆ; ವರ್ಷಕ್ಕೆ ಸುಮಾರು ೪೦-೫೦ ಕೋಟಿ ರೂಪಾಯಿಗಳ ಸಂಬಳ ಸಾರಿಗೆಗಳನ್ನು ಕೊಡಬೇಕೆಂದರೂ ನಾವು ಅದಕ್ಕೆ ಒಪ್ಪಿಗೆ ಕೊಡುತ್ತೇವೆ. ಆದರೆ, ವರ್ಷವೆಲ್ಲ ಮಳೆ ಇಲ್ಲದೆ, ನೀರಿಲ್ಲದ ಎರಡು-ನಾಲ್ಕು ಎಕರೆ ಭೂಮಿ ಇರತಕ್ಕ ರೈತ ಕೊನೆಗೆ ಕೂಲಿ ಮಾಡಿ ಜೀವನ ಮಾಡುವ ಪರಿಸ್ಥಿತಿಗೆ ಬಂದರೂ ನಾವು ಅವನಿಗೆ ಯಾವ ರಕ್ಷಣೆಯನ್ನೂ ನೀಡುವುದಿಲ್ಲ ; ಸವಲತ್ತುಗಳನ್ನು ಕೊಡುವುದಿಲ್ಲ. ಇದನ್ನೆಲ್ಲ ಎಲ್ಲಿಯವರೆಗೆ ರೈತ ತಡೆದುಕೊಳ್ಳುತ್ತಾನೆ? ಅವನ ತಾಳ್ಮೆ ಎಲ್ಲಿಯವರೆಗೆ ಕಾಯುತ್ತದೆ ? ರೈತರ ಸಮಸ್ಯೆಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳದೆ ಹೋದರೆ ಮತ್ತು ಈ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕೂಡಲೇ ಕಂಡು ಹಿಡಿಯದೆ ಹೋದರೆ, ರೈತ ಚಳವಳಿ ನಮ್ಮ ರಾಜ್ಯದಲ್ಲಷ್ಟೇ ಅಲ್ಲ, ರಾಷ್ಟ್ರದ್ಯಂತ ಹರಡುವುದರಲ್ಲಿ ಯಾವ ಅನುಮಾನವೂ ನನಗೆ ಕಾಣುತ್ತಿಲ್ಲ. ಈ ಸಮಸ್ಯೆಗೆ ಮೂಲಭೂತ ಕಾರಣಗಳನ್ನು ಕಂಡುಹಿಡಿದು, ಚಳವಳಿ ಮಾಡುತ್ತಿರುವ ರೈತರ ಮನಸ್ಸಿನಲ್ಲಿರುವ ಭಾವನೆಗಳನ್ನು ತಿಳಿದುಕೊಂಡು ಅವುಗಳನ್ನು ಬಗೆ ಹರಿಸಿದ್ದೇ ಆದರೆ ಮುಂದೆ ಇಂತಹ ಕೃತ್ಯಗಳು ನಡೆಯುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನರಗುಂದ, ನವಲಗುಂದ, ಹುಬ್ಬಳ್ಳಿ, ಗದಗದ ಕಡೆಗಳಲ್ಲಿ ನಡೆದ ಹಿಂಸಾಕೃತ್ಯಗಳಿಗೆ ರೈತರ ಮೇಲೆ ನಡೆದ ದಬ್ಬಾಳಿಕೆ ಮತ್ತು ಬಲಪ್ರದರ್ಶನವೇ ಕಾರಣ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ನಾವು ಅಲ್ಲಿ ಏನು ನಡೆದಿದೆ ಎಂದು ಊಹಿಸಿಕೊಳ್ಳುವುದಕ್ಕಾಗುವುದಿಲ್ಲ. ಘಟನೆಗಳ ಬಗ್ಗೆ ಪೂರ್ಣ ವಿವರಗಳನ್ನು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಈ ಸದನದ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ಸ್ಥಳಕ್ಕೆ ಕಳುಹಿಸಿ, ಸಂಪೂರ್ಣ ವಿಚಾರವನ್ನು ತಿಳಿದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡಬೇಕು. ವಿಚಾರಣಾ ಸಮಿತಿಗಳನ್ನು ಮಾಡುವುದರಲ್ಲಿ ನನಗೆ ನಂಬಿಕೆ ಇಲ್ಲ. ಸಮಿತಿಗಳನ್ನು ಮಾಡಿಬಿಟ್ಟರೆ ಸಮಸ್ಯೆಗಳು ನೆನೆಗುದಿಗೆ ಬಿದ್ದುಹೋಗುತ್ತವೆ. ಯಾವಾಗ ವರದಿ ಬರುತ್ತದೋ, ವರದಿಯಲ್ಲಿ ಏನಿರುತ್ತದೆಯೋ, ಎನ್ನುವುದು ಗೊತ್ತಾಗುವುದಿಲ್ಲ. ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಹೊರಟರೂ, ವಿಚಾರಣೆ ಮಾಡಿ ವರದಿ ಕೊಡುವುದಕ್ಕೆ ಆರು ತಿಂಗಳ ಮೇಲೆ ಆಗುತ್ತದೆ. ಇದರಿಂದ ಸಮಸ್ಯೆಯ ಕಾವು ಮುಗಿದು ಹೋಗಿ, ಸಂಬಂಧಪಟ್ಟವರಿಗೆ ಯಾವುದೇ ಪ್ರತಿಫಲ ದೊರಕುವುದಿಲ್ಲ. ಆದರೂ, ಯಾರು ಅನ್ಯಾಯವೆಸಗಿದ್ದಾರೆ ಯಾರು ದಬ್ಬಾಳಿಕೆ ನಡೆಸಿದ್ದಾರೆ ಎನ್ನುವುದನ್ನು ಕಂಡು ಹಿಡಿಯುವುದಕ್ಕಾಗಿ ವಿಚಾರಣೆ ಮಾಡುವುದು ಅಗತ್ಯ. ಏಕೆಂದರೆ, ಇಂತಹ ಕೃತ್ಯಗಳು ಮುಂದೆ ಎಂದೂ ನಡೆಯಬಾರದು. ಈ ಘಟನೆಯಲ್ಲಿ ನೊಂದವರಿಗೆ ಪರಿಹಾರ ಕೊಡಬೇಕು. ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು. ಸಮಸ್ಯೆಯ ಮೂಲಭೂತ ಕಾರಣಗಳನ್ನು ಹುಡುಕಿ ಅದನ್ನು ಬಗೆಹರಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ನಮ್ಮ ರಾಜ್ಯದಲ್ಲಿ ಬರುವ ಒಟ್ಟು ಆದಾಯದಲ್ಲಿ ಅರ್ಧ ಭಾಗದಷ್ಟು ಹಣವನ್ನು ಸರ್ಕಾರದ ಮತ್ತಿತರ ನೌಕರರ ಸಂಬಳ ಸಾರಿಗೆಗಾಗಿ ಕೊಡಲಾಗುತ್ತಿದೆ. ಒಟ್ಟು ಆದಾಯದಲ್ಲಿ ಇಪ್ಪತ್ತನೇ ಒಂದು ಭಾಗದಷ್ಟು ಹಣವನ್ನು ರೈತರಿಗೆ ಮೀಸಲಿಡುವ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲ. ರೈತರ ಸಾಲವನ್ನು ತಮಿಳುನಾಡಿನಲ್ಲಿ ವಜಾ ಮಾಡಿದಂತೆ ಇಲ್ಲಿ ಮಾಡುತ್ತಿಲ್ಲ. ಕಡಿಮೆ ಬೆಲೆಯ ಸಲಕರಣೆಗಳನ್ನು ಅವರಿಗೆ ಒದಗಿಸುವುದಕ್ಕಾಗಿಲ್ಲ. ಇದರಿಂದಾಗಿ ತಾಳ್ಮೆಯ ಮಿತಿಯ ಮೀರಿ ರೈತ ಹೋಗತಕ್ಕ ಪರಿಸ್ಥಿತಿ ಬಂದಿದೆ ; ಚಳವಳಿ ಪ್ರಾರಂಭ ಮಾಡಿದ್ದಾನೆ. ಎಲ್ಲ ಕಡೆಯ ರೈತರೂ ಚಳವಳಿ ಮಾಡಿದರೂ ಮಾಡಬಹುದು. ಆದರೆ, ಅದನ್ನು ಬೆಳಗೊಡುವುದು ಸರಿಯಲ್ಲ, ಇದು ಪಕ್ಷದ ಪ್ರಶ್ನೆಯಲ್ಲ. ನಮ್ಮ ನಿಮ್ಮ ವಿದ್ವತ್ತಿನ ಪ್ರಶ್ನೆಯಲ್ಲ. ಎಲ್ಲರೂ ಸೇರಿ ಸಮಸ್ಯೆಯ ಮೂಲಭೂತ ಕಾರಣವನ್ನು ಹುಡುಕಿ ಅದನ್ನು ಬಗೆಹರಿಸಬೇಕು. ನಿನ್ನೆ ಆಗಿರುವ ಕೃತ್ಯಗಳ ಬಗ್ಗೆ ತಾತ್ಕಾಲಿಕವಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

† ಶ್ರೀ ಮತ್ತಿಕಟ್ಟೆ (ರೋಣ).—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಈ ಘಟನೆಯಲ್ಲಿ ಪ್ರಾಣವನ್ನು ಕಳೆದುಕೊಂಡ ಮತ್ತು ಹಾನಿಗೊಳಗಾದ ಜನರಿಗೆ ಅನುಕಂಪವನ್ನು ವ್ಯಕ್ತಪಡಿಸುತ್ತೇನೆ ಮತ್ತು ಘಟನೆ ನಡೆದಿದ್ದಕ್ಕಾಗಿ ವಿಷಾದವನ್ನೂ ವ್ಯಕ್ತಪಡಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಶ್ರೀ ಬೊಮ್ಮಾಯಿ ಅವರು ಹೇಳಿದ ಹಾಗೆ ಇದು ೧೯೭೬-೭೭ ರಿಂದಲೂ ನಡೆದು ಬಂದ ಸಮಸ್ಯೆ. ಆ ಭಾಗದ ಸದಸ್ಯರುಗಳಿಗಾಗಿ ನಾವು ಅವರ ಸಮಸ್ಯೆಗಳನ್ನು ಹಲವಾರು ಬಾರಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಎಲ್ಲಿ ಕಾಲುವೆ ಇನ್ನೂ ಪೂರ್ತ ನಿರ್ಮಾಣವಾಗಿಲ್ಲ ಮತ್ತು ಯಾವ ಭೂಮಿಗೆ ಇನ್ನೂ ಸರಿಯಾಗಿ ನೀರನ್ನು ಕೊಟ್ಟಿಲ್ಲ. ಆ ಜಮೀನುಗಳಿಗೆಲ್ಲ ನೀರಾವರಿ ತೆರಿಗೆ ಮತ್ತು ಅಭಿವೃದ್ಧಿ ತೆರಿಗೆಯನ್ನು ಹಾಕಿದ್ದಾರೆ. ಸ್ಥಳಗಳಿಗೆ ಬಂದು ನೋಡದೆ ಕಛೇರಿಯಲ್ಲೇ ಕುಳಿತು ತೆರಿಗೆ ವಿಧಿಸಿರುವುದರಿಂದ ಇಂದು ಈ

ಸಮಸ್ಯೆ ನಿರ್ಮಾಣವಾಗಿದೆ, ಕಳೆದ ಎರಡು–ಮೂರು ವರ್ಷಗಳಿಂದ ಬೆಳೆ ಸರಿಯಾಗಿ ಬಾರದೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದ ರೈತರಿಗೆ ತಾವು ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಸಿಕ್ಕದಿದ್ದುದು ಅವರು ಎದುರಿಸುತ್ತಿದ್ದ ಸಮಸ್ಯೆ ಇನ್ನಷ್ಟು ಜಟಿಲವಾಗಲು ಕಾರಣವಾಯಿತು. ಇದನ್ನೆಲ್ಲ ಆಗಾಗ್ಗೆ ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ ಅಲ್ಲಿರತಕ್ಕ ಲೋಕೋಪಯೋಗಿ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು, ಸ್ವತಃ ಸ್ಥಳಕ್ಕೆ ಹೋಗಿ, ಪರಿಶೀಲನೆ ಮಾಡಿ ಸಮಸ್ಯೆಗಳಿದ್ದರೆ ಅವುಗಳನ್ನು ಬಗೆಹರಿಸ ಬೇಕೆಂದು ೧೯೭೭ ರಲ್ಲಿ ಸರ್ಕಾರ ತಿಳಿಸಿತ್ತು. ಆದರೆ, ಆ ಒಂದು ಕೆಲಸವಾಗದೆ ಇದ್ದುದರಿಂದ ಕಳೆದ ಒಂದು ತಿಂಗಳಿನಿಂದ ಶಾಂತಿಯುತವಾದ ಉಪವಾಸ ಸತ್ಯಾಗ್ರಹವನ್ನು ರೈತರು ಪ್ರಾರಂಭ ಮಾಡಿದರು. ರೈತರ ಹಲವಾರು ಬೇಡಿಕೆಗಳನ್ನು ಆ ಭಾಗದ ಶಾಸಕ ಮಿತ್ರರು ಸರ್ಕಾರದ ಮುಂದೆ ಇಟ್ಟರು. ಆದರೂ, ದುರಾದೃಷ್ಟವಶಾತ್ ಅಲ್ಲಿ ಘಟನೆ ನಡೆದು ಹೋಗಿದೆ. ರೈತರ ಸಮಸ್ಯೆಗಳಿಗೆ ಪರಿಹಾರ ದೊರೆಯಲೇ ಬೇಕು. ಅದಕ್ಕಾಗಿ ನಾವು ತೀವ್ರಗತಿಯಲ್ಲಿ ವಿಚಾರ ಮಾಡಬೇಕು. ನಿರಪರಾಧಿ ರೈತ ಜನಾಂಗ ಶಾಂತ ರೀತಿಯಲ್ಲಿ ಪ್ರತಿಭಟನೆ ಮಾಡಲು ಬಂದವರು. ನಾನು ಅವರಿಗೆ, ಶಾಂತ ರೀತಿಯಲ್ಲಿ ಪ್ರತಿಭಟನೆ ಮಾಡ ಬೇಕೆಂದು ದೂರವಾಣಿ ಮೂಲಕ ಮನವಿ ಮಾಡಿಕೊಂಡಿದ್ದೆ. ಸಾಧಾರಣ ಶೇಕಡ ೯೯ ರಷ್ಟು ಜನ ಅದೇ ರೀತಿ ಹೋಗಿದ್ದಾರೆ. ತಹಶೀಲ್ದಾರರ ಕಛೇರಿಗೆ ಹೋಗಿ ತಹಶೀಲ್ದಾರರಿಗೆ ಮನವಿಯನ್ನರ್ಪಿಸುವ ಮೂಲಕ ಸರ್ಕಾರದ ಗಮನವನ್ನು ಅವರ ಸಮಸ್ಯೆಗಳತ್ತ ಸೆಳೆಯಲು ಪ್ರಯತ್ನ ಮಾಡಿದ್ದಾರೆ. ಆ ಸಮಯದಲ್ಲಿ ದುರ್ದೈವದ ಘಟನೆ ನಡೆದಿದೆ. ಅಲ್ಲಿ ಈಗ ಇಬ್ಬರು ರೈತರು ಮತ್ತು ಇಬ್ಬರು ಸಬ್ ಇನ್‌ಸ್ಪೆಕ್ಟರುಗಳು ಸತ್ತಿದ್ದಾರೆ ಮತ್ತು ಹಲವಾರು ರೈತರಿಗೆ ಗಾಯಗಳಾಗಿವೆ. ಇದರ ಬಗ್ಗೆ ಸಂಪೂರ್ಣ ಮಾಹಿತಿ ನಮಗಿನ್ನೂ ಬಂದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಆದಷ್ಟು ಜಾಗ್ರತೆ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸದನದ ಪರವಾಗಿ ವಿನಂತಿ ಮಾಡಿಕೊಳ್ಳು ತ್ತೇನೆ ಅಭಿವೃದ್ಧಿ ತೆರಿಗೆಯನ್ನು ವಸೂಲುಮಾಡದಂತೆ ಕೂಡಲೇ ಆದೇಶ ಕೊಡಬೇಕು ಮತ್ತು ರೈತರ ಅತ್ಯಂತ ನಿಕಟ ಸಮಸ್ಯೆಗಳಿಗೆ ಕೂಡಲೇ ಪರಿಹಾರವನ್ನು ಕಂಡುಹಿಡಿಯಬೇಕು ಈ ಸಭೆಯ ಸದಸ್ಯರು ಗಳನ್ನೂ, ಬೇರೆ ಬೇರೆ ಪ್ರಾಜ್ಞರನ್ನೂ ಮತ್ತು ಗೃಹಖಾತೆ ಕಾರ್ಯದರ್ಶಿಯವರನ್ನೂ ಅಲ್ಲಿಗೆ ಕಳುಹಿಸಿ ಕೊಡಿ. ಅವರು ಅಲ್ಲಿಗೆ ಹೋಗಿ ತೀವ್ರಗತಿಯಿಂದ ವಿಚಾರ ಮಾಡಲಿ. ಶಾಂತ ರೀತಿಯಿಂದ ಪ್ರತಿಭಟನೆ ಮಾಡಲು ಹೋದ ರೈತರು ಇಂದು ದಿಕ್ಕು ಕಾಣದೆ ಕಂಗಾಲಾಗಿ ಕುಳಿತಿದ್ದಾರೆ. ನಮ್ಮ ಭಾಗದ ರೈತರಿಗೆ ಹೊಟ್ಟೆಗೆ ಹಿಟ್ಟಿಲ್ಲ, ತೊಡಲು ಬಟ್ಟೆ ಇಲ್ಲ. ಈ ಸಮಸ್ಯೆ ಬಗ್ಗೆ ಬಹಳಷ್ಟು ಸಹನೆಯಿಂದ, ಬಹಳ ಕಾಲ ದಿಂದ ಕೂತಿದ್ದರು. ಸಹನೆಯನ್ನು ಪರೀಕ್ಷೆ ಮಾಡಲು ಹೋದರೆ ಇನ್ನು ಗಂಡಾಂತರ ಮುಂದೆ ಕಾದಿದೆ ಎಂದು ಸದನದ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದು ಎಲ್ಲ ವರ್ಗದ ರೈತಾಪಿ ಜನಾಂಗದ ಸಮಸ್ಯೆ ಎಂದು ತಮ್ಮ ಮೂಲಕ ಮುಖ್ಯ ಮಂತ್ರಿಗಳಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಕೂಡಲೇ ರೈತರ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲೇ ಬೇಕು. ಇಲ್ಲಿ ಮಾನ್ಯ ಬಂಗಾರಪ್ಪನವರು ಇದ್ದಾರೆ ಹಣಕಾಸಿನ ಮಂತ್ರಿಗಳೂ ಇದ್ದಾರೆ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಪರಿಶೀಲಿಸಿ ತೀವ್ರವೇ ರೈತರ ಸಮಸ್ಯೆಗಳಿಗೆ ಸರ್ಕಾರ ನಿರ್ದಿಷ್ಟವಾದ ನಿಲುವನ್ನು ತೆಗೆದು ಕೊಂಡು ಪರಿಹಾರವನ್ನು ಕಂಡುಹಿಡಿಯಬೇಕು ಈ ಸದನದ ಸದಸ್ಯರುಗಳನ್ನು ಸ್ಥಳಕ್ಕೆ ಕಳುಹಿಸಿಕೊಟ್ಟು; ಅಲ್ಲಿ ನಡೆದಿರುವಂತ ಘಟನೆಗಳ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕೆಂದು ಸರ್ಕಾರವನ್ನು ಕಳಕಳಿ ಯಿಂದ ವಿನಂತಿಸಿಕೊಂಡು, ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಬಾಪೂರಾವ್ ದೇಶಪಾಂಡೆ (ಧಾರವಾಡ).—ಸನ್ಮಾನ್ಯ ಅಧ್ಯಕ್ಷರೇ, ನರಗುಂದ ಮತ್ತು ನವಲಗುಂದ, ಆ ಭಾಗದಲ್ಲಿ ನಡೆದಿರತಕ್ಕ ರೈತರ ಚಳುವಳಿಯ ಕಡೆಗೆ ಸರ್ಕಾರ ಯಾವ ದೃಷ್ಟಿಯಿಂದ ನೋಡಿದೆ ಎನ್ನುವುದು ಮೂಲಭೂತವಾದ ಪ್ರಶ್ನೆ. ಸಾವಿರಗಟ್ಟಲೇ ರೈತರು ಶಾಂತಿಯುತವಾಗಿ ತಿಂಗ ಳಾನುಗಟ್ಟಲೇ ಚಳುವಳಿ ಮಾಡುತ್ತಿದ್ದಾಗ ಯಾವ ಘಟನೆಯೂ ನಡೆಯಲಿಲ್ಲ ಸರ್ಕಾರದ ಅಧಿಕಾರಿ ಗಳು ಚಳುವಳಿಯನ್ನು ಹತ್ತಿಕ್ಕಿ ಶಹಬಾಷ್‌ಗಿರಿ ಪಡೆಯುವ ಸಲುವಾಗಿ ಗೋಲಿಬಾರ್ ಮಾಡಿ ೩ ಜನ ಸತ್ತಿದ್ದಾರೆಂದು ಸುದ್ದಿ ಬಂದಿದೆ ಇದು ನಿಜವಾಗಿಯೂ ಜನತಾ ಸರ್ಕಾರಕ್ಕೆ ಕಳಂಕ ಆಗಿರುವಂತ ಘಟನೆ, ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ೭೬ ನೇ ಇಸವಿಯಿಂದ ಚಳುವಳಿ ನಡೆದಿದೆ ಎರಡು ವರ್ಷಗಳ ಹಿಂದೆ ಕೆ. ಹೆಚ್. ರಂಗನಾಥ್‌ನವರು ನರಗುಂದಕ್ಕೆ ಬಂದಿದ್ದಾಗ ಮಲಪ್ರಭಾ ಯೋಜನೆಯ ಕೆಳಗೆ ಬರತಕ್ಕ ರೈತರ ಬಗ್ಗೆ ಕೆಲವು ಪ್ರಶ್ನೆಗಳನ್ನು ನಿರ್ದಿಷ್ಟವಾಗಿ ಇಡಲಾಗಿತ್ತು. ಆಗ ೧೦ ವರ್ಷಗಳ

ಬಾಕಿಯನ್ನು ವಸೂಲು ಮಾಡಬೇಡಿ ಎಂದು ತಿಳಿಸಿದ್ದರು. ಅಲ್ಲಿ ಮನೆಯಲ್ಲಿರತಕ್ಕ ಪಾತ್ರೆ ಪದಾರ್ಥಗಳನ್ನು ಅಧಿಕಾರಿಗಳು ಜಫ್ತಿ ಮಾಡಿದ್ದಾರೆ ಸರ್ಕಾರ ಏನು ಮಾಡುತ್ತಿತ್ತು ? ಇವತ್ತು ಆ ಭಾಗದಲ್ಲಿ ಗೋಲಿಬಾರ್ ಆಗಿರುವುದರಿಂದ ಇದು ಸರಿಯೋ ತಪ್ಪೋ ಎಂದು ತಾತ್ಕಾಲಿಕವಾಗಿ ವಿಚಾರ ಮಾಡುವುದಕ್ಕೆ ಆಗುವದಿಲ್ಲ. ಸರ್ಕಾರ ಈ ಸಮಸ್ಯೆ ಬಗ್ಗೆ ವಿಚಾರ ಮಾಡಬೇಕಾಗಿದ್ದರೆ ನರಗುಂದದ ಧ್ವನಿ ಬೆಂಗಳೂರು ವರೆಗೆ ಕೇಳಿಸಬೇಕಾಗಿತ್ತೇನೋ; ರೈತರ ಸಮಸ್ಯೆ ಬೃಹದಾಕಾರವಾಗಿ ಬೆಳೆದರೆ ಸರ್ಕಾರ ಉಳಿಯುತ್ತದೆಯೇ? ರೈತರು ಸರ್ಕಾರದ ಮುಂದೆ ತಮ್ಮ ನಿರ್ದಿಷ್ಟವಾದ ಬೇಡಿಕೆಗಳನ್ನು ಇಟ್ಟಿದ್ದಾರೆ. ಆ ಬೇಡಿಕೆಗಳಲ್ಲಿ ಬೆಟರ್‌ಮೆಂಟ್ ಲೆವಿ ಪ್ರಶ್ನೆ ಒಂದು. ನೀರುಗಂದಾಯ ವಜಾ ಮಾಡಿ ಎಂದು ಹೇಳಿದ್ದಾರೆ. ನೀರಾವರಿಯಾಗತಕ್ಕ ಪ್ರದೇಶಗಳಲ್ಲಿ ನೀರುಗಂದಾಯ ಹಾಕಿ, ಯಾರು ಬೇಡ ಎಂದು ಹೇಳುವುದಿಲ್ಲ. ಅಲ್ಲಿ ನೀರಾವರಿಯಾಗಿ ಸಮೃದ್ಧ ಬೆಳೆ ಬಂದರೆ ಬೆಟರ್‌ಮೆಂಟ್ ಲೆವಿ ಹಾಕುವುದರಲ್ಲಿ ನ್ಯಾಯ ಇದೆ, ಅಲ್ಲಿ ಕಾಲುವೆಗಳೇ ಇಲ್ಲ. ಅಲ್ಲಿನ ರೈತರಿಗೆ ವರಲಕ್ಷ್ಮೀ ಹತ್ತಿ ಬೀಜವನ್ನು ಸರ್ಕಾರ ಸರಿಯಾಗಿ ಪೂರೈಸುತ್ತಿಲ್ಲ, ರೈತರು ಸಾಲ ಮಾಡಿ ಹಣ ತೆಗೆದುಕೊಂಡು ಹೋಗಿ ಬೀಜ ಬಿತ್ತನೆ ಮಾಡಿ ಹತ್ತಿ ಬೆಳೆದಿದ್ದಾರೆ. ಸರ್ಕಾರದಿಂದ ಯಾವ ಸಹಾಯವೂ ಇಲ್ಲ. ಹೀಗಿರುವ ಲೆವಿ ಏತಕ್ಕೆ ಕೊಡಬೇಕು ? ವಾಟರ್ ಟ್ಯಾಕ್ಸ್ ಹಾಕಿದ್ದೀರಿ ಅದನ್ನು ಹೇಗೆ ಕೊಡಬೇಕು ? ಸರ್ಕಾರದವರು ಮತ್ತು ಮಂತ್ರಿಗಳು ಈ ಮನೆಯಲ್ಲಿ ಕೊಟ್ಟಿರತಕ್ಕ ಮತ್ತು ಬಹಿರಂಗ ಸಭೆಗಳಲ್ಲಿ ಕೊಟ್ಟಿರತಕ್ಕ ಅಶ್ವಾಸನೆಗಳಿಗೆ ವ್ಯತ್ಯಾಸ ಇದೆಯೋ ಇಲ್ಲವೋ ? ಸದನದಲ್ಲಿ ಕೊಟ್ಟಂತ ಆಶ್ವಾಸನೆಗಳು ಕಾರ್ಯರೂಪಕ್ಕೆ ಬರುವುದಿಲ್ಲ, ಇವತ್ತು ಅಲ್ಲಿ ಅಧಿಕಾರಶಾಹಿಯ ದರ್ಪ ನಡೆಯುತ್ತಿದೆ. ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಈ ಸಮಸ್ಯೆಗೆ ಮೂಲ ಪರಿಹಾರವನ್ನು ಸರ್ಕಾರ ಕಂಡು ಹಿಡಿಯಬೇಕೆಂದು ಹೇಳುತ್ತೇನೆ, ಶಾಂತವಾಗಿ ನಡೆಯುತ್ತಿದ್ದಂತ ಚಳುವಳಿಯ ಬಗ್ಗೆ ಸರ್ಕಾರವಾಗಲೀ, ಪೋಲೀಸಿನವರಾಗಲಿ ಹೇಗೆ ನಡೆದುಕೊಳ್ಳಬೇಕು ? ಕಳೆದ ಎರಡು ತಿಂಗಳುಗಳಿಂದ ಉಪವಾಸ ಸತ್ಯಾಗ್ರಹ ನಡೆಯುತ್ತಿದ್ದರೂ ಒಬ್ಬರೂ ಕೇಳುವವರೇ ಇಲ್ಲ ? ಅವರನ್ನು ಮಾತನಾಡಿಸುವವರೂ ಇಲ್ಲ. ರೈತರ ಚಳುವಳಿಯನ್ನು ನೀವು ಬಂದೂಕಿನಿಂದ ನಿಲ್ಲಿಸುತ್ತೇವೆಂದು ತಿಳಿದಿದ್ದರೆ ಅದು ಮಹಾ ತಪ್ಪಾಗುತ್ತದೆ. ಇದು ಮೂಲಭೂತವಾದ ಪ್ರಶ್ನೆಯಾದುದರಿಂದ ಅಧಿಕಾರಿಗಳನ್ನು ದೂರ ಇಡತಕ್ಕ ಮಾರ್ಗವನ್ನು ಅನುಸರಿಸಿ. ನಡೆದಿರುವಂತಹ ಘಟನೆಗಳ ಬಗ್ಗೆ ವಿಚಾರಗಳು ತಿಳಿಯಬೇಕಾದರೆ ವಿಚಾರಣೆ ಆಗಬೇಕು. ಈ ಸದನದ ಸಮಿತಿಯನ್ನು ಕಳುಹಿಸುವಾಗ ತಜ್ಞರನ್ನು ಕೂಡ ಕಳುಹಿಸಿಕೊಟ್ಟು ರೈತರ ಸಮಸ್ಯೆ ಮತ್ತು ಅವರ ಬೇಡಿಕೆಗಳ ಬಗ್ಗೆ ಹಾಗೂ ಹಾಕಿರತಕ್ಕ ತೆರಿಗೆಗಳ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ವಿನಾಕಾರಣ ಗೋಲಿಬಾರ್ ಮಾಡದಂತೆ ಪೋಲೀಸ್‌ನವರಿಗೆ ನಿಶ್ಚಿತ ಆದೇಶ ಕೊಡಬೇಕು. ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳನ್ನು ತತ್‌ಕ್ಷಣ ಮನೆಗೆ ಕಳುಹಿಸಿಕೊಡಬೇಕು. ಜನತೆಯ ಮೇಲೆ ದಬ್ಬಾಳಿಕೆ ಮಾಡಿದರೆ? ಅಧಿಕಾರ ಶಾಹಿ ದರ್ಪ ಮಾಡಿದರೆ, ಇವತ್ತಿನ ಪರಿಸ್ಥಿತಿಯಲ್ಲಿ ಅದೆಲ್ಲಾ ನಡೆಯುವುದಿಲ್ಲ. ಸರ್ಕಾರ ಕೂಡಲೇ ಗಲಭೆ ಪೀಡಿತ ಪ್ರದೇಶಗಳಲ್ಲಿ ಶಾಂತಿ ನೆಲಸುವ ವ್ಯವಸ್ಥೆ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಮೂಳಗಿ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೇ, ನರಗುಂದ, ರೋಣ ಆ ಭಾಗದಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಧಾರವಾಡ ಜಿಲ್ಲೆಯ ಒಬ್ಬ ಸಮಾಜವಾದಿ ಕಾರ್ಯಕರ್ತನಾಗಿ, ಚಳುವಳಿಗಳನ್ನು ಮಾಡಿ, ರೈತರನ್ನು ಸಂಘಟನೆ ಮಾಡಿ ಆ ಕ್ಷೇತ್ರದ ಬಗ್ಗೆ ಹೆಚ್ಚು ತಿಳಿದುಕೊಂಡಿರತಕ್ಕ ಶಾಸಕರಲ್ಲಿ ನಾನು ಒಬ್ಬ. ನಿನ್ನೆ ದಿವಸ ನರಗುಂದ ಮತ್ತು ನವಲುಗುಂದಗಳಲ್ಲಿ ನಡೆದಿರತಕ್ಕ ಅಮಾನುಷ ಕೃತ್ಯಗಳನ್ನು ನೋಡಿದರೆ, ಬಹುಶಃ ರೈತರು ಹೀನಕೃತ್ಯದಲ್ಲಿ ತೊಡಗಲಿಲ್ಲವೆಂದು ತಮ್ಮ ಮುಖಾಂತರ ಸರ್ಕಾರದವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಅಲ್ಲಿಯ ರೈತರು ಬಹಳ ಶಾಂತಿಸ್ವಭಾವದವರು ತಮ್ಮ ತಮ್ಮ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡತಕ್ಕವರು. ಕಷ್ಟ ಬಂದಾಗ ಅವರು ಸರ್ಕಾರದ ಮೊರೆ ಹೋಗುತ್ತಾರೆ. ವಿನಂತಿಸಿಕೊಳ್ಳುತ್ತಾರೆ. ಇವತ್ತು ರೈತರು ಸಂಘಟನೆಯಾಗುತ್ತಿದ್ದಾರೆ. ಸರ್ಕಾರದ ಮುಂದೆ ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ, ಅದರಲ್ಲಿ ನೀರು ಕಂದಾಯ ಮತ್ತು ಅಭಿವೃದ್ಧಿ ತೆರಿಗೆ ವಿಚಾರ ಕೂಡ ಹೇಳಿದ್ದಾರೆ. ನಾನು ಜಿಲ್ಲಾ ಅಭಿವೃದ್ಧಿ ಮಂಡಲಿಯ ಸದಸ್ಯನಾಗಿ ಧಾರವಾಡ, ನವಲುಗುಂದ, ನರಗುಂದ ಭಾಗದ ರೈತರ ಸಮಸ್ಯೆಗಳನ್ನು ಸ್ವತಃ ನೋಡಿದ್ದೇನೆ. ಸಣ್ಣ ಸಣ್ಣ ಕಾಲುವೆಗಳಲ್ಲಿ ನೀರು ಸರಿಯಾಗಿ ಹೋಗುವುದಿಲ್ಲ. ೧೯೭೬-೭೭ ನೇ ಇಸವಿಯಿಂದಲೂ ಆ ಭಾಗದ ರೈತರ ಒಂದು

ಬೇಡಿಕೆ ಇತ್ತು. ಜಿಲ್ಲಾ ಮಂಡಲಿಯಲ್ಲಿ ಸರ್ವಾನು ಪಾಸು ಮಾಡಿ ಜಿಲ್ಲಾಧಿಕಾರಿಯವರಿಗೆ ಕಳುಹಿಸಿ?
ಎಲ್ಲೆಲ್ಲಿ ನೀರನ್ನು ಬಳಸುವುದಕ್ಕೆ ಸಾಧ್ಯವಾಗಿಲ್ಲ ಅಂಥ ಕಡೆ ಬೆಟರ್‌ಮೆಂಟ್ ಲೆವಿ ಮತ್ತು ನೀರಿನ ಕರ
ವನ್ನು ಮನ್ನ ಮಾಡಬೇಕೆಂದು ಠರಾವು ಮಾಡಿ ಸರ್ಕಾರಕ್ಕೆ ಕಳುಹಿಸಲಾಗಿತ್ತು ಎಷ್ಟೋ ಕಡೆ ರೈತರಿಗೆ
ಅಧಿಕಾರಿಗಳು ಬಹಳ ಬಲವಂತ ಮಾಡಿ ಕರ ವಸೂಲು ಮಾಡಿದ್ದರಿಂದ ಚಳುವಳಿ ಪ್ರಾರಂಭವಾಗಿದೆ.
ಎಂದು ಹೇಳಿದ್ದೇನೆ. ಹಿಂದಿನ ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟು ಕೇಳಿಕೊಂಡು
ಷ್ಟೇ ಈಗಿನವರೆಗೂ ಕೇಳಕೊಂಡಿದ್ದಾರೆ. ರೈತರಿಗೆ ಪರಿಹಾರ ಸಿಕ್ಕಿಲ್ಲ. ಎರಡು ಮೂರು ತಿಂಗಳಿನಿಂದ
ಚಳುವಳಿ ಮಾಡಿದರು, ತಾಲ್ಲೂಕು ಕಛೇರಿಯ ಮುಂದೆ ಸತ್ಯಾಗ್ರಹ ಮಾಡಿದರು ಅದು ಸರ್ಕಾರಕ್ಕೂ
ಗೊತ್ತಿದೆ. ರಾಜ್ಯದ ಎಲ್ಲಾ ಜನತೆಗೂ ಗೊತ್ತಿದೆ. ನಾನು ಹೇಳುವುದಾದರೆ, ರೈತರ ಸಮಸ್ಯೆಗಳನ್ನು
ಪರಿಹಾರ ಮಾಡುವ ದೃಷ್ಟಿಯಲ್ಲಿ ಸರ್ಕಾರವಾಗಲಿ, ಸರ್ಕಾರದ ಪ್ರತಿನಿಧಿಗಳಾಗಲಿ, ತಾವು ಹೋಗಿ ರೈತರ
ಸಮಸ್ಯೆ ಬಗೆಹರಿಸಲಿಕ್ಕೆ ಪ್ರಯತ್ನ ಮಾಡಿಲ್ಲ ಅಂತ ಈ ಸದನದ ಮುಖಾಂತರ ನಾನು ಸ್ಪಷ್ಟವಾಗಿ ಹೇಳು
ತ್ತೇನೆ. ಪರಿಹಾರ ಮಾಡದೇ ಇದ್ದುದರಿಂದ ರೈತರು ಮುಷ್ಕರ ಪ್ರಾರಂಭ ಮಾಡಿದರು. ನಿನ್ನೆ ಇಡೀ
ಜಿಲ್ಲೆಯಲ್ಲೇ ಒಂದು ಚಳುವಳಿಯನ್ನು ಪ್ರಾರಂಭ ಮಾಡಿ ಎಲ್ಲಾ ಕಡೆ ಹರಿತಾಳ ಮಾಡಬೇಕೆಂದು ಇರು
ವಾಗ ಯಾರೋ ಕಲ್ಲು ಎಸೆದರು, ಹೆಚ್ಚಿನ ಗಲಾಟೆ ಮಾಡಿದರು ಅಂತ ಪೋಲೀಸರು ಗೋಲೀಬಾರ್
ಮಾಡಿದರು ಎನ್ನುವ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಅಲ್ಲಿ ರೈತರು ಸತ್ತಿದ್ದಾರೆ. ಆಸ್ತಿ ಪಾಸ್ತಿಗೆ
ಹಾನಿಯಾಗಿದೆ ಅಂತ ಕೇಳಿದ್ದೇನೆ. ಅಲ್ಲಿರತಕ್ಕ ರೈತರು ಬಹಳ ಸೌಮ್ಯದ ಸ್ವಭಾವದವರಾಗಿದ್ದರು.
ಈ ರೀತಿ ರೈತರಿಗೆ ಅನ್ಯಾಯ ಆಗಲಿಕ್ಕೆ ಅಧಿಕಾರಿಗಳೇ ಮೂಲ ಕಾರಣರು ಎಂದು ತಿಳಿದುಕೊಂಡಿದ್ದೇನೆ.
ಇಂತಹ ಒಂದು ನಿರ್ಲಕ್ಷ್ಯದಿಂದ ರೈತರನ್ನು ನೋಡಿಕೊಳ್ಳುವುದಾದರೆ ಅವರು ಏನು ಮಾಡಬೇಕು ?
ನಾವು ಅನೇಕ ಸಾರಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುವಾಗ ರೈತರ ಬಗ್ಗೆ ಹೇಳುತ್ತಾ ಇರುತ್ತೇವೆ.
ರೈತರು ಇವೊತ್ತಿನದಿವಸ ೧೨ನೇ ಶತಮಾನದಲ್ಲಿ ಯಾವ ಹರಿಜನರು ಇದ್ದರೋ ಆ ಪರಿಸ್ಥಿತಿಯಲ್ಲಿ
ಇದ್ದಾರೆ. ರೈತರ ಬಗ್ಗೆ ಮೇಲ್ಮನೆಯಲ್ಲಿ, ಕೆಳಮನೆಯಲ್ಲಿ ಹಾಗೂ ಇತರ ಕಡೆಗಳಲ್ಲಿ ಭಾಷಣ ಮಾಡುವಾಗ
ಅವರು ನಮ್ಮ ರಾಷ್ಟ್ರದ. ಬೆನ್ನೆಲಬು ಎಂದು ಹೇಳುತ್ತೇವೆ, ಅವನಿಗೆ ಸಮಸ್ಯೆಗಳು ಬಂದಾಗ ಅವನಿಗೆ
ತೊಂದರೆ ಬಂದಾಗ ಅವನ ನೆರವಿಗೆ ಯಾರೂ ಹೋಗುವುದಿಲ್ಲ. ಇದು ನಮ್ಮ ರಾಜ್ಯದಲ್ಲಿಯೇ ಅಲ್ಲ,
ಎಲ್ಲಾ ಕಡೆ ಇದೆ. ಸರ್ಕಾರ ಮತ್ತು ಸಮಾಜ ಕೂಡ ಇದರ ಪರಿಹಾರಕ್ಕೆ ಒಂದು ಸೂಕ್ತ ಕಾರ್ಯ
ಕ್ರಮ ತೆಗೆದುಕೊಳ್ಳಬೇಕು. ಇವೊತ್ತು ರೈತರ ಸಂಘಟನೆ ಇಲ್ಲ, ರೈತರ ಸಂಘಟನೆ ಆದರೆ ಪರಿಹಾರ
ಮಾಡಲಿಕ್ಕೆ ಸಾಧ್ಯ ಅಂತ ಹೇಳುತ್ತೇವೆ. ಎಷ್ಟು ಜನ ರೈತರನ್ನು ಸಂಘಟನೆ ಮಾಡುತ್ತೀರಾ ? ರೈತರಿಗೆ
ಎಷ್ಟು ತೊಂದರೆಯಾಗಿದೆ ಎಂಬುದರ ಬಗ್ಗೆ ನಾನು ಅನಂತರ ಹೇಳುತ್ತೇನೆ. ಈಗ ನಡೆದಿರತಕ್ಕ ಗೋಲೀ
ಬಾರಿನ ಬಗ್ಗೆ ವಿಚಾರಣೆಯಾಗಬೇಕು. ತಪ್ಪಿತಸ್ಥರು ಯಾರೇ ಆಗಿರಲಿ ಅಂತಹವರ ಬಗ್ಗೆ ಕಠಿಣ ಕ್ರಮ
ತೆಗೆದುಕೊಳ್ಳಬೇಕು. ಅವರಿಗೆ ತಕ್ಕ ಶಿಕ್ಷೆ ಆಗಬೇಕು. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು
ಹೇಳಿದ ಹಾಗೆ ಸಮಿತಿಯನ್ನು ನೇಮಿಸುವಾಗ ವಿಳಂಬ ಆಗಬಾರದು, ತಡ ಆಗಬಾರದು. ಕೂಡಲೇ ಆ
ಸ್ಥಳಕ್ಕೆ ಹೋಗಿ ಯಾರು ಕಷ್ಟದಲಿದ್ದಾರೆ. ಅವರಿಗೆ ಕೂಡಲೇ ಪರಿಹಾರ ಕೊಡುವ ವ್ಯವಸ್ಥೆಯನ್ನು
ಮಾಡಬೇಕು. ಈ ಗೋಲೀಬಾರ್ ಬಗ್ಗೆ ಮುಖ್ಯ ಮಂತ್ರಿಗಳಾಗಲಿ, ಅಥವಾ ರೆವಿನ್ಯೂ ಮಂತ್ರಿಗಳಾ
ಗಲಿ, ಈ ಸದನದ ಎಲ್ಲಾ ಸದಸ್ಯರಿಗೂ ತೃಪ್ತಿಯಾಗುವಂತ ಹೇಳಿಕೆಯನ್ನು ಮಾಡಬೇಕು. ಈಗ
ಒಂದು ಮಾತನ್ನು ನೋವಿನಿಂದ ಹೇಳಬೇಕಾಗಿದೆ. ಈ ಸದನದಲ್ಲಿ ಎಲ್ಲ ಸದಸ್ಯರು ಮಾತನಾಡಲಿಕ್ಕೆ
ಅವಕಾಶ ಇಲ್ಲ. ಯಾವ ಸಮಸ್ಯೆ ಬಂದಿರಲಿ ಕೆಲವೇ ಜನರು ಈ ಮನೆಯಲ್ಲಿ ಮಾತನಾಡುತ್ತಾರೆ.
ನಾನು ಹೇಳುವುದಾದರೆ, ನರಗುಂದ ತಾಲ್ಲೂಕು ನನ್ನ ಕ್ಷೇತ್ರ ಆಗಿತ್ತು ೧೯೬೭ ನೇ ಇಸವಿಯಲ್ಲಿ
ಸ್ಪರ್ಧೆ ಮಾಡಿರತಕ್ಕವನು. ಈ ಸದನದ ಮುಂದೆ ನನ್ನ ಕ್ಷೇತ್ರದ ಜನರ ಕಷ್ಟಸುಖವನ್ನು ಹೇಳಲಿಕ್ಕೆ
ಅವಕಾಶ ಇಲ್ಲ ಅಂತ ಹೇಳುವುದಾದರೆ ನಾವು ಏತಕ್ಕೆ ಸದಸ್ಯರಾಗಿರಬೇಕು ? ಯಾವುದೇ ಸದಸ್ಯರು
ಮಾತನಾಡುವಾಗ ತಾರತಮ್ಯ ಇಲ್ಲದಂತೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ನಿನ್ನೆ
ನಡೆದಿರತಕ್ಕ ಗೋಲಿಬಾರ್‌ನಲ್ಲಿ, ನನ್ನ ಸಂಬಂಧಿಗಳೊಬ್ಬರು ತಹಶೀಲ್ದಾರರು ನರಗುಂದದಲ್ಲಿದ್ದು ಅವರ
ಈಗ ಆಸ್ಪತ್ರೆಯಲ್ಲಿದ್ದಾರೆ ಎಂಬ ವಿಷಯವನ್ನು ಕೇಳಿದ್ದೇನೆ. ಅಲ್ಲದೆ ಎಷ್ಟೋ ಜನರು ಇಂಥವರು
ನಿರಪರಾಧಿಗಳು ಕಷ್ಟದಲ್ಲಿದ್ದಾರೆ. ಎಂದು ಕೇಳಿದ್ದೇನೆ. ಆದುದರಿಂದ ನರಗುಂದದಲ್ಲಿ ಆಗಿರತಕ್ಕ
ದುರ್ಘಟನೆಯ ಬಗ್ಗೆ ಪರಿಶೀಲನೆ ಮಾಡಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಕೊಡಬೇಕೆಂದು ಹೇಳಿ, ಇಷ್ಟು ಕಾಲ
ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಸನ್ಮಾನ್ಯ ಅಧ್ಯಕ್ಷರೆ, ನರಗುಂದ ತಾಲ್ಲೂಕು ನನ್ನ ಪಕ್ಕದ ತಾಲ್ಲೂಕು. ಮಲಪ್ರಭ ನೀರಿನಿಂದ ನನ್ನ ತಾಲ್ಲೂಕಿನಲ್ಲಿ ಸಾವಿರಾರು ಎಕರೆ ನೀರಾವರಿ ಯಾಗುತ್ತದೆ. ಇತ್ತೀಚೆಗೆ ನೀರು ಬರದೇ ಇದ್ದರೂ ಸಹಾ ನನ್ನ ತಾಲ್ಲೂಕಿನಲ್ಲಿ ಚಳುವಳಿ ಶುರುವಾಗಿಲ್ಲ ದಿರುವುದು ಸಂತೋಷದ ವಿಷಯ. ನರಗುಂದ, ನವಲಗುಂದದಲ್ಲಿ ಶುರುವಾಗಿರತಕ್ಕ ಚಳುವಳಿ ಇಡೀ ಆ ಭಾಗಕ್ಕೆ ಒಳಗಾಗಿರುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ನರಗುಂದ ತಾಲ್ಲೂಕಿನ ರೈತರಿಗೆ ಮೊದಲು ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ ಈ ದಿನ ರೈತರು ಸಂಘಟಿತರಾಗಿದ್ದಾರೆ. ಇಪ್ಪತ್ತು ನಾಲ್ಕು ಜನ ಸತ್ತಿದ್ದಾರೆ, ೨೦ ರಿಂದ ೧೦೦ ಜನರಿಗೆ ಗಾಯ ಆಗಿದೆ. ನಾವು ಇದನ್ನು ಸಹಿಸುವುದಿಲ್ಲ ಅಂತ ರಕ್ತ ತರ್ಪಣ ಮಾಡಿದ ಜನರು ರೈತರಿಗೆ ಕರೆ ಕೊಟ್ಟಿದ್ದಾರೆ. ಇದರ ಬಗ್ಗೆ ಎರಡು ನೂರು ವರ್ಷದಿಂದ ರೈತರು ಅಜಿಟೇಷನ್ ಮಾಡುತ್ತಿದ್ದರು. ಮಾನ್ಯ ರಂಗನಾಥ್ ಅವರು ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಮುಧೋಳಗೆ ಬಂದಾಗ ರೈತರು ಪ್ರತಿಭಟನೆ ಮಾಡಿ ಅವರ ಮುಂದೆ ಇಟ್ಟಿದ್ದರು. ಅಧಿಕಾರಿಗಳು ಮಾಡತಕ್ಕ ಅನ್ಯಾಯವನ್ನು ಗಮನಕ್ಕೆ ತಂದಿದ್ದಾರೆ. ನಮ್ಮ ಕಡೆ ಒಂದು ಸರ್ವೆ ನಂಬರು ತೆಗೆದು ಕೊಂಡರೆ ೧೦ ೧೫–೨೦–೪೦ ಎಕರೆಯವರೆಗೆ ಒಂದೊಂದು ಕ್ಷೇತ್ರ ಉಂಟು. ಅಲ್ಲಿ ೫೦ ಎಕರೆ ನೀರಾವರಿ ಆಯಿತು ಅಂತ ಬೆಟರ್‌ಮೆಂಟ್ ಲೆವಿ ಹಾಕಿದ್ದಾರೆ. ಈ ಬಗ್ಗೆ ಎಷ್ಟೋ ಸಾರಿ ಪ್ರತಿಭಟನೆ ಸಲ್ಲಿಸಿದರೂ ಕೂಡ ಏನು ಕ್ರಮ ತೆಗೆದುಕೊಳ್ಳದೆ ಅಲಕ್ಷ್ಯ ಮನೋಭಾವವನ್ನು ರೈತರ ಬಗ್ಗೆ ತಾಳಿದ್ದರಿಂದ ಪರಿಸ್ಥಿತಿ ಈ ರೀತಿ ತಾಳಿತು ಎಂದು ಮನಗಾಣಬೇಕಾಗಿದೆ. ರೈತರಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ ನಾಳೆ ನೋಡೋಣ, ನಾಡಿದ್ದು ನೋಡೋಣ, ಆಚೆ ನಾಡಿದ್ದು ನೋಡೋಣ ಎನ್ನುವ ಮನೋಭಾವ ಅಧಿಕಾರಿ ಗಳಲ್ಲಿ ಹಾಗೂ ಸರ್ಕಾರದಲ್ಲಿ ಬೆಳೆದು ಬಂದಿರುವುದರಿಂದ ಈ ಘಟನೆ ನಡೆಯುವುದಕ್ಕೆ ಅವಕಾಶ ಕಲ್ಪಿಸಿತು ಎಂದು ಹೇಳಿದರೆ ತಪ್ಪಾಗಲಾರದು. ೧೫ ದಿವಸಗಳ ಹಿಂದೆ ಇದೇ ವಿಷಯದಲ್ಲಿ ಈ ಮನೆಯಲ್ಲಿ ಚರ್ಚೆ ಯಾಯಿತು. ಮಾನ್ಯ ವ್ಯವಸಾಯ ಮಂತ್ರಿಗಳು ಕೆಲವೊಂದು ಆಶ್ವಾಸನೆಯನ್ನು ಕೊಟ್ಟರು. ತತ್‌ಪೂರ್ವಕವಾಗಿ ನವಲಗುಂದ, ನರಗುಂದ ತಾಲ್ಲೂಕಿನಲ್ಲಿ ವಸೂಲು ಮಾಡುವುದನ್ನು ಬಂದ್ ಮಾಡು ತ್ತೇವೆ ಎಂದು ಹೇಳಿದ್ದಿರಿ. ತಾವು ಕೊಟ್ಟ ಆಶ್ವಾಸನೆ ಜಿಲ್ಲಾಧಿಕಾರಿಗಳಿಗೆ ತಲುಪಿದೆಯೋ?

ಇನ್ನು ಮಲಪ್ರಭ ಯೋಜನೆಯಲ್ಲಿ ಜಮೀನು ಅಕ್ವೈರ್ ಮಾಡಿಕೊಂಡ ಬಗ್ಗೆ ಜನಗಳಿಗೆ ಪರಿಹಾರ ಹಣ ಕೊಟ್ಟಿಲ್ಲ. ಅಲ್ಲಿ ಯಾರು ಅಧಿಕಾರಿಗಳಿಗೆ ಪರಸೆಂಟೇಜ್ ಕೊಡುತ್ತಾರೋ ಅವರಿಗೆ ಮಾತ್ರ ಬೇಗ ಬೇಗ ಕೊಟ್ಟಿದ್ದಾರೆ. ಒಂದೆರಡು ಎಕರೆ ಕಳೆದುಕೊಂಡಿರುವವರಿಗೆ ತೊಂದರೆಯಾಗಿದೆ. ಅಲ್ಲಿ ೫೦೦-೧,೦೦೦ ರೂಪಾಯಿ ಪರಿಹಾರ ತೆಗೆದುಕೊಳ್ಳಬೇಕು ಅಂದರೆ ೨೦೦–೩೦೦ ರೂಪಾಯಿವರೆಗೆ ಖರ್ಚು ಮಾಡ ಬೇಕಾಗಿದೆ. ಇದನ್ನು ನೋಡಿ ರೈತರು ರೊಚ್ಚಿಗೆದ್ದಿದ್ದಾರೆ. ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ ಚಂದ್ರಶೇಖರಪ್ಪ ಎಂಬ ಮುದುಕ ಬ್ರಿಟಿಷರ ಗುಂಡಿಗೆ ಹೆದರಲಿಲ್ಲ. ಶಾಂತಿ ಪ್ರಿಯವಾದ ವ್ಯಕ್ತಿ ಇದನ್ನು ತನ್ನ ಕೈಯಲ್ಲಿ ತೆಗೆದುಕೊಂಡು ರೈತರ ಸಂಘಟನೆ ಮಾಡಿ ಶಾಂತಿಯಿಂದ ಮೆರವಣಿಗೆ ಹೋದಾಗ ಉತ್ತರ ಗುಂಡಿನ ಸುರಿಮಳೆ. ದೇಶಕ್ಕೆ ಪ್ರಧಾನವಾಗಿರತಕ್ಕ ರೈತರ ಮೇಲೆ ಗುಂಡಿನ ಕಾಳಗ ಮಾಡಿದರೆ ಯಾವ ಜನತೆಗೆ ಶ್ರೇಯಸ್ಸು ತರುತ್ತದೆ. ನಾಚಿಕೆಯಿಂದ ತಲೆ ತಗ್ಗಿಸತಕ್ಕದ್ದು ನಡೆದಿದೆ.

೧೦.೩೦ ಎ.ಎಂ.

ಆ ರೈತ ಮಚ್ಚು ಕೊಡಲಿ ಹಿಡಿದರೆ ಅದು ಎಲ್ಲಿಗೆ ಹೋಗಿ ಮುಟ್ಟುತ್ತದೆ! ಅಧಿಕಾರಿಗಳು ಸರಿ ಯಾಗಿ ನಡೆದುಕೊಂಡಿದ್ದೇ ಆದರೆ ಈ ರೀತಿಯ ಅಸಮಧಾನಕ್ಕೆ, ಚಳುವಳಿಗೆ, ಹಿಂಸೆಗೆ ಆಸ್ಪದವಾಗು ತ್ತಿರಲಿಲ್ಲ. ಅಂತಹ ಸಾಧುವಾದ ರೈತರ ಮೇಲೆ ಗುಂಡಿನ ಸುರಿಮಳೆಯನ್ನು ಕರೆದಿದ್ದಾರೆಂದರೆ ನಾವೂ ನೀವೂ ಎಲ್ಲರೂ ತಲೆತಗ್ಗಿಸಬೇಕಾದ ಮಾತೆಂದು ನಾನಂತೂ ತಿಳಿದುಕೊಂಡಿದ್ದೇನೆ. ರೈತರ ಸಮಸ್ಯೆ ಬಗ್ಗೆ ನಿರ್ವಿವಾದವಾದ ಮನಸ್ಸಿನಿಂದ ಚರ್ಚೆ ಮಾಡುತ್ತಿದ್ದೇವೆ. ತಾವು ಕೂಡ ಇದನ್ನು ಚರ್ಚೆ ಮಾಡು ವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಪಕ್ಷಾತೀತವಾದ ವಿಚಾರವೆಂದು ಈ ಬಗ್ಗೆ ಚರ್ಚೆ ಮಾಡಿ ಎಂಬುದಾಗಿ ಹೇಳಿದ್ದಾರೆ. ರೈತರಿಗೆ ತಕ್ಷಣವೇ ಪರಿಹಾರ ಒದಗಿಸುತ್ತೇವೆ ಎನ್ನುವ ಭರವಸೆಯನ್ನು ತಾವು ಕೊಡುವುದಾದರೆ ಇದು ಶಾಂತಿಯಾದೀತು. ಇಲ್ಲದಿದ್ದರೆ ಇದು ಧಾರವಾಡ, ಬಿಜಾಪುರ ಹಾಗು ಮತ್ತಿತರ ಕಡೆಯೂ ಹರಡುತ್ತದೆ.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಆರ್.ಎಸ್. ಪಾಟೀಲ್ ರವರು ಹಿಂದೆ ಸಚಿವ ಸಂಪುಟ ದರ್ಜೆಯ ಮಂತ್ರಿಗಳಾಗಿದ್ದರು. ಆಗ ಈ ಒಂದು ರೈತರ ಸಮಸ್ಯೆಯನ್ನು ಏಕೆ ಬಿಡಿಸಲಿಲ್ಲ?

ಶ್ರೀ ಎಂ ಸಿ. ನಾಣಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿದಂತಹ ಕಳಕಳಿಯ ಬಗ್ಗೆ ಸಲಹೆ ಮಾಡುವುದೋ? ಈಗ ಹಿಂದಿನ ಸರ್ಕಾರ ಏನು ಮಾಡಿದೆ, ಏನು ಮಾಡಿಲ್ಲ ಎಂಬುದರ ಬಗ್ಗೆ ಪ್ರಶ್ನೆ ಮಾಡುವಂತಹ ಸಮಯ ಇದಲ್ಲ. ಇದನ್ನು ಪಕ್ಷಾತೀತವಾಗಿ ವಿಚಾರ ಮಾಡಿ ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಸಲಹೆ ಕೊಟ್ಟರು. ಅವರೇ ಕೇಳುತ್ತಿರುವಾಗ ಮಾನ್ಯ ಸದಸ್ಯರಾದ ಶ್ರೀಮಾನ್ ತಕ್ಕೇಡ್ ರವರು ಮಧ್ಯೆ ಏಕೆ ಬರುತ್ತಾರೆ.

ಶ್ರೀ ಆರ್.ಎಸ್. ಪಾಟೀಲ್.—ಅವರೂ ಕೂಡ ಒಕ್ಕಲುತನ ಮಾಡುತ್ತಿದ್ದವರೇ. ಆದರೆ ಈಗ ಅವರು ಒಕ್ಕಲುತನವನ್ನು ಬಿಟ್ಟು ವಕೀಲ ವೃತ್ತಿಯನ್ನು ಹಿಡಿದಿದ್ದಾರೆ. ಕಳೆದ ೩೦ ವರ್ಷಗಳಿಂದ ಇಲ್ಲಿಯವರೆಗೂ ಎಲ್ಲರೂ ಕೊಟ್ಟಂತಹ ಕೊಡುಗೆ ಇದು ಎಂದು ನಾನು ಹೇಳುತ್ತಿದ್ದೇನೆ. ಇದರಲ್ಲಿ ನಾವು ಏಕೆ ಮಾಡಲಿಲ್ಲ ನೀವು ಏಕೆ ಮಾಡಲಿಲ್ಲ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. ಎಲ್ಲರೂ ರೈತರನ್ನು ಬೆನ್ನೆಲುಬು ಎಂದು ಹೇಳಿ ಹೇಳಿ ಇಲ್ಲಿಯವರೆಗೂ ತಂದಿದ್ದಾರೆ ಎಂದು ಹೇಳುತ್ತಿದ್ದೇನೆ. ಇವತ್ತು ರೈತರು ಚಳುವಳಿಯನ್ನು ಕೈಗೆತ್ತಿಗೊಂಡಿದ್ದಾರೆ. ರೈತರು ಕೂಲಿಕಾರರು ಸಂಘಟಿತರಾಗಿ ಒಂದು ವಿಶೇಷವಾದ ಶಕ್ತಿಯನ್ನು ಕರ್ನಾಟಕ ರಾಜ್ಯದಲ್ಲಿ ಮೂಡಿಸಿರುವುದರಿಂದ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಇವತ್ತು ೪ ಜನ ರೈತರು ಸತ್ತಿರಬಹುದು. ಇದರಿಂದ ಕೋಟ್ಯಾಂತರ ರೈತರಿಗೆ ಒಳ್ಳೆಯದಾಗುತ್ತದೆ. ಇವತ್ತು ಸಾರಿರುವಂತಹ ಚಳುವಳಿ ಬಹುಶಃ ನಾಡಿನ ಎಲ್ಲ ಕಡೆ ಹರಡಬಹುದು. ಅವರ ಬಗ್ಗೆ ಸೂಕ್ತ ಪರಿಹಾರ ಮೊದಲಿನಿಂದಲೂ ಮಾಡದಿದ್ದರಿಂದ ಇಂತಹ ಒಂದು ಪರಿಸ್ಥಿತಿ ಇವತ್ತು ಬಂದಿದೆ. ಅವನು ಇಷ್ಟೊಂದು ಒಗ್ಗಟ್ಟಾಗಿ ಚಳುವಳಿ ಮಾಡುವಂತಹ ಮಟ್ಟಕ್ಕೆ ಬಂದಿರುವುದರಿಂದ ಅವನ ಬಗ್ಗೆ ಚರ್ಚೆ ಮಾಡತಕ್ಕಂತಹ ಪರಿಸ್ಥಿತಿ ಈ ದೇಶದಲ್ಲಿ ಒದಗಿ ಬಂದಿದೆ. ಅವನನ್ನು ಬಗ್ಗು ಎಂದರೆ ಎಲ್ಲಿಯವರೆಗೆ ಬಗ್ಗಿಯಾನು. ಭೂಮಿಯವರೆಗೆ ಬಗ್ಗಿಯಾನು. ನಂತರವೂ ಬಗ್ಗು ಎಂದರೆ ಆತನು ಬಗ್ಗುವುದಿಲ್ಲ ಎಂಬುದನ್ನು ನಾವುಗಳೆಲ್ಲರೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಒಮ್ಮೆ ಆತ ಸಿಟ್ಟಿಗೆದ್ದರೆ ಏನು ಮಾಡುವುದಕ್ಕೂ ಹಿಂಜರಿಯುವುದಿಲ್ಲ ಎಂಬುದನ್ನು ನಾವುಗಳೆಲ್ಲರೂ ತಿಳಿದುಕೊಳ್ಳಬೇಕು. ಇದನ್ನು ಮಾನ್ಯ ತಕ್ಕೇಡ್ ರವರೂ ತಿಳಿದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಈ ಒಂದು ಪ್ರವಾಹದಲ್ಲಿ ನಾವು ನೀವೂ ಎಲ್ಲರೂ ಕೊಚ್ಚಿಕೊಂಡು ಹೋಗುತ್ತೇವೆ ಎಂಬುದನ್ನು ತಿಳಿದುಕೊಳ್ಳಬೇಕು. ಇವತ್ತು ಈ ಒಂದು ಘಟನೆಯಲ್ಲಿ ೪ ಜನರು ಸತ್ತಿರುವುದನ್ನು ನೋಡಿದಾಗ ಅಲ್ಲಿ ಪರಿಸ್ಥಿತಿ ಎಷ್ಟು ವಿಕೋಪದಲ್ಲಿದೆ ಎಂಬುದು ಎಲ್ಲರಿಗೂ ಅರ್ಥವಾಗುತ್ತದೆ. ಈಗ ಏನು ಸರ್ಕಾರ ಅವರ ಮೇಲೆ ಬೆಟರ್‌ಮೆಂಟ್ ಲೆವಿ ಹೇರಿದೆ ಅದನ್ನು ತಾತ್ಕಾಲಿಕವಾಗಿ ಪರಿಹಾರವನ್ನು ಒದಗಿಸಬೇಕು. ಇವೆಲ್ಲವುಗಳನ್ನೂ ತಕ್ಷಣವೇ ತಾವು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಂಡು ತಮಗೆ ರೈತರ ಬಗ್ಗೆ ಇರುವ ಪ್ರಾಮಾಣಿಕ ಕಳಕಳಿಯ ಬಗ್ಗೆ ನಾನು ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ವಿ. ಭಾವಿ (ಮುಂಡರಗಿ).—ಮಾನ್ಯ ಅಧ್ಯಕ್ಷರೇ, ಈ ಒಂದು ಅಹಿತಕರವಾದ ಘಟನೆ ಏನು ನಡೆದಿದೆ ಇದರ ಬಗ್ಗೆ ನಾವು ಬರೀ ಪೋಲೀಸಿನವರ ಮೇಲೆ ಅಪಾದನೆಯನ್ನು ಹೊರಿಸಿ ನಮ್ಮ ಕರ್ತವ್ಯವನ್ನು ಮುಗಿಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಈ ಘಟನೆಯ ಹಿಂದೆ ಇರತಕ್ಕಂತಹ ದಾರುಣ ಕಥೆಯನ್ನು ಇವತ್ತು ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಘಟನೆ ಏನು ನಡೆದಿದೆ ಇದಕ್ಕೆ ಮೂರು ಕಾರಣಗಳು ಇವೆ. ಮೊದಲನೆಯದಾಗಿ ಮಲಪ್ರಭಾ, ಇದು ಅಚ್ಚುಕಟ್ಟು ಪ್ರದೇಶವಾದ್ದರಿಂದ ರೈತರು ೧೯೭೭ನೇ ಇಸವಿಯಿಂದಲೇ ಕೆಲವೊಂದು ಏರಿಯಾವಲ್ಲಿ ಮಲಪ್ರಭ ದಿಂದ ನೀರಾವರಿ ಸೌಲಭ್ಯ ಪಡೆಯುತ್ತಿಲ್ಲ ಆದರೆ ಸರ್ಕಾರದವರು ನೀರು ಕಂದಾಯ, ಬೆಟರ್‌ಮೆಂಟ್ ಲೆವಿ ಹಾಕುತ್ತಿದ್ದಾರೆ ಇದನ್ನು ನಮಗೆ ಹಾಕಬೇಡಿ ಎಂಬುದಾಗಿ ೧೯೭೭-ನೇ ಇಸವಿಯಿಂದಲೂ ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದಿಡುತ್ತಾ ಬಂದಿದೆ. ಸರ್ಕಾರದವರು ಇವತ್ತಿಗೂ ಈ ಒಂದು ಸಮಸ್ಯೆಯನ್ನು ಬಿಡಿಸದೆ, ಏನೋ ಒಂದು ನೆಪವನ್ನು ಹೇಳಿಕೊಂಡು ಬಂದಂತಹ ಒಂದು ವಿಳಂಬ ನೀತಿಯೇ ಇದಕ್ಕೆ ಮೊದಲನೆಯ ಕಾರಣ. ಇನ್ನು ಎರಡನೆಯದಾಗಿ, ಅಲ್ಲಿರತಕ್ಕಂತಹ ಲೋಕೋಪಯೋಗಿ ಇಲಾಖೆಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಏನಿದ್ದಾರೆ ಅವರು

ಒಂದು ಅದಕ್ಷತೆಯಿಂದ ಅದರ ಒಂದು ಆಧಾರದ ಮೇಲೆ ರೈತರು ಇವತ್ತು ಈ ಚಳುವಳಿಯನ್ನು ನಡೆಸುವುದಕ್ಕೆ ಕಾರಣವಾಗಿದೆ. ಮೂರನೆಯದಾಗಿ, ರೈತರು ಯಾವತ್ತೂ ಇಂತಹ ಅಹಿತಕರವಾದ ಘಟನೆಗೆ ಕೈ ಹಾಕುವವರಲ್ಲ. ಆದರೆ ಈ ಒಂದು ಸಮಯವನ್ನು ಕೆಲವೊಂದು ಸಮಾಜಘಾತುಕರು ದುರುಪಯೋಗ ಮಾಡಿಕೊಂಡು ಈ ಒಂದು ವಿಧ್ವಂಸಕ ಕೃತ್ಯಗಳನ್ನು ಮಾಡಿದ್ದಾರೆ. ಇದು ನಿಜವಾದ ರೈತರು ನಡೆಸಿದಂತಹ ಚಳುವಳಿಯಲ್ಲ ಎಂಬುದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ. ಆತನು ಸರ್ಕಾರದ ಆಸ್ತಿಪಾಸ್ತಿಯನ್ನು ಲೂಟಿ ಮಾಡುತ್ತಿರಲಿಲ್ಲ. ೧೯೭೭ನೇ ಇಸವಿಯಿಂದಲೂ ರೈತರು ಮನವಿ ಮಾಡುತ್ತಾ, ಶಾಂತಿಯುತವಾದ ಚಳುವಳಿಯನ್ನು ಮಾಡುತ್ತಾ ಬಂದಿದ್ದಾರೆ. ಇದುವರೆಗೂ ಮಾಡದೇ ಇರುವುದರಿಂದ, ಅದಕ್ಕಾಗಿ ಸರ್ಕಾರದ ಗಮನಕ್ಕೆ ಈ ಒಂದು ಸಮಸ್ಯೆಯನ್ನು ತರುವುದಕ್ಕಾಗಿ ಶಾಂತಿಯುತವಾದ ಅಹಿಂಸಾತ್ಮಕವಾದ ಚಳುವಳಿಯನ್ನು ಮಾಡಬೇಕು, ಎಂಬುದಾಗಿ ರೈತರು ಸಾಮಾನ್ಯವಾದ ಚಳುವಳಿಗೆ ಕಾಲಿಟ್ಟರು. ಆ ಸಮಯವನ್ನು ಸಮಾಜಘಾತಕರು ದುರುಪಯೋಗಪಡಿಸಿಕೊಂಡುದರ ಫಲವಾಗಿ ಈ ಒಂದು ಘಟನೆ ನಡೆದಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಈ ರೈತರ ಸಮಸ್ಯೆ ಏನಿದೆ. ಇದನ್ನು ತೀವ್ರವಾದ ಸಮಸ್ಯೆ ಎಂಬುದಾಗಿ ಪರಿಗಣಿಸಬೇಕು. ಮತ್ತೆ ವಿಳಂಬ ನೀತಿಯನ್ನು ತಾಳದೆ ತೀವ್ರವಾಗಿ ತೆಗೆದುಕೊಂಡು ಪರಿಹಾರವನ್ನು ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮೂಲಕ ಭಿನ್ನವಿಸಿಕೊಳ್ಳುತ್ತಿದ್ದೇನೆ.

ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಇದರ ಬಗ್ಗೆ ತೀವ್ರವಾದ ಆಸಕ್ತಿಯನ್ನು ವಹಿಸಿ ಅವರು ಪ್ರತಿಯೊಬ್ಬರ ಜಮೀನಿಗೂ ಹೋಗಿ ನೀರಾವರಿಯಾಗಿರುವುದು ಎಷ್ಟು ನೀರಾವರಿಯಾಗದೆ ಇರುವುದು ಎಷ್ಟು ಎಂಬುದನ್ನು ಸ್ವತಃ ನೋಡಿದ್ದರೆ ಈ ಸಮಸ್ಯೆ ಉದ್ಭಾವವಾಗುತ್ತಿರಲಿಲ್ಲ. ತಮ್ಮ ಕಛೇರಿಗಳಲ್ಲಿ ಕುಳಿತುಕೊಂಡು ತಮ್ಮ ಕೆಳಗಿನ ಅಧಿಕಾರಿಗಳು ಏನು ಹೇಳುತ್ತಾರೋ, ಅದರ ಮೇಲೆ ಈ ರೀತಿಯ ಅಕ್ರಮಗಳನ್ನು ತೆಗೆದುಕೊಂಡಿದ್ದಾರೆ ಇದು ಒಂದು ಮುಖ್ಯ ಕಾರಣ. ಇದನ್ನು ಈಗಾಗಲೇ ನಮ್ಮ ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಯಾವುದೋ ಒಂದು ವಿಷಯದಲ್ಲಿ ಮಂತ್ರಿಗಳು ದೂರವಾಣಿಯ ಮೂಲಕ ಜಿಲ್ಲಾಧಿಕಾರಿಗಳಿಗೆ ಹೇಳಿದರು. ನಾವು ಅಲ್ಲಿಗೆ ಹೋಗಿ ಆ ಬಗ್ಗೆ ಕೇಳಿದಾಗ ಅವರು ದೂರವಾಣಿಯ ಮೂಲಕ ಹೇಳಿದಂತೆ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ. ಹಾಗೇನಾದರೂ ಇದ್ದರೆ ಸರ್ಕಾರದವರು ಲಿಖಿತ ಆದೇಶ ಕೊಡಬೇಕು ಎಂಬುದಾಗಿ ಹೇಳಿದರು. ಈ ರೀತಿ ವ್ಯವಹಾರ ಜ್ಞಾನ ಇಲ್ಲದ ಅಧಿಕಾರಿಗಳು ನಮ್ಮ ಜಿಲ್ಲೆಯಲ್ಲಿದ್ದಾರೆ. ಇದೇ ರೀತಿ ಇನ್ನೊಬ್ಬರು ವಿಶೇಷ ಜಿಲ್ಲಾಧಿಕಾರಿ ಶ್ರೀ ಗೋವಿಂದರಾಜ್ ಎಂದು ಇದ್ದಾರೆ. He is a most prejudice minded officer. ಯಾವ ಲಾಯರ್ಸ್‌ಗಳು ಯಾವುದೇ ಆಫೀಸಿಗೆ ಹೋದರೂ, ಇವರು ಖಾಸಗಿ ಜನರು ಇವರ ಮಾತಿಗೆ ಬೆಲೆ ಕೊಡಬೇಡಿ ಎಂಬುದಾಗಿ ತಮ್ಮ ಕೆಳಗಿನ ಅಧಿಕಾರಿಗಳಿಗೆ ಹೇಳಿಬಿಟ್ಟಿದ್ದಾರೆ. ಇದನ್ನರಿತು ಯಾವುದೇ ಅಧಿಕಾರಿಗಳು ನಮ್ಮಂತಹವರಿಗೆ ಯಾರೂ ಕೇರ್ ಮಾಡುವುದಿಲ್ಲ, ಈ ರೀತಿಯ ಪರಿಸ್ಥಿತಿ ಇವತ್ತು ನಮ್ಮ ಜಿಲ್ಲೆಯ ಅಧಿಕಾರಿಗಳಲ್ಲಿ ಇದೆ.

ನವಲ್‌ಗುಂದ, ಜೇವರ್ಗಿ, ನರಗುಂದ್, ಸೌಂದತ್ತಿಯಲ್ಲಿ ನಡೆದ ಘಟನೆಗಳಲ್ಲಿ ಪೋಲೀಸಿನವರೂ ಕೆಲವರು ಹಾಗೂ ರೈತರು ಕೆಲವರು ಸತ್ತಿದ್ದಾರೆ. ಅವರ ಬಗ್ಗೆ ನಮ್ಮ ಅನುಕಂಪ ಇದೆ. ಆ ಅಧಿಕಾರಿಗಳು ಯಾರು ಮಡಿದಿದ್ದಾರೆ ಅವರ ಮೇಲೂ ಕೂಡ ನಮಗೆ ಅನುಕಂಪ ಇದೆ. ಅಧಿಕಾರಿಗಳೂ ಸತ್ತರು, ರೈತರೂ ಸಹ ಸತ್ತರು. ಅವರಿಗೆ ಯಾವ ರೀತಿಯಿಂದ ಪರಿಹಾರವನ್ನು ಕೊಡಬೇಕೋ ಅದನ್ನು ಕೊಟ್ಟು ಅಲ್ಲಿನ ರೈತರಲ್ಲಿ ಉಂಟಾಗಿರತಕ್ಕ ಒಂದು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಒಂದು ಹಂತಕ್ಕೆ ತರಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಂಡು ಈ ಸಮಸ್ಯೆಯನ್ನು ತೀವ್ರಗತಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತೊಮ್ಮೆ ಕೇಳಿಕೊಂಡು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಚೆನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದ ಗಂಭೀರತೆಯ ಬಗ್ಗೆ ಸದನದ ಎರಡೂ ಕಡೆ ಸಾಕಷ್ಟು ಪ್ರಸ್ತಾಪವಾಗಿದೆ, ಈ ಬಗ್ಗೆ ತಕ್ಷಣ ಮಾಡತಕ್ಕ ಕಾರ್ಯಗಳು ಕೆಲವು ಇದ್ದರೆ ದೀರ್ಘ ಕಾಲಿಕವಾಗಿ ಮೂಲಭೂತವಾಗಿರತಕ್ಕಂತಹ ರೋಗಗಳನ್ನು ನಿವಾರಣೆ ಮಾಡುವುದಕ್ಕೆ

ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಈ ಒಂದು ಸ್ಥಿತಿ ಬರುವುದಕ್ಕೆ ನಾನು ಈಗಿನ ಸರ್ಕಾರ ಒಂದೇ ಮಾತ್ರ ಜವಾಬ್ದಾರಿ ಎಂದು ಭಾವಿಸುವುದಿಲ್ಲ. ಹಿಂದೆ ರಾಜ್ಯವನ್ನು ನಡೆಸಿಕೊಂಡು ಬಂದಿರತಕ್ಕ ಸರ್ಕಾರಗಳೂ ಈ ಸ್ಥಿತಿಗೆ ಜವಾಬ್ದಾರಿಯಾಗಿವೆ. ಅದು ಕೇಂದ್ರ ಸರ್ಕಾರವೇ ಆಗಿರಬಹುದು ಅಥವಾ ರಾಜ್ಯ ಸರ್ಕಾರವೇ ಆಗಿರಬಹುದು. ಆದರೆ ಈಗ ಅಲ್ಲಿ ಒಂದು ಶಾಂತಿ ನೆಲೆಸಬೇಕಾಗಿದೆ. ರೈತರ ಕೋಪ ಏನಿದೆ ಅದು ರಾಜ್ಯವ್ಯಾಪ್ತಿ ಹರಡಿ ಮತ್ತಷ್ಟು ಗಂಭೀರತೆಯನ್ನು ತಾಳುವುದಕ್ಕೆ ಅವಕಾಶವನ್ನು ಕೊಡಬಾರದು. ಮಾನ್ಯ ಮಿತ್ರರಾದಂತಹ ಶ್ರೀ ಆರ್. ಎಸ್. ಪಾಟೀಲ್ ಅವರು ಹೇಳಿದರು ೪ ಜನರು ಸತ್ತರೂ ಚಿಂತೆ ಇಲ್ಲ ಇದು ಒಂದು ಒಳ್ಳೆಯ ಸೂಚನೆ ಎಂದು. ಅವರು ಹೇಳಿದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ರೈತರು ಸಂಯಮ ತಪ್ಪಿ ಕೊಡಲಿ ಅಥವಾ ಬಂದೂಕನ್ನು ಕೈಗೆ ತೆಗೆದುಕೊಂಡರೆ ಇದು ಎಲ್ಲಿಗೆ ಹೋಗಿ ಮುಟ್ಟುತ್ತದೋ ಹೇಳುವುದಕ್ಕಾಗುವುದಿಲ್ಲ, ಅವರು ಬಂದೂಕು ಮತ್ತು ಕೊಡಲಿ ಹಿಡಿದು ಹೊರಟರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಆ ಒಂದು ಸ್ಥಿತಿ ಬರುವುದಕ್ಕೆ ಮುಂಚೆ ಈಗ ಇರತಕ್ಕ ಸರ್ಕಾರ ಈ ಬಗ್ಗೆ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಒಂದು ರೀತಿಯ ಉಪೇಕ್ಷೆಯ ವಾತಾವರಣ ಹೆಚ್ಚಾಗಿದೆ. ಅಧಿಕಾರಿಗಳು ಅವರು ಯಾವುದೇ ಇಲಾಖೆಯವರು ಇರಬಹುದು, ರೆವಿನ್ಯೂ ಇಲಾಖೆಯವರಾಗಿರಬಹುದು, ಪಬ್ಲಿಕ್ ವರ್ಕ್ಸ್ ಇಲಾಖೆಯವರು ಇರಬಹುದು ಅಥವಾ ಪೋಲೀಸ್ ಇಲಾಖೆಯವರೇ ಆಗಿರಬಹುದು ಅವರು ತಮ್ಮ ಮನಸ್ಸಿನ ಇಚ್ಛೆಯಂತೆ ಸ್ವೇಚ್ಛಾ ಪ್ರವೃತ್ತಿಯವರಾಗಿದ್ದಾರೆ. ನಾವು ಯಾರಿಗೂ ಜವಾಬ್ದಾರರಲ್ಲ ಎಂಬಂತೆ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿರತಕ್ಕುದು ರಾಜ್ಯದಲ್ಲಿ ಹೆಚ್ಚಾಗಿದೆ. ಇದರಿಂದಾಗಿ ನಾವು ದಿನನಿತ್ಯ ಕೊಲೆ. ಸುಲಿಗೆ, ಬೆಂಕಿ, ದರೋಡೆ, ಲಾಟಿ ಚಾರ್ಜ್. ಗೋಲಿಬಾರ್ ಎಂಬ ದಿನನಿತ್ಯದ ಸುದ್ದಿಗಳನ್ನು ಕೇಳುತ್ತಿದ್ದೇವೆ. ಇದರಿಂದ ತಾವು ಸಹೃದಯರಾಗಿರತಕ್ಕಂತಹ ನಮ್ಮ ರೈತರ ಒಂದು ಸಮಸ್ಯೆಯನ್ನು ಬಗೆಹರಿಸುವುದಷ್ಟೇ ಅಲ್ಲದೇ ಈ ಒಂದು ಸರ್ಕಾರದಲ್ಲಿರತಕ್ಕ ಆಲಸ್ಯಮಯವಾದ ಭಾವನೆಯನ್ನೂ ಕೂಡ ಹೋಗಲಾಡಿಸಬೇಕಾಗಿದೆ, ಇವತ್ತು ಬೆಳೆಯನ್ನು ಬೆಳೆಯುತಕ್ಕ ರೈತರು ಮತ್ತು ಕಾರ್ಮಿಕರ ಒಂದು ಸಮಾಧಾನದ ಕಟ್ಟೆ ಒಡೆಯುವುದಕ್ಕೂ ಮುಂಚೆ ಸರ್ಕಾರ ವಿಚಕ್ಷಣೀಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ವಾಸ್ತವಿಕವಾಗಿ ಇಂತಹ ಒಂದು ಘಟನೆ ನಡೆದಾಗ ನಿಲುವಳಿ ಸೂಚನೆಯನ್ನು ತರುವುದಕ್ಕೆ ಬದಲಾಗಿ ಮಂತ್ರಿಮಂಡಲದ ಮೇಲೆಯೇ ಅವಿಶ್ವಾಸ ನಿರ್ಣಯವನ್ನು ತರಬಹುದಾಗಿತ್ತು. ಇದರಿಂದ ಆ ಜನರ ಕಾರ್ಯವೇನೂ ಆಗುವುದಿಲ್ಲ. ಇವತ್ತು ರಾಜ್ಯದಲ್ಲಿ ಇಂತಹ ಒಂದು ವಾತಾವರಣ ಹೆಚ್ಚುತ್ತಾ ಹೋಗುತ್ತಿದೆ. ಈ ಬಗ್ಗೆ ಸರ್ಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಇವತ್ತು ಅಲ್ಲಿ ನಡೆದಿದ್ದು ನಾಳೆ ರಾಜ್ಯದ ಇತರ ಕಡೆಗಳಲ್ಲೂ ನಡೆಯುತ್ತದೆ. ಈಗಲೇ ಪರಿಸ್ಥಿತಿಯನ್ನು ಹತೋಟಿಗೆ ತರದೆ ಹೋದರೆ ಆ ನಂತರ ಹತೋಟಿಗೆ ತರಲು ಕಷ್ಟವಾಗುತ್ತದೆ. ನಮ್ಮ ರೈತ ನೀರಿದ್ದ ಹಾಗೆ; ನೀರು ಕಾಯುವುದು ನಿಧಾನ ಕಾದ ಮೇಲೆ ಆರುವುದೂ ಸಹ ನಿಧಾನ. ಹಾಗೆ ರೈತ ಸಂಘಟಿತನಾಗುವುದು ನಿಧಾನ ಈಗ ಸಂಘಟಿತನಾದ ಮೇಲೆ ಆ ನಂತರದ ಪರಿಣಾಮವನ್ನು ಎದುರಿಸಲು ಸರ್ಕಾರದ ಕೈಯಿಂದ ಬಹಳ ಕಷ್ಟವಾಗುತ್ತದೆ. ರೈತ ನೇಗಿಲನ್ನು ಬಿಟ್ಟು ಕೊಡಲಿಯನ್ನು ಹಿಡಿದನೆಂದರೆ ಅವನು ಮತ್ತೆ ಮನೆಗೆ ಹೋಗುತ್ತಾನೋ ಅಥವಾ ಮೇಲಕ್ಕೇ ಹೋಗುತ್ತಾನೋ ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಸದನದ ಸದಸ್ಯರು ಅಲ್ಲಿ ಇಲ್ಲಿ ಹೋಗುವ ಬದಲು ಇಂತಹ ಸ್ಥಳಗಳಿಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆ ಸ್ಥಳಕ್ಕೆ ಭೇಟಿ ನೀಡಲಿ. ಅವರು ಹೆಲಿಕಾಪ್ಟರ್ ಮೂಲಕ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇಲ್ಲಿ ರೈತರಿಂದಲೇ ಈ ಒಂದು ಘಟನೆ ಆಗಿಲ್ಲ, ಕೆಲವೊಂದು Anti-Social Elements ಪೋಲೀಸಿನವರ ಕಡೆಯಿಂದ ಈ ಘಟನೆಯಲ್ಲಿ ಶಾಮೀಲಾಗಿರಬಹುದೆಂದು ನಾನು ಹೇಳುತ್ತೇನೆ. ಇಲ್ಲಿ ಪೋಲೀಸಿನವರೂ ಕೂಡಾ ಸತ್ತಿದ್ದಾರೆ. ಅವರ ಮೇಲೂ ನನಗೆ ಅನುಕಂಪ ಇದೆ. ಇದು ರಾಜ್ಯಕ್ಕೆ ಆಗಿರತಕ್ಕ ಒಂದು ನೋವು. ರೈತ ಹಾಗೂ ಪೋಲೀಸ್ ಇಲ್ಲಿ ಕೊಡಲಿ ಹಾಗೂ ಬಂದೂಕು ಹಿಡಿದು ಹೋರಾಡುವುದನ್ನು ನಿಲ್ಲಿಸಬೇಕು. ಇವತ್ತು ಮಲಪ್ರಭಾದಲ್ಲಿ ಶುರುವಾದದ್ದು ನಾಳೆ ತುಂಗಭದ್ರಾದಲ್ಲಿ ಶುರು ಆಗಬಹುದು. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾಲ್ಕಾರು ಜನರನ್ನು ಸಸ್ಪೆಂಡ್ ಮಾಡಿಬಿಟ್ಟರೆ ಪರಿಸ್ಥಿತಿ ಸರಿಹೋಗಬಹುದೆಂದು ತಿಳಿದುಕೊಂಡರೆ ತಪ್ಪಾಗುತ್ತದೆ. ನಿಮ್ಮ ಅಧಿಕಾರಿಗಳು ನಿಮ್ಮ ಹಿಡಿತದಲ್ಲಿ ಇರುವಂತೆ ಮಾಡಿಕೊಳ್ಳಬೇಕು. ಅವರ ಆ ಒಂದು ಸ್ವೇಚ್ಛಾ ಪ್ರವೃತ್ತಿ ಹೋಗಬೇಕು ಎಂದು ಹೇಳಿ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಾರ್ಯ ತತ್ಪರರಾಗದಿದ್ದರೆ ನಾಳೆ ಆ ರೈತರಿಗೆ ಹಾಗೂ ಪೋಲೀಸಿನವರಿಗೆ

† ಶ್ರೀ ಎಂ.ಎಂ. ನಡಾಫ್ (ಸಿಗ್ಗಾನ್). – ಮಾನ್ಯ ಅಧ್ಯಕ್ಷರೆ. ಈ ಒಂದು ಘಟನೆಯ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ಒಂದೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ನವಲಗುಂದ, ರೋಣ, ಗದುಗಿನಲ್ಲಿ ಇರಿಗೇಷನ್ ಟ್ಯಾಕ್ಸ, ಬೆಟರ್‌ಮೆಂಟ್ ಟ್ಯಾಕ್ಸ ಬಗ್ಗೆ ನಡೆದಂತಹ ಘಟನೆಯ ಒಂದು ಹಿನ್ನೆಲೆ ಈಗ ಶುರುವಾದುದಲ್ಲ. ಈಗ ೨ ವರ್ಷಗಳ ಹಿಂದೆ ರಾಜ್ಯದ ಆಗಿನ ಮುಖ್ಯಮಂತ್ರಿಯವರು ಆ ಭಾಗಕ್ಕೆ ಹೋಗಿದ್ದಾಗಲೇ ಅಲ್ಲಿನ ರೈತರು ಈ ಬಗ್ಗೆ ಹೇಳಿದಾಗ ಅವರು ತಮ್ಮ ಅನುಕಂಪವನ್ನು ಆಗ ಸೂಚಿಸಿದ್ದರು. ಆ ನಂತರ ೨ ತಿಂಗಳ ಹಿಂದೆ ಧಾರವಾಡದ ಜಿಲ್ಲಾಧಿಕಾರಿಗಳು ಅಲ್ಲಿಗೆ ಹೋಗಿದ್ದಾಗ ರೋಣ ತಾಲ್ಲೂಕಿನ ರೈತರು ಈ ಬಗ್ಗೆ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದರು. ಆದರೆ ಈ ಬಗ್ಗೆ ರೈತರ ಒಂದು ಸಮಸ್ಯೆಗಳ ಬಗ್ಗೆ ಸರ್ಕಾರ ಕೊಡಬೇಕಾದ ಒಂದು ಆಸಕ್ತಿಯನ್ನು ಕೊಡದಿದ್ದರಿಂದ ಈ ರೈತರು ಬೇಜಾರು ಪಟ್ಟುಕೊಂಡುದರಿಂದ ಈ ರೀತಿಯ ಒಂದು ಪರಿಸ್ಥಿತಿಯನ್ನು ನಾವು ಇವತ್ತು ಕಾಣಬಹುದಾಗಿದೆ ಈ ಹಿಂದೆ ಅನೇಕ ರೈತರು ವಿಧಾನಸೌಧಕ್ಕೆ ಬಂದು ತಮ್ಮ ಸಮಸ್ಯೆಗಳನ್ನು ಸಂಬಂಧಪಟ್ಟ ಮಂತ್ರಿಗಳಲ್ಲಿ ತೋಡಿಕೊಂಡು ಹೋಗಿದ್ದಾರೆ. ಇರಿಗೇಷನ್ ಟ್ಯಾಕ್ಸ್ ಹಾಕಿದ್ದೀರಿ. ಇದನ್ನು ಯಾವ ತಳಹದಿಯ ಮೇಲೆ ಹಾಕಿದ್ದೀರೋ ಅದು ಗೊತ್ತಾಗುತ್ತಾ ಇಲ್ಲ. ಈ ಬಗ್ಗೆ ೧೯೭೭ರಲ್ಲಿ ಒಂದು ರೂಲ್ಸ್ ಮಾಡಿದ್ದೀರಿ. ಮಲೆನಾಡು ಪ್ರದೇಶದಲ್ಲಿ ೧,೨೫೦ ಮಿಲಿ ಮೀಟರ್ ಮಳೆ ಬರತಕ್ಕ ಜಾಗದಲ್ಲೂ ಕೂಡ ಭತ್ತಕ್ಕೆ ಇಂತಿಷ್ಟು ಎಂತಲೂ ಬೇರೆ ಬೆಳೆಗಳಿಗೆ ಇಂತಿಷ್ಟು ಎಂದು ಹಾಕಲಾಗಿ ಬಹು ವರ್ಷಗಳಿಂದ ಇದು ನ್ಯಾಯಾಲಯದಲ್ಲಿ ಇದ್ದು ಈಗ ಅವರು ಒಟ್ಟಿಗೇ ಕಟ್ಟಬೇಕೆಂದಾಗ ಅವರ ಜಮೀನು ಮಾಡಿದರೂ ಆ ಹಣವನ್ನು ಕಟ್ಟಲು ಆಗದಂತಹ ಪರಿಸ್ಥಿತಿ ಬಂದೊದಗಿದಾಗ ಈ ಸಮಸ್ಯೆಯನ್ನು ಸರ್ಕಾರ ಲಘುವಾಗಿ ತೆಗೆದುಕೊಳ್ಳದೇ ಆದಷ್ಟು ತ್ವರಿತವಾಗಿ ಈ ಒಂದು ಸಮಸ್ಯೆಗೆ ಸರ್ಕಾರ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಯಾಕೆಂದರೆ ಇಲ್ಲಿ ಮಳೆಯ ಪ್ರಮಾಣದ ಮೇಲೆ ಇರಿಗೇಷನ್ ಟ್ಯಾಕ್ಸ್ ಹಾಕುವುದಕ್ಕೆ ಬರುವುದಿಲ್ಲ. ಮಳೆ ಯಾವ ಪ್ರಮಾಣದಲ್ಲಿ ಬರುತ್ತದೆಂದು ನೋಡಿ ಲೆವಿಯನ್ನು ಹಾಕುವುದು ತಪ್ಪಾಗುತ್ತದೆ. ಅದರಲ್ಲೂ ನವಲಗುಂದ ರೋಣ ತಾಲ್ಲೂಕುಗಳು ಬಾಂಬೆ ಕರ್ನಾಟಕದಿಂದ ಬಂದಂತಹ ಒಂದು ಜಾಗಗಳು. ಬಾಂಬೆ ಕರ್ನಾಟಕದಲ್ಲಿ ಈ ಬಗ್ಗೆ ಒಂದು ಕನ್ಸಾಲಿಡೇಟೆಡ್ ಫಂಡ್ ಎಂದು ಮಾಡಿದ್ದರು. ಇಲ್ಲಿ ಮಳೆಯ ಪ್ರಮಾಣವನ್ನು ನೋಡಿಕೊಂಡು ಹಾಕಲಾಗುತ್ತಿದೆ. ಇದನ್ನು ಹಾಕುವುದಕ್ಕೆ ಬರುವುದಿಲ್ಲವೆಂದು ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಕಮಿಟಿಯನ್ನು ಮಾಡಿದ್ದಾರೆ. ಆದರೆ ಅದು ಯಾಕೋ ತ್ವರಿತ ಗತಿಯಿಂದ ತನ್ನ ಚಟುವಟಿಕೆಗಳನ್ನು ಮುಂದುವರಿಸುತ್ತಾ ಇಲ್ಲ, ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುವುದೇನೆಂದರೆ ಈ ಒಂದು ವಿಷಯವನ್ನು ಕೈಗೆ ಎತ್ತಿಕೊಂಡು ಈಗಾಗಲೇ ಇದರ ಬಗ್ಗೆ ಸಾಕಷ್ಟು ನಮ್ಮ ಸದಸ್ಯರು ತಿಳಿಸಿರುವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗಬೇಕು. ಇದನ್ನು ಮನಸಾರ ಮಾಡಿ ತೀವ್ರಗತಿಯಿಂದ ಪರಿಹಾರವನ್ನು ಒದಗಿಸಬೇಕು.

ನಮ್ಮ ಮಾನ್ಯ ಕಂದಾಯ ಮಂತ್ರಿಗಳು ಮೊನ್ನೆ ಒಂದು ಹೇಳಿಕೆಯನ್ನು ಕೊಟ್ಟು recovery of betterment levy and irrigation tax ಬಗ್ಗೆ ಸ್ಟೇ ಕೊಟ್ಟಿದ್ದೇವೆಂದು ಹೇಳಿರುತ್ತಾರೆ. ಆದರೆ ಜಿಲ್ಲಾಧಿಕಾರಿಗಳನ್ನು ಕೇಳಿದಾಗ ನಮಗೆ ಲಿಖಿತಮೂಲಕ ಬಂದಿಲ್ಲವಾದ ಕಾರಣ ನಾವು ಈ ವಿಷಯದ ಬಗ್ಗೆ ಒಪ್ಪುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿರುತ್ತಾರೆ. ಈ ಒಂದು ದೃಷ್ಟಿಯಿಂದ ಆದಷ್ಟು ತೀವ್ರವಾಗಿ ತಾವು ಲಿಖಿತಮೂಲಕ ಕಳುಹಿಸಿಕೊಡಬೇಕು. ಇಲ್ಲದಿದ್ದರೆ ಆ ಒಂದು ಭಾಗದ ರೈತರು ''ದಂಡು'' ಮಾಡುವುದು ಎಂದು ಏನು ಹೇಳುತ್ತಾರೆ ಆರೀತಿ ಎಲ್ಲ ಕಡೆಯೂ ಪಸರಿಸಿ ನಾಳೆ ಒಂದು ಜಿಲ್ಲೆಯಲ್ಲಿ ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಇದು ಹರಡಬಹುದು. ಇದನ್ನು ತಡೆಗಟ್ಟಬೇಕೆಂದರೆ ಒಂದು ದೊಡ್ಡ ಸಮಸ್ಯೆಯಾಗಿಯೇ ಪರಿಣಮಿಸಬಹುದು. ಆದ್ದರಿಂದ ಈ ಸಮಸ್ಯೆಯನ್ನು ತೀವ್ರವಾಗಿ ಪರಿಹಾರ ಮಾಡಲು ತಕ್ಷಣ ಲಿಖಿತ ಮೂಲಕವಾಗಿ ಜಿಲ್ಲಾಧಿಕಾರಿಗಳಿಗೆ ಆಜ್ಞೆಯನ್ನು ಕಳುಹಿಸಿಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ನವಲಗುಂದ್, ನರಗುಂದ್, ಹುಬ್ಬಳ್ಳಿಯಲ್ಲಿ ಆದಂತ ಘಟನೆ ರೈತರಿಂದ ಆದಂಥದ್ದು ಅಲ್ಲ. ಮಾನ್ಯ ಬಾವಿಯವರು ಹೇಳಿದಹಾಗೆ ಈ ಒಂದು ಕೃತ್ಯ ದುಷ್ಟಶಕ್ತಿಗಳು ಕೂಡಿ ಮಾಡಿರತಕ್ಕಂಥದ್ದಾಗಿರುತ್ತದೆ. ಆದ್ದರಿಂದ ಇಂಥ ದುಷ್ಟಶಕ್ತಿಗಳನ್ನು ಹುಡುಕಿ ತೆಗೆದು ಅವರಿಗೆ ಶಿಕ್ಷೆಯನ್ನು ವಿಧಿಸಬೇಕು ಎನ್ನುವ ಮಾತನ್ನುಹೇಳುತ್ತಾ ದುರ್ಘಟನೆಗೆ ಒಳಗಾದ ಸಬ್ ಇನ್‌ಸ್ಪೆಕ್ಟರಿಗೂ

ಮತ್ತು ಗಾಯಾಳುಗಳಾದ ರೈತರಿಗೂ ನನ್ನ ಸಂತಾಪವನ್ನು ಸೂಚಿಸುತ್ತಾ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI B.B. SAYANAK (Belgaum).—Mr. Speaker Sir, I welcome the suggestion of the Chief Minister that there should be a discussion on the firing that took place in Navalgund, Narund etc. Sir, the labour movement was started 80 to 100 years back in Bombay by the servants of India Society under the leadership of Sri M.M. Joshi. There are unions in labour class *i.e.*, Railway Unions and Government Servants Union *etc.*, and they are all fighting for their rights. Sir, 70% of the population consists of agriculturists in India and 50% are below the poverty line. When there was a price hike, I wanted to tell the Government at that time, that if agriculturists mind to halt the Government, they can and in such a case Government will not be there at all. This is not the first time that the farmers are united and have started an agitation. In Bombay, there is the Onion Producers Association. When the price of Onion came down, they started an agitation. There was a firing in that connection and the Government of Maharashtra had set up a judicial enquiry. So, sir this is not the first instance. I congratulate the people of Nargund and Navalgund because they have come together and they have joined together and have started an agitation. Sir, Navalgund is known for freedom fighters; I know it. Babasaheb Naragundker of Naragund was hanged by Britishers in Belgaum. They know how to fight against any Government and now there is a union. This agitation has been there for the last 2½ years. They are all fighting for the abolition of betterment levy and water tax, and they are asking to reduce the prices of fertilizers. When the people have been agitating for the last 2 years, is it not the duty of the Government to settle the matter? I am not abusing the Chief Minister, Sir Gundu Rao. He is not solely responsible, but the previous Government is also responsible and we are all also responsible. Though, we were fighting the Government had not come forward with a solution. What about the fate of the agriculturists? the sky is the roof of the agriculturistse all sides are the walls to them and land is the floor for them. They have no time limit. The labour unions and Government servants are fighting for 8 hours work. Agriculturists have no time limit and they have to work for the whole 24 hours. They have also to work in hot and winter seasons. Inspite of all these things, we are not caring for these people. What is this? We are all saying that we are all fighting for agriculturists. I swould ask how many of us have come forward to organise agriculturists. Now some people have come forward and organised them and they are all fighting for their rights. This is a good thing. Therefore, I suggest that the

Hon. Chief Minister go and visit those places. Whatever may be the pre-engagements, he must go immediately along with the Hon. Revenue Minister and settle this issue once for all. Please discuss with the representatives of agriculturists and give them some relief. Terror is prevading in that area, I know the agitation and I was also a victim (of police lathi charge. On account of lathi charge my right hand was fractured. Here one Asst. Sub-Inspector of Police has died and it is a sad thing. We must understand the reason why so many people have come forward and killed Asst. Sub-Inspector. Once again I request the Hon. Chief Minister to visit the affected areas along with the Hon. Minister for Reveuue and settle this issue once for all. Thank you sir.

೧೧-೦೦ ಎ. ಎಂ.

† ಶ್ರೀ ಜಿ. ಕೆ. ತೆಕ್ಕೇಡ್ (ಪರಸಗಡ).— ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಸವದತ್ತಿ ನರಗುಂದ, ನವಲಗುಂದ, ರೋಣ ಹಾಗೂ ಗದಗಿನ ಕೆಲವು ಭಾಗಗಳಲ್ಲಿ ನಡೆದಂಥ ಘಟನೆ ಏನಿದೆ ಇದು ಬಹಳ ಭೀಕರವಾದುದು ಮತ್ತು ನಮ್ಮೆಲ್ಲರಿಗೂ ಒಂದು ರೀತಿಯಲ್ಲಿ ದೊಡ್ಡ ಆಘಾತವಾಗಿದೆ. ನಾನು ಆದಿತ್ಯವಾರ ಅಂದರೆ ೨೦ನೇ ತಾರೀಖು ಮುನವಳ್ಳಿಯಲ್ಲಿದ್ದೆ. ಅಲ್ಲಿ ಜನರು ಬಹಳ ತೀವ್ರವಾಗಿ ಹೋರಾಟವನ್ನು ಮಾಡುತ್ತಿದ್ದಾರೆ ಎನ್ನುವ ಮಾತನ್ನು ಅಲ್ಲಿಯ ಕೃಷಿ ಕಾರ್ಮಿಕರು ನನ್ನ ಗಮನಕ್ಕೆ ತಂದರು. ನಾನು ಶನಿವಾರ ಇಲ್ಲಿಂದ ಊರಿಗೆ ಹೋಗುವಾಗ ಆ ದಿನ ರಾತ್ರಿ ನೇರವಾಗಿ ಮುನವಳ್ಳಿಗೆ ಹೋದೆ. ಅಲ್ಲಿ ಒಂದು ಗೋಡೆಯ ಮೇಲೆ ಹಸ್ತ ಪ್ರತಿಯನ್ನು ಹಚ್ಚಿದ್ದುದನ್ನು ನಾನು ನೋಡಿದೆ ಅದರಲ್ಲಿ ಈ ರೀತಿ ಇತ್ತು.

" ಸೋಮವಾರ ದಿನಾಂಕ ೨೧ರಂದು ಸವದತ್ತಿ ತಾಲ್ಲೂಕ್ ಬಂದ್ ಯಶಸ್ವಿಗೊಳಿಸಲು ಸಾರ್ವಜನಿಕರಲ್ಲಿ ವಿನಂತಿ.

ಸಾರ್ವಜನಿಕರೆ,

ರೈತರ ನ್ಯಾಯಯುತ ಬೇಡಿಕೆಗಳ ಕಡೆಗೆ ಸರ್ಕಾರದ ಆಲಕ್ಷ್ಯವನ್ನು ಪ್ರತಿಭಟಿಸಲು ಹಾಗೂ ಮಲಪ್ರಭಾ ಅಣೆಕಟ್ಟಿನಿಂದ ಹೆಚ್ಚು ನೀರು ಬಿಡುವುದರಿಂದ ಮುನವಳ್ಳಿ ಹಾಗೂ ಇತರ ಗ್ರಾಮಗಳಿಗಾಗುವ ಪ್ರಾಣ, ಆಸ್ತಿ ಹಾನಿಯನ್ನು ಕುರಿತು ಸರಕಾರದ ಗಮನ ಸೆಳೆಯಲು ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ವಿರೋಧಿಸಲು ಮಲ ಪ್ರಭಾ ನೀರಾವರಿ ಪ್ರದೇಶದ ರೈತ ಕೇಂದ್ರ ಸಮನ್ವಯ ಸಮಿತಿಯ ಆದೇಶದ ಮೇರೆಗೆ ದಿನಾಂಕ ೨೧-೭-೮೦ ಸೋಮವಾರ ನರಗುಂದ, ನವಲಗುಂದ, ಸವದತ್ತಿ ತಾಲ್ಲೂಕುಗಳಲ್ಲಿ ಒಂದು ದಿನದ ಪೂರ್ತಿ ಬಂದ್ ಆಚರಣೆ ಕೈಗೊಳ್ಳಲು ನಿರ್ಧರಿಸಿದ ಪ್ರಕಾರ ನಮ್ಮ ಪ್ರತಿಯೊಂದು ಗ್ರಾಮದಲ್ಲಿಯೂ ಅಂದು ಪೂರ್ತಿ ಬಂದ್ ಆಚರಣೆಯನ್ನು ಅಹಿಂಸಾತ್ಮಕವಾಗಿ ನೆರವೇರಿಸಬೇಕಾಗಿ ವಿನಂತಿ. ಅಂದು ಸವದತ್ತಿ ತಾಲ್ಲೂಕಾ ಸ್ಥಳದಲ್ಲಿ ವ್ಯಾಪಾರ, ಕೋರ್ಟ್, ಕಛೇರಿ, ಬ್ಯಾಂಕು, ಶಾಲೆ, ಕಾಲೇಜು ಮತ್ತು ಸಾರಿಗೆ ಸಂಪರ್ಕ ಸ್ಥಗಿತಗೊಳಿಸಿ ಬಂದ್ ಯಶಸ್ವಿಗೊಳಿಸಲು ಪ್ರತಿಯೊಂದು ಹಳ್ಳಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದು ಸೇರುವಂತೆ ಸಹಕರಿಸಬೇಕಾಗಿ ವಿನಂತಿ.

ರೈತರ ಬೇಡಿಕೆಗಳು ಈಡೇರಲಿ. ರೈತರ ಐಕ್ಯ ಹೋರಾಟಕ್ಕೆ ಜಯವಾಗಲಿ, ಸಂಚಾಲಕರು: ಸವದತ್ತಿ ತಾಲ್ಲೂಕ ರೈತ ಮತ್ತು ರೈತ ಕೂಲಿಕಾರರ ಸಂಘ, ಸವದತ್ತಿ''

ಇದು ಆ ಹಸ್ತಪ್ರತಿಯಲ್ಲಿದ್ದುದು. ನಾನು ಆ ದಿವಸ ನೇರವಾಗಿ ಆ ಸ್ಥಳಕ್ಕೆ ಹೋದೆ. ಇದಕ್ಕಿಂತ ೮ ದಿವಸದ ಹಿಂದೆ ಮಾನ್ಯ ಮುಖ್ಯ ಮಂತ್ರಿಯವರೂ ಮತ್ತು ನಾನೂ ಅಲ್ಲಿಗೆ ಹೋಗಿದ್ದೆವು. ಮುಂದ

ಹಳ್ಳಿ ಭಾಗದಲ್ಲಿ ಮಲಪ್ರಭಾ ಡ್ಯಾಂ ಇದೆ. ಅಲ್ಲಿಯ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಾದ ಶ್ರೀ ಅನಗೋಳ ಅವರು ಇಲ್ಲಿಯೇ ಕೂತಿದ್ದಾರೆ. ಈ ಅನಾಹುತಕ್ಕೆಲ್ಲಾ ಅವರೇ ಕಾರಣರು. ನಾನು ಅನೇಕಸಾರಿ ಇವರನ್ನು ಭೇಟಿ ಮಾಡಿ ಹೇಳಿದೆ, ನೀವು ೨೦ ಸಾವಿರ ಕ್ಯೂಸೆಕ್ಸ್ ನೀರನ್ನು ಇದುವರೆಗೂ ಬಿಡುತ್ತಿದ್ದಿರಿ, ಆದರೆ ಈಗ ೫೦ ಸಾವಿರ ಕ್ಯುಸೆಕ್ಸ್ ನೀರನ್ನು ಬಿಡುತ್ತೇವೆಂದು ಹೇಳಿ ಡಂಗೂರವನ್ನು ಹೊಡೆಸಿದ್ದೀರಿ. ಇದರಿಂದ ಆ ಅಚ್ಚುಕಟ್ಟು ಪ್ರದೇಶದಲ್ಲಿರತಕ್ಕ ರೈತರಿಗೆ ಬಹಳ ಹಾನಿಯಾಗುತ್ತದೆ ಎಂದು ಹೇಳಿದೆ. ಅವರು ಕೇಳಲಿಲ್ಲ.

ಸ್ವಾಮಿ, ನಿಮ್ಮ ಸರ್ಕಾರೀ ಅಧಿಕಾರಿಗಳು ರೈತರಿಗೆ ಎಷ್ಟು ಕಿರುಕುಳ, ಹಿಂಸೆ ಕೊಡುತ್ತಿದ್ದಾರೆ ಎಂಬುದನ್ನು ನಾನು ನೋಡುತ್ತಿರುತ್ತೇನೆ. ಹಿಂದೆ ೧೯೭೮ ರಲ್ಲಿಇದೇ ಮುನವಳ್ಳಿ ಭಾಗದ ರೈತರಿಗೆ ನೀರಿಲ್ಲದೆ ಬಹಳ ತೊಂದರೆಯಾಗಿದೆ, ಅವರ ಜಮೀನಿಗೆ ೫೦ ಸಾವಿರ ಕ್ಯೂಸೆಕ್ಸ್ ನೀರು ಬಿಡುತ್ತಿದ್ದೀರಿ. ಇದು ಸಾಲದು, ೮೦ ಸಾವಿರ ಕ್ಯುಸೆಕ್ಸ್ ನೀರನ್ನು ಬಿಡಬೇಕೆಂದು ಹೇಳಿದೆ, ಕೇಳಲಿಲ್ಲ. ಅನಂತರ ಮಾನ್ಯ ಮುಖ್ಯ ಮಂತ್ರಿಯವರು ಒಂದು ಕಾಗದವನ್ನೂ ಬರೆದುಕೊಟ್ಟರು, ಆದರೂ ಕೂಡ ಅಲ್ಲಿನ ಇಂಜಿನಿಯರ್‌ರವರು ನೀರನ್ನು ಬಿಡಲಿಲ್ಲ. ನಿಮ್ಮ ರೆವಿನ್ಯೂ ಅಧಿಕಾರಿಗಳು ರೈತರಿಗೆ ಹೆಚ್ಚು ಬೆಟರ್ ಮೆಂಟ್ ಲೆವಿಯನ್ನು ಹಾಕುವುದರ ಮೂಲಕ ಬಹಳ ಹಿಂಸೆಯನ್ನು ಕೊಡುತ್ತಿದ್ದಾರೆ. ಒಂದುಸಾರಿ ಮಾನ್ಯ ಮುಖ್ಯಮಂತ್ರಿಯವರು ದೆಹಲಿಗೆ ಹೋಗುವ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ಇದ್ದಾಗ ಅವರಿಗೆ ಪರಿಸ್ಥಿತಿ ಏನಿದೆ ಎಂಬುದನ್ನು ವಿವರಿಸಿ ಅವರಿಂದ ಒಂದು ಕಾಗದವನ್ನು ಬರೆಸಿಕೊಂಡು ಬಂದೆ. ಆದರೂ ಅದರಿಂದ ಏನೂ ಪ್ರಯೋಜನ ಆಗಲಿಲ್ಲ. ೧೯೭೪ರಲ್ಲಿ ನಾನು ಮತ್ತು ಮಾನ್ಯ ಆರ್. ಎಸ್. ಪಾಟೀಲರವರೂ ಆಗಿನ ಮುಖ್ಯಮಂತ್ರಿಯವರಾಗಿದ್ದ ಶ್ರೀಮಾನ್ ದೇವರಾಜ ಅರಸ್‌ರವರ ಹತ್ತಿರ ಹೋಗಿ ಈ ಸಾರಿ ಮಳೆ ಇಲ್ಲದೇ ಇರುವುದರಿಂದ ರೈತರು ಇಟ್ಟಿದ್ದ ಬೆಳೆಯೆಲ್ಲಾ ಹಾಳಾಗಿ ಹೋಗಿದೆ, ಅವರ ಜಮೀನಿಗೆ ನೀರು ಸಿಕ್ಕುತ್ತಿಲ್ಲ ಆದ್ದರಿಂದ ಅವರಿಗೆ ಬೆಟರ್‌ಮೆಂಟ್ ಲೆವಿ ಹಾಕಬೇಡಿ ಎಂದು ಕೇಳಿ ಕೊಂಡೆವು. ಆದರೆ ಅವರು ರಿಯಾಯಿತಿ ಕೊಡಲಿಲ್ಲ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಆರ್. ಎಸ್. ಪಾಟೀಲರು ಹೇಳಿದಂತೆ ಯಾವ ಬಡ ರೈತರಿಗೆ ಬೆಟರ್‌ಮೆಂಟ್ ಲೆವಿಯ ರಿಯಾಯಿತಿ ಸಿಕ್ಕಬೇಕಾಗಿತ್ತೋ ಅದು ಸಿಕ್ಕಲಿಲ್ಲ. ಈ ಅಧಿಕಾರಿಗಳಿಗೆ ಯಾರು ಕಾಸು ಕೊಡುತ್ತಾರೆ ಅಂಥವರಿಗೆ ಇವರು ಪರಿಹಾರವನ್ನು ಕೊಡುತ್ತಾರೆ. ಸ್ವಾಮಿ, ನಾವು ಇರಿಗೇಷನ್ ಡೇ ಎಂದು ಮಾಡಬೇಕೆಂದಿದ್ದೇವೆ. ತಮಗೆ ಒಂದ ಮುಖ್ಯವಾದ ಮಾತನ್ನು ಹೇಳಬೇಕೆಂದರೆ, ಇವತ್ತು ಅಲ್ಲಿ ಏನೊಂದು ದುರ್ಘಟನೆ ನಡೆದಿದೆ ಅದಕ್ಕೆ ಇಲ್ಲಿ ಕೂತಿರತಕ್ಕ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರೇ ಮುಖ್ಯ ಹೊಣೆಗಾರರಾಗಿದ್ದಾರೆ. ಆದ್ದರಿಂದ ಅವರಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಕೂಡಲೇ ಅವರನ್ನು ಸಸ್ಪೆಂಡ್ ಮಾಡಿ ಹೊರಗೆ ಕಳುಹಿಸಬೇಕು. ಇದರಿಂದಲೇ ಅಲ್ಲಿ ಲಾ ಅಂಡ್ ಆರ್ಡರ್ ಸಿಚುಯೇಷನ್ ಕ್ರಿಯೇಟ್ ಆಗಿರುವುದು. ಪೋಲೀಸ್ ಅಧಿಕಾರಿಗಳ ಮೇಲೆ ಜನ ದಾಳಿ ಮಾಡಿದ್ದಾರೆ, ಇದಕ್ಕೆ ಯಾರು ಕಾರಣರು? ಇದನ್ನು ನಾವು ಯೋಚನೆ ಮಾಡಬೇಕು. ಜನರ ಜೀವನವನ್ನು ರಕ್ಷಣೆ ಮಾಡತಕ್ಕ ಅಧಿಕಾರಿಗಳನ್ನು ನಾವು ಅಷ್ಟು ಲಘುವಾಗಿ ಕಾಣಬಾರದು. ಕೆಲವು ಪ್ರಭಾವಿ ಶಕ್ತಿಗಳು ರೈತರ ಸಂಘಟನೆಯನ್ನು ಮಾಡಿ, ಅವರಿಗೆ ಪ್ರಚೋದನೆ ಮಾಡಿ, ವಿಧ್ವಂಸಕ ಕೃತ್ಯಗಳನ್ನು ಮಾಡಿದ್ದಾರೆ ಎಂಬುದು ಇಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಯಾರು ತಪಿತಸ್ಥರಿದ್ದಾರೆ ಅವರಿಗೆ ಶಿಕ್ಷೆಮಾಡಿ. ಮುಗ್ಧ ಜನ ಯಾರಿದ್ದಾರೆ, ಯಾರು ತೊಂದರೆಗೊಳಗಾಗಿದ್ದಾರೆ ತಪಿತಸ್ಥರಿದ್ದಾರೆ ಅವರಿಗೆ ಪರಿಹಾರವನ್ನು ನೀಡಿ. ೧೯೭೬ರಲ್ಲಿ ನಾನು ಈ ವಿಚಾರದಲ್ಲಿ ಹೋರಾಟ ಮಾಡಿದ್ದೇನೆ ೧೯೭೪ರಲ್ಲಿ ರೈತರು ಹೋರಾಟ ಮಾಡಿದ್ದಾರೆ ಈಗ ೧೯೭೯-೮೦ರಲ್ಲಿ ಮತ್ತೆ ಅದೇ ರೀತಿಯ ಹೋರಾಟ ನಡೆದಿದೆ. ಮುನವಳ್ಳಿ ಗ್ರಾಮದ ರೈತರು ಈ ಹೋರಾಟ ಮತ್ತು ಬಂದನ್ನು ಆಚರಣೆ ಮಾಡಬೇಕೆಂಬ ಮಾತನ್ನು ಹೇಳಿದಾಗ ಸರ್ಕಾರದವರು ಬೇಸಿಗೆ ನೀರನ್ನು ಕೊಟ್ಟಿದ್ದಾರೆ. ಇನ್ನು ಒಂದು ತಿಂಗಳು ನೀರನ್ನು ಹೆಚ್ಚಿಗೆ ಕೊಟ್ಟರೆ ಮಾನ್ಯಮುಖ್ಯಮಂತ್ರಿಯವರನ್ನು ನಾನು ಅಭಿನಂದಿಸುತ್ತೇನೆ. ನಮ್ಮಕಡೆ ಈಗ ಶೇಂಗಾ ಬೆಳೆಗೆ ಬಹಳಹಾನಿಯಾಗಿದೆ. ನಮಗೆ ಪರಿಹಾರವನ್ನು ಸರ್ಕಾರದವರು ಕೊಡಬೇಕಾಗುತ್ತದೆ. ನಮ್ಮ ಸವದತ್ತಿ ಭಾಗದಲ್ಲಿ ಅರ್ಧಕೆಂಪು ಮಣ್ಣು ಅರ್ಧ ಕಪ್ಪು ಮಣ್ಣಿದೆ. ಸ್ವಾಮಿ ಗದಗು ಇನ್ನೂ ಮುಂತಾದ ಕೆಲವು ಭಾಗಗಳಲ್ಲಿ ಅಲ್ಲಿನ ಜನರು ಸಾಗುವಳಿ ಮಾಡುವುದಕ್ಕೆ ನೀರೂ ಕೂಡ ಇಲ್ಲವಾಗಿದೆ. ಅವರಿಗೆ ನೀರು ಇಲ್ಲದಿದ್ದರೂ ಅವರ ಮೇಲೆ ಬೆಟರ್‌ಮೆಂಟ್ ಲೆವಿಯನ್ನು ಹಾಕಿದ್ದೀರಿ. ಇದು ಸರಿಯೇ ? ಅವರ ನ್ಯಾಯವಾದ ಬೇಡಿಕೆಗಳೇನು ಎಂಬುದನ್ನು ನೋಡಿ ತೀವ್ರವಾಗಿ ಪರಿಶೀಲಿಸಿ ಪರಿಹಾರ ಕೊಡಬೇಕು. ಮಾನ್ಯ ಮುಖ್ಯಮಂತ್ರಿಯವರು ಸ್ವತಃ ಈ ಭಾಗಕ್ಕೆ ಭೇಟಿಕೊಡಬೇಕು. ಅಲ್ಲಿ ವಿಧ್ವಂಸಕ ಕೃತ್ಯಗಳು

ಪಡೆದಿವೆ, ಪೋಲೀಸ್ ಅಧಿಕಾರಿಗಳು, ಪೋಲೀಸರೂ, ಹಾಗೂ ರೈತರು ಇದರಲ್ಲಿ ಸತ್ತಿದ್ದಾರೆ. ಸತ್ತವರ ಬಗ್ಗೆ ನಮಗೆ ಪೂರ್ಣವಾಗಿ ಅನುಕಂಪ ಇದೆ. ಮಾನ್ಯ ಮುಖ್ಯಮಂತ್ರಿಯವರು ಸತ್ತವರ, ತೊಂದರೆ ಗೊಳಗಾದವರ ಕುಟುಂಬಗಳಿಗೆ ಪರಿಹಾರವನ್ನು ಕೊಡಬೇಕು. ಇದಕ್ಕೂ ಮುಂಚಿತವಾಗಿ ಈ ದುರ್ಘಟನೆಗೆ ಕಾರಣರಾಗಿರುವ ಸಂಬಂಧಪಟ್ಟವರು ಯಾರೇ ಆಗಿದ್ದರೂ ಅವರಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು.

ಇದರ ಪರಿಣಾಮ ಬೆಂಕಿ ರೂಪದಲ್ಲಿ ಬಂದಿದೆ. ನೆನ್ನೆ ನಡೆದಂತ ಘಟನೆಗಳು ಎಲ್ಲರಿಗೂ ಅತ್ಯಂತ ದುಃಖಕರವಾದ ಘಟನೆ ಇದು ರೈತರ ಕಿಚ್ಚನ್ನು ಎತ್ತಿ ತೋರಿಸಿದೆ, ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ರೈತನಮಗನಾಗಿದ್ದರಿಂದ ಆದ್ದರಿಂದ ಮೊನ್ನೆ ಊರಿಗೆ ಹೋದಾಗಲೂ ಕೂಡಾ ನನ್ನ ಹೊಲಕ್ಕೆ ಹೋಗಿ ಬಂದಿದ್ದೇನೆ.

ಚೇರ್‌ಮನ್: — ಮಾನ್ಯ ಸದಸ್ಯರು, ಈ ವಿಷಯಕ್ಕೆ ಸಂಬಂಧಪಟ್ಟಹಾಗೆ ಮಾತನಾಡಬೇಕು, ಅದನ್ನು ಬಿಟ್ಟು ಅವರು ತಮ್ಮ ಬಗ್ಗೆ ಮಾತನಾಡಲು ಹೊರಟರೆ ಕಷ್ಟವಾಗುತ್ತದೆ ಮತ್ತು ಮಾನ್ಯ ಸದಸ್ಯರಾದ ಆರ್. ಎಸ್. ಪಾಟೀಲ್‌ರ ಬಗ್ಗೆ ಮಾತನಾಡುವುದು ಈಗ ಬೇಡ. ಸಮಯದ ಒತ್ತಡವಿರುವುದರಿಂದ ದಯಮಾಡಿ ವಿಷಯಕ್ಕೆ ಸಂಬಂಧಪಟ್ಟದ್ದನ್ನು ಮಾತನಾಡಿ, ದಯಮಾಡಿ ಬೇಗ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಕೆ. ತೆಕ್ಕಡ್.—ನಮ್ಮ ಭಾಗದಲ್ಲಿ ಮಾವಿನ ಕೆರೆ ಎಂಬ ರೋಡು ಇದೆ ಎಲ್ಲಾ ನೀರನ್ನು ಅಲ್ಲಿ ಬಿಟ್ಟಿದ್ದಾರೆ, ನಮ್ಮ ಭಾಗದ ಸೂಪರಿಂಟೆಂಡಿಗ್ ಇಂಜಿನಿಯರ್ ಅವರಿಗೆ ಈ ವಿಷಯವನ್ನು ಹೇಳಿದಾಗ ಅವರು ಅದು ನನಗೆ ಬರುವುದಿಲ್ಲ, ಬೇರೆಯವರಿಗೆ ಬರುತ್ತದೆ ಎಂದು ಏನೋ ಒಂದು ಹೇಳಿಬಿಡುತ್ತಾರೆ. ರೈತರ ಸಮಸ್ಯೆಯನ್ನು ಬಗೆಹರಿಸುವುದರ ಬದಲು ಅದನ್ನು ಇನ್ನು ಹೆಚ್ಚು ಮಾಡುವಂತಹ ಅಧಿಕಾರಿಗಳಾಗಿದ್ದಾರೆ, ಆದ್ದರಿಂದ ಅಲ್ಲಿಗೆ ಯೋಗ್ಯ ಅಧಿಕಾರಿಗಳು ಬಂದರೆ ಈ ಸಮಸ್ಯೆಗಳು ಬಗೆಹರಿಯುತ್ತವೆ, ಈಗ ಏನು ಅಶಾಂತಿ ನಿರ್ಮಾಣವಾಗಿದೆ ಅದನ್ನು ಶಾಂತಿಮಾಡಲು ಯೋಗ್ಯ ಕಾರ್ಯಕ್ರಮ ತೆಗೆದುಕೊಳ್ಳಬೇಕು...ಮಾನ್ಯ ಆರ್. ಎಸ್. ಪಾಟೀಲರು ಮಾತನಾಡುವಾಗ ಇದು ಏನೋ ಸಣ್ಣ ವಿಷಯವೆನ್ನುವ ರೀತಿ ತಿಳಿದಹಾಗೆ ಆಯಿತು.

ಶ್ರೀ ಆರ್. ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೆ, ಇದು ರೈತರ ಸಮಸ್ಯೆ ಇದನ್ನು ಸಣ್ಣ ವಿಷಯವೆಂದು ತೆಗೆದುಕೊಳ್ಳುವಂತಿಲ್ಲ ಎಂದು ಹೇಳಿದರೆ, ಮಾನ್ಯ ತೆಕ್ಕಡ್‌ರವರು ಇದು ಸಣ್ಣ ವಿಷಯ ಎಂದು ಹೇಳಿದರು ಎನ್ನುವ ಹಾಗೆ ಮಾತನಾಡುತ್ತಿದ್ದಾರೆ?

ಶ್ರೀ ಜಿ.ಕೆ. ತಕ್ಕಡ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಆರ್. ಎಸ್. ಪಾಟೀಲರು ಆ ರೀತಿ ಮಾತನಾಡಿದರು ಎಂದು ಹೇಳಲಿಲ್ಲ. ಈ ವಿಚಾರವಾಗಿ ದೊಡ್ಡ ಬೇಡಿಕೆಗಳು ಇವು ಸಣ್ಣ ಬೇಡಿಕೆ ಎಂದು ತಿಳಿಯಬೇಕಾಗಿಲ್ಲ. ಇದು ಬಹಳ ಮಹತ್ವದ ವಿಷಯವಿದೆ, ಇದು ಸಣ್ಣ ವಿಷಯವೆಂದು ಅವರು ಹೇಳಿದರು ಎಂದು ನಾನು ಹೇಳಲಿಲ್ಲ. ಅಧಿಕಾರಿಗಳು ಒಂದೇ ದಿವಸದಲ್ಲಿ ಇಷ್ಟು ಗಲಭೆಗೆ ಅವಕಾಶ ಮಾಡಿದರು ಎಂದು ಹೇಳಿದೆ ಅಷ್ಟೇ. ಆದ್ದರಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಘಟನೆ ನಡೆದಿರುವ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ, ಅಲ್ಲಿ ಏನು ಅಶಾಂತಿ ನಿರ್ಮಾಣವಾಗಿದೆ ಅದನ್ನು ಶಾಂತಿ ಉಂಟು ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಮತ್ತೆ ಈ ಅಶಾಂತಿ ಉಂಟುಮಾಡಲಿಕ್ಕೆ ಯಾರೋ ಕೆಲವು ಗೂಂಡಾಗಳು ಜನರನ್ನು ಪ್ರಚೋದನೆ ಮಾಡಿದ್ದಾರೆಂದು ನನಗೆ ತಿಳಿಯುತ್ತದೆ. ಆದ್ದರಿಂದ ಮತ್ತೊಮ್ಮೆ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಈ ಒಂದು ಸಮಸ್ಯೆಯನ್ನು ತರಬಯಸುತ್ತೇನೆ. ಈ ಅಹಿತಕರ ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ ಈ ಬಗ್ಗೆ ಸದನದ ಒಂದು ಸಮಿತಿಯನ್ನು ಮತ್ತು ಜುಡಿಷಿಯಲ್ ಎನ್‌ಕ್ವೈಯರಿ ಮಾಡಿಸಬೇಕು ಎಂದು ಹೇಳುತ್ತೇನೆ. ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ಮಾಡಬೇಕೆಂದು ಹಾಗೂ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ) —ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಎಲ್ಲರ ಊಹೆಗೂ ಮಿತಿ ಮೀರಿದ ಘಟನೆ ನಡೆದುಹೋಗಿದೆ. ಈ ಒಂದು ಘಟನೆಯಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ರೈತರು ಪ್ರಾಣ ತೆತ್ತಿದ್ದಾರೆ. ಬಹುಶಃ ಈ ಘಟನೆಯನ್ನು ಯಾರೂ ಊಹೆ ಮಾಡದೆ ಇದ್ದರೂ ನಾವು ಇದನ್ನು

ಒಳಹೊಕ್ಕು ನೋಡಿದರೆ, ಇದರಲ್ಲಿ ಕೆಲವು ಅಧಿಕಾರಿಗಳ ಅಶ್ರದ್ಧೆಯಿಂದ ನಡೆಯಿತು ಎಂದು ಹೇಳಿದರೆ ತಪ್ಪಾಗಲಾರದು. ಈ ಘಟನೆಯನ್ನು ಎರಡು ದೃಷ್ಟಿಯಿಂದ ನೋಡತಕ್ಕಂಥಾದ್ದು ಸೂಕ್ತವೆಂದು ಮಾನ್ಯ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ ಮಾತನಾಡುವಾಗ ಹೇಳಿದರು. ಅದು ಸರಿ, ನಿನ್ನೆ ಏನು ಫೈರಿಂಗ್ ನಡೆದಿದೆ ಅದರಲ್ಲಿ ಇಬ್ಬರು ಅಧಿಕಾರಿಗಳು ಇಬ್ಬರು ರೈತರು ಸತ್ತಿದ್ದಾರೆ, ಇದಕ್ಕೆ ಕಾರಣ ವೇನು ? ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದು ಒಂದು ಭಾಗ. ನಿನ್ನೆ ನಡೆದ ಘಟನೆ ನಿನ್ನೆ ರೂಪುಗೊಂಡಂತಹದ್ದು ಅಲ್ಲ. ಈ ಚಳುವಳಿ ಪ್ರಾರಂಭವಾದದ್ದು ಮೇ ತಿಂಗಳಲ್ಲಿ. ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿ ಟೂರ್ ಹೋಗಿದ್ದು, ಆಗ ಅವರು ನಮ್ಮ ಕಾರ್ಯಕ್ರಮವನ್ನು ತಿಳಿದುಕೊಂಡು ಹುಬ್ಬಳ್ಳಿಯಲ್ಲಿ ಕಾರ್ಪೊರೇಷನ್ ಆಫೀಸಿನಲ್ಲಿ ನಮ್ಮ ಸಭೆ ನಡೆಯುವ ಸ್ಥಳಕ್ಕೆ ರೈತರು ಮೆರವಣಿಗೆಯಲ್ಲಿ ಬಂದು ಹೇಳಿದರು ನಮಗೆ ನೀರು ಕೊಡದೆ ಇದ್ದರೂ ಬೆಟರ್‌ಮೆಂಟ್ ಲೆವಿ ಹಾಕಿದ್ದಾರೆ ಮತ್ತೆ ವಾಟರ್ ರೇಟು ಹಾಕಿದ್ದಾರೆ ಇದು. ಸರಿಯೇ ? . ನಮ್ಮ ಅಧಿಕಾರಿಗಳಲ್ಲಿ ಎಷ್ಟು ಮನವಿ ಕೊಟ್ಟರೂ ನಮ್ಮ ಅಹವಾಲನ್ನು ಕಾರ್ಯಗತಮಾಡಲು ತಯಾರಿಲ್ಲ, ಆದ್ದರಿಂದ ದಯಮಾಡಿ ನೀವು ಸ್ಥಳಕ್ಕೆ ಬಂದು ನೋಡ ಬೇಕು ಎಂದು ಹೇಳಿದರು. ನಾವು ಸ್ಥಳಕ್ಕೆ ಹೋಗಿ ನೋಡಿದೆವು ಅವರನ್ನು ಮತ್ತೆ ಬಂದು ನಮ್ಮನ್ನು ಕಾಣಬೇಕೆಂದು ಸ್ಥಳದಲ್ಲಿ ಹೇಳಿದ್ದೆವು. ಅವರು ಬರಲಾಗಲಿಲ್ಲ. ಆಮೇಲೆ ಮುಂದಿನ ಕ್ಯಾಂಪ್ ಮಲಪ್ರಭಾ ದಲ್ಲಿ ಮಾಡಿದ್ದೆವು, ಆ ಸ್ಥಳಕ್ಕೆ ಬರಲಾಗಲಿಲ್ಲ ಎಂದು ಅವರು ಎಲ್ಲಾ ವಿವರಗಳನ್ನು ತೋರಿಸಿ ಇದನ್ನು ತಾವು ಪರಿಶೀಲಿಸುವುದಾದರೆ ಏನು ನೀವು ಹೇಳುತ್ತೀರಿ ಅದನ್ನು ಬೇಕಾದರೆ ರುಜುವಾತು ಮಾಡಲಿಕ್ಕೆ ತಯಾರಿದ್ದೇವೆ ಎಂದು ಹೇಳಿದರು. ನಮ್ಮ ಆಫೀಸರ್ಸ್ ವಸೂಲಿ ಮಾಡುವುದನ್ನು ನಿಲ್ಲಿಸಬೇಕೆಂದು ಕೇಳಿಕೊಂಡರು. ಅದರ ಮೇಲೆ ನಮ್ಮ ಸಮಿತಿಯ ಅಧ್ಯಕ್ಷರು, ಸರ್ಕಾರಕ್ಕೆ ಕಾಗದ ಬರೆದರೂ, ಬರೆದ ಮೇಲೂ ಸರ್ಕಾರದ ಗಮನವನ್ನು ಸೆಳೆದರೂ ಕೂಡ ರೈತರ ಬಗ್ಗೆ ಇವರು ಏನು ಕಾರ್ಯಕ್ರಮ ತೆಗೆದು ಕೊಳ್ಳದೇ ಇರುವುದರಿಂದ ಅವರಿಗೆ ಬೇರೆ ಮಾರ್ಗವಿಲ್ಲದೆ ನಿನ್ನೆ ನಡೆದ ಘಟನೆಗೆ ಅವಕಾಶವಾಗಿದೆ. ಘಟನೆಯಲ್ಲಿ ಫೈರಿಂಗ್ ಆಗಿದೆ ಆ ರೈತರು ಏನು ಉಪವಾಸ ಕೂತಾಗ ಬಹುಶಃ ಪೋಲಿಸರು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸುಮ್ಮನೆ ಇದ್ದರೆ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗುತ್ತಾ ಇರಲಿಲ್ಲ. ಅವರನ್ನು ಅಲ್ಲಿಂದ ಹೊರಡಿಸಲಿಕ್ಕೆ ಪ್ರಯತ್ನ ಮಾಡುವಾಗ ಅವರ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ನೆರೆದಿದ್ದ ಗುಂಪಿನಲ್ಲಿ ಉದ್ರಿಕ್ತವಾತಾವರಣ ಉಂಟಾಗಿದೆಯೆಂದು ನನಗನಿಸುತ್ತದೆ. ಆದ್ದರಿಂದ ಇದರಲ್ಲಿ ಜುಡಿಷಿಯಲ್ ಪ್ರೋಬ್ ನೆಸಸರಿ ಎಂದು ಹೇಳುತ್ತೇನೆ. ತಾವು ಅಧಿಕಾರಿಗಳಿಂದ ರಿಪೋರ್ಟು ತರಿಸುತ್ತೇ ನೆಂದು ಹೇಳುತ್ತೀರಿ, ಯಾವ ಅಧಿಕಾರಿಯಿಂದ ತಾವು ರಿಪೋರ್ಟು ತರಿಸುತ್ತೀರಿ ಅವರು ಒಂದು ಪಕ್ಷ ತಪ್ಪು ಮಾಡಿದ್ದರೂ ಕೂಡ ಅನಿವಾರ್ಯವಾಗಿ ಇದು ನಡೆದಿದೆಯೆಂದು ಹೇಳುತ್ತಾರೆ. ಘಟನೆಯ ಮೇಲೆ ಸತ್ಯಾಂಶ ದೊರೆಯಬೇಕು ಎಂದರೆ ಜುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡಿ. ಇದನ್ನು ಹೇಗೆ ನಡೆಯಿತು ಎನ್ನುವ ಬಗ್ಗೆ, ಮತ್ತು ತಪ್ಪಿತಸ್ಥರು ಯಾರು ಎನ್ನುವ ಬಗ್ಗೆ ತಿಳಿದುಕೊಳ್ಳಬಹುದು ಎಂದು ನಾನು ಹೇಳುತ್ತೇನೆ. ಈ ಚಳುವಳಿ ಸುಮಾರು ೨ ತಿಂಗಳಿಂದಲೂ ನಡೆದಿದ್ದರೂ ಏತಕ್ಕೆ ಅಧಿಕಾರಿಗಳು ಸುಮ್ಮನೆ ಇದ್ದರು ? ನೀರು ಹೋಗದ ಕಡೆಯಲ್ಲಿ ವಾಟರ್ ರೇಟ್ ಮತ್ತು ಬೆಟರ್‌ಮೆಂಟ್ ಲೆವಿ ಹಾಕಿದರೆ Does he deserve to be an officer ? Why can't you dismiss and send him out ? The Government must investigate into the matter by conducting an imparitial enquiry. ದಯಮಾಡಿ ಇದರ ಬಗ್ಗೆ ಇಂಪಾರ್ಷಿಯಲ್ ಎನ್‌ಕ್ವೈರಿ ಮಾಡಿಸಿ ಅನ್ಯಾಯವಾಗಿ ಯಾರು ಇದರಲ್ಲಿ ನಡೆದುಕೊಂಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು ಇಲ್ಲವಾದರೆ ಅವರು ನಿರಪರಾಧಿಗಳಾದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳಿ ಎಂದು ನಾವು ಹೇಳುವುದಿಲ್ಲ. The officers has deliberately failed in discharging his duties. He is harassing the poor farmers. ಸರ್ಕಾರ ರೈತರಿಗೆ ರಕ್ಷಣೆ ಕೊಡದಿದ್ದರೆ ರೈತನಿಗೆ ರಕ್ಷಣೆ ಯಾರು ಕೊಡಬೇಕು ಎಂದು ನಾನು ಕೇಳುತ್ತೇನೆ.

ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಎನ್‌ಕ್ವೈರಿ ಆದಾಗ ಅಂಥಾ ಅಧಿಕಾರಿಗಳ ಮೇಲೆ ತೀವ್ರಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ತಕ್ಕೇಡ್ ಅವರು ರೈತರ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಅದು organised ಆಗಲೀ unorganised ಆಗಲೀ ಅವರ ಬೇಡಿಕೆಗಳನ್ನು ಪರಿಶೀಲನೆ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಅವರ ಬೇಡಿಕೆಗಳನ್ನು ಇಷ್ಟು ದಿವಸಗಳವರೆಗೂ ಅನಾದರಣೆ ಮಾಡಿದ್ದು ಸರ್ಕಾರದ ತಪ್ಪು. ಇದು

ಸರಿಯಾದ ಸಮಯ. ಅವರು ಸರ್ಕಾರದಿಂದ ಏನು ಪರಿಹಾರವನ್ನು ಕೇಳುತ್ತಾರೆ ಅದನ್ನು ಕೊಡತಕ್ಕದ್ದು ಸರಿ. ಅವರಿಗೆ ಪರಿಹಾರವನ್ನು ಕೊಡುವ ಸಂಬಂಧದಲ್ಲಿ ಶಾಸಕರ ಒಂದು ಕಮಿಟಿಯನ್ನು ಮಾಡಿ ಎಂದು ಸರ್ಕಾರದವರನ್ನು ಕೇಳಿದ್ದಾರೆ ಅದನ್ನು ಮಾಡಬೇಕು. ನಿನ್ನೆ ನಡೆದಿರತಕ್ಕ ಘಟನೆಗಳ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡತಕ್ಕದ್ದು ಅವಶ್ಯಕ. ಅವರ ಸತ್ಯಾಂಶವನ್ನು ತಿಳಿಯುವುದಕ್ಕೆ ಸರ್ಕಾರ ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

(Sri H. T. Krishnappa in the chair)

CHAIRMAN.—Please avoid repitition as far as possible. I am not shutting out the opportunities to others. Please speak only for five minutes.

† SRI K. BHASKAR NAIDU.—From the time I read this morning from the newspapers the hastly incidents that have taken place after listening to the members, my memory goes back to Jalianwallabagh shooting. I can imagine the pitched battle that should have gone on between the police and the ryots. I am not saying that the police are at wrong not the ryots are at wrong. I know the police have to bear the brunt of it. Unfortunately, two Policemen have died with their boots on. It is not the Police that should be blamed, it is not the ryots that should be blamed, it is we who should be blamed and the revenue officials and officers of the P.W.D that should be blamed. Sir, we take an issue with all vehemence only when we reach the end of the story. We know that this issue was there since 1976. We did not do anything. This satyagraha should not have been started from the ryots, the satyagraha should have been started from us. In this House, I find with my 2½ years of experience, even on just cause we divide by saying that it is at party issue and this party issue, but we will not decide the issue on honest facts, So the blame is entirely ours. We should have offered Satyagraha. If any body was shot by the Police, it is you and me because we have failed in our responsibility to bring to the notice of the Government. I agree that we were sleeping over this matter since 1976.

To-day's incident is a tragedy in this country, in these days of independence. It should not have happened. In a peace-loving state like ours. Sir, I once again say that it is not the mistake of the Police. My heart goes to them and also the ryots who have been suffering. Well Sir, I know the entire blame should be ours. I know that this is not the beginning of the end. Why I speak about it is because last time also when I spoke about lakhs of rupees that was due by the ryots in my area Thungabhadra ayacut, I had brought to the notice of the Government about the suffering of the ryots. If a man grows, a crop other than the one that he is expected to grow, he is levied 60 times revenue which is not worth the crop that he has grown. In this way the arrears have accumulated. I know the

revenue officers go there just at the time of election to pull their doors and demand to pay lakhs of rupees. We, Politicians only rise at the time of election and assure them that we will stop the collection of revenue because we will have a purpose to achieve. This has been happening every time on the eve of elections.

The tragedy is not the tragedy of ryots alone, it is the tragedy of our country it is the tragedy of our State. The ryots have always been treated as under-dogs. It is not the number of dogsthat are in the fight, it is the fight in the dog that is more important They are awaken now. The ryot is not going to stop it· I apOealto my Hon. Chief Minister that non Committee of this House or the judical enquiry will serve the purpose. You are the only man who have the strength and mind to do it, you can solve this problem just like that No committees are wanted, nothing is wanted You can solve this problemwithin 24 hours if you make up your mind. Now is the time for you to give succour to the poor ryots, write off the dues and help them to get the fertitiser. It is the question of forget and forgive. The ryots are innocent people. they will not have any vengeance. I request you to go there immediately without anybody's assistance. I don't want to go their with your Police and Revenue officials. Go to them with a clear heart, and appeal to them that whatever has happened, due to error and they would surely forgive us and forget the whole incident.

ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ ಇದುವರೆಗೂ ನಿನ್ನೆ ನಡೆದ ಘಟನೆಯ ಬಗ್ಗೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಆ ಘಟನೆಯ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು. ರೈತರ ಕುಂದುಕೊರತೆಗಳನ್ನು ವಿಚಾರಿಸಿ ಅವರಿಗೆ ಪರಿಹಾರ ವನ್ನು ಒದಗಿಸುವ ಬಗ್ಗೆ ಈ ಸದನದ ಶಾಸಕರ ಒಂದು ಸಮಿತಿಯನ್ನು ನೇಮಿಸುವ ಬಗ್ಗೆ ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಈಗ ಘಟನೆಗಳು ಎಲ್ಲೆಲ್ಲಿ ನಡೆದಿದೆ ಆ ಘಟನೆಗಳ ಬಗ್ಗೆ ರುಜುವಾತು ಮಾಡುವುದಕ್ಕೆ ಪ್ರತ್ಯಕ್ಷದರ್ಶಿ ಯಾರೂ ಇಲ್ಲ. ಈಗ ರೈತರ ಬೇಡಿಕೆಗಳು ಏನಿವೆ ಅವುಗಳನ್ನು ಈಡೇರಿಸು ವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ಮಾಡಬೇಕೋ ಅದನ್ನು ಮಾಡಬೇಕು ಇದರ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿ ವಿವರಗಳನ್ನು ಪಡೆಯುವುದು ಅವಶ್ಯಕ. ಇವೊತ್ತು ಘಟನೆ ಏನು ನಡೆದಿದೆ ಇದರ ಹಿನ್ನಲೆಯುಲ್ಲಿ ಮಾನ್ಯ ಸದಸ್ಯರು ಪೋಲೀಸಿನವರನ್ನೂ ಆಪಾದನೆ ಮಾಡುತ್ತಿದ್ದಾರೆ. ಸರ್ಕಾರಿ ಅಧಿಕಾರಿಗಳನ್ನೂ ಆಪಾದನೆ ಮಾಡುತ್ತಿದ್ದಾರೆ.

೧೧–೩೦ ಎ.ಎಂ.

ನಾನು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ನಮಗೆ ಅಲ್ಲಿ ವಿಷಯ ಸರಿಯಾಗಿ ಗೊತ್ತಿಲ್ಲ. ವಿಷಯ ಸರಿಯಾಗಿ ಗೊತ್ತಿಲ್ಲದೆ ಈಗ ಏಕಪಕ್ಷೀಯವಾಗಿ ಆಪಾದನೆ ಮಾಡುವು ದಾದರೆ ಆಮೇಲೆ ಮತ್ತೊಂದು ಸಮಸ್ಯೆ ಉದ್ಭವವಾಗಿ ಯಾವ ಕಡೆಗೆ ಹೋಗುತ್ತದೋ ಅನ್ನುವ ಒಂದು ಭೀತಿ ಇದೆ. ವಿಷಯ ಸರಿಯಾಗಿ ಗೊತ್ತಿಲ್ಲದೆ ಅಧಿಕಾರಿಗಳ ಮೇಲೆ ಆಪಾದನೆ ಮಾಡುವುದಕ್ಕೆ ಹೋದರೆ ನಾವು ಇನ್ನೊಂದು ಚಳುವಳಿಯನ್ನು ಎದುರಿಸಬೇಕಾಗಿ ಬರಬಹುದು ಎನ್ನುವ ಭೀತಿ ಇದೆ. ಆದುದರಿಂದ ನಾನು ಈ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಅಲ್ಲಿಗೆ ಹೋಗ ದಿದ್ದ ಕಾರಣ ನಿನ್ನೆ ನಡೆದಂಥಾ ಘಟನೆಯುಲ್ಲಿ ನಿಜವಾಗಿ ಯಾರು ತಪ್ಪಿತಸ್ಥರು ಅನ್ನುವುದನ್ನು ನಿರ್ಣಯ ಮಾಡಿ, ಈಗಲೇ ಹೇಳುವುದು ಅಷ್ಟು ಉಚಿತವಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಆ ಪ್ರದೇಶದಿಂದ ಬಂದಂಥಾ ಸದಸ್ಯರು ಅಲ್ಲಿಯ ಅನುಭವ, ಅಲ್ಲಿಯ ಪರಿಸ್ಥಿತಿ ಚೆನ್ನಾಗಿ ತಿಳಿದುಕೊಂಡಿರುವುದರಿಂದ ಅವರು ಅಲ್ಲಿ ನಡೆದಂಥಾ ಘಟನೆ ಬಗ್ಗೆ ಹೇಳುತ್ತಾರೆ. ಅದು ತಮ್ಮ ಮನಸ್ಸಿಗೆ ಹಿಡಿಸುವುದಿಲ್ಲ ಎನ್ನುವುದು ಸರಿಯಲ್ಲ.

ಶ್ರೀ ಪಿ. ರಾಮ್‌ದೇವ್.—ಒಟ್ಟಿನಲ್ಲಿ ನಾನು ಹೇಳುವುದು ಅವರ ಮೇಲೆ ಆಪಾದನೆ ಮಾಡುವುದು ಬೇಡ.

ಛೇರ್ಮನ್.—ಮಾನ್ಯ ಸದಸ್ಯರುಗಳ ಭಾವನೆಗಳು ಏನೇನು ಇವೆ ಅವರ ಮನಸ್ಸಿನಲ್ಲಿ ಏನೇನು ವಿಚಾರಗಳನ್ನು ಹೇಳಬೇಕು ಅಂತ ಇದೆ ಅದನ್ನು ಹೇಳುವುದಕ್ಕೆ ಯಾರೂ ಅಡ್ಡಿ ಬರಬಾರದು. ತಮಗೆ ಹೇಳುವುದಕ್ಕೂ ಸಹ ಅವಕಾಶ ಕೊಡುತ್ತೇನೆ, ಯಾರೂ ಅಡ್ಡಿ ಬರುವುದಿಲ್ಲ.

ಶ್ರೀ ರಾಮ್‌ಭಟ್.—ಶಿವಮೊಗ್ಗಾದಲ್ಲೂ ಕೂಡ ಪೋಲೀಸಿನವರ ಮುಷ್ಕರ ನಡೆದಿದೆ ಎನ್ನುವ ಬಗ್ಗೆ ಈವೊತ್ತು ವರ್ತಮಾನ ಬಂದಿದೆ. ನಿಜವಾಗಿ ಅಲ್ಲಿ ಆಗತಕ್ಕಂಥಾ ವಿಚಾರವೇ ಬೇರೆ. ಮುಂದೆ ಹೀಗಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಥಕ್ಕೇಹೋರವರು ಹೇಳಿದ್ದಾರೆ. ನಿಜವಾಗಿ ಅಲ್ಲಿ ಏನು ವಿಚಾರ ನಡೆದಿದೆ ಎನ್ನುವ ಬಗ್ಗೆ ಸರಿಯಾಗಿ ಯಾರಿಗೂ ಗೊತ್ತಿಲ್ಲದೇ ಇರುವುದರಿಂದ ನಾವು ನೇರವಾಗಿ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಪೋಲೀಸ್ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಪಿ. ಡಬ್ಲ್ಯೂ. ಡಿ. ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಎಂದು ಆಪಾದನೆ ಮಾಡುವುದು ಅಷ್ಟು ಸರಿಯಲ್ಲ. ಅವರುಗಳ ಮೇಲೆ ಆಪಾದನೆ ಮಾಡಬೇಕಾದರೆ ಜವಾಬ್ದಾರಿ ಹೊತ್ತಂಥಾ ನಾವುಗಳೂ ಕೂಡ ಜವಾಬ್ದಾರರು ಆಗಬೇಕಾಗುತ್ತದೆ. ಪೋಲೀಸ್ ಅಧಿಕಾರಿಗಳಾಗಲಿ ಪಿ. ಡಬ್ಲ್ಯೂ. ಡಿ. ಅಧಿಕಾರಿಗಳಾಗಲಿ ಅಥವಾ ಯಾವ ಅಧಿಕಾರಿಗಳಾಗಲಿ ತಪ್ಪು ಮಾಡಿದ್ದರೆ ಅದರ ಬಗ್ಗೆ ನಿಷ್ಪಕ್ಷಪಾತವಾದ ಒಂದು ತನಿಖೆ ನಡೆಯಬೇಕೇ ವಿನಹ ವಿನಾ ಕಾರಣ ನೇರವಾಗಿ ಅವರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ರೈತರ ಕಷ್ಟ ಯಾವ ರೀತಿ ಇದೆ ಎನ್ನುವ ಬಗ್ಗೆ ಇದುವರೆಗೂ ಕೂಡ ಯಾರೂ ಚಿಂತನೆ ಮಾಡಿಲ್ಲ. ಈ ಚಿಂತನೆ ಮಾಡತಕ್ಕಂಥಾ ವರು ಯಾರು? ಸರ್ಕಾರ. ಆದುದರಿಂದ ಇದಕ್ಕೆ ಸರ್ಕಾರವೇ ಹೊಣೆಯಾಗಬೇಕು, ಹಿಂದೆ ಮಾಡಿದ ಹಾಗೆ ಈ ಬಗ್ಗೆ ಮಾನ್ಯ ಸದಸ್ಯರುಗಳೂ ಕೂಡ ಭಾಗಿಯಾಗಿರುವುದರಿಂದ ಸದಸ್ಯರು ಅಲ್ಲಿಗೆ ಹೋಗಬೇಕು, ಈ ಬಗ್ಗೆ ಸದಸ್ಯರ ಸಮಿತಿಯೊಂದು ಆಗಬೇಕು, ಜೊತೆಗೆ ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಎಂದು ಹೇಳಿ ಇದಕ್ಕೆ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).— ಮಾನ್ಯ ಅಧ್ಯಕ್ಷರೇ, ನಾನು ತಮಗೆ ಒಂದು ಮಾತು ಹೇಳುವುದಾದರೆ ಒಡ್ಡ ಒಂದು ಕಲ್ಲು ಒಡೆಯಬೇಕಾದರೆ ೧೦-೧೫ ಪಟ್ಟು ಒಡೆದ ನಂತರ ಕೊನೆಗೆ ಒಂದು ಸಾರಿ ಅದು ಬಿಡುತ್ತದೆ. ಹಾಗೆ ಈ ಒಂದು ಘಟನೆ ಹಿಂದಿನಿಂದಲೂ ಬಂದಿದ್ದು ಈಗ ಅದು ಸ್ಫೋಟಗೊಂಡಿದೆ ಅಷ್ಟೆ. ಇದಕ್ಕೆ ಕಾರಣ ಏನು ಎಂದರೆ ನನ್ನ ಅನುಭವದಲ್ಲಿ ಹೇಳಬೇಕಾದರೆ ೩೦ ವರ್ಷದಿಂದಲೂ ಕೂಡ ಈ ಡೆಮಾಕ್ರಸಿಯಲ್ಲಿ ಯಾವುದೇ ಸರ್ಕಾರ ಇರಲಿ ಆ ಸರ್ಕಾರ ಈ ರೈತನ ಬಗ್ಗೆ ಸರಿಯಾದಂಥಾ ನ್ಯಾಯ ಕೊಟ್ಟಿಲ್ಲವಾದ್ದರಿಂದ ಈ ಒಂದು ಪರಿಸ್ಥಿತಿಗೆ ಬಂದಿದೆ. ಅಲ್ಲದೆ ತಮಗೆ ಇನ್ನೂ ಹೇಳಬೇಕಾದರೆ ಈ ಬಗ್ಗೆ ಏನು ಎನ್‌ಕ್ವೈರಿ ಮಾಡಬೇಕೋ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತಾ ಇಲ್ಲ ಮೇಲಾಗಿ ೩೦ ವರ್ಷದಿಂದ ಈವೊತ್ತಿನವರೆಗೂ ಕೂಡ ರೈತನ ಬಗ್ಗೆ ಕೇಳುವವರೂ ಇಲ್ಲ ಹೇಳುವವರೂ ಇಲ್ಲ ವಾದ್ದರಿಂದ ಈವೊತ್ತಿನ ಒಂದು ಘಟನೆಗೆ ಕಾರಣವಾಗಿದೆ. ಅವನ ಪರಿಸ್ಥಿತಿಯನ್ನು ನಾವು ಮೊದಲು ಅರ್ಥಮಾಡಿಕೊಂಡು ಅವನಿಗೆ ನಾವು ಏನು ಸಹಾಯ ಮಾಡಬೇಕೋ ಅದನ್ನು ಮಾಡಬೇಕು ಆ ಕೆಲಸ ಮಾಡುತ್ತಿಲ್ಲ. ಈವೊತ್ತಿನ ದಿವಸ ರೈತನ ಪರಿಸ್ಥಿತಿ ನೋಡಿದರೆ ಬಹಳ ಚಿಂತಾಜನಕವಾಗಿದೆ. ಆದುದರಿಂದ ರೈತನಿಗೆ ಇಂಥಾ ಕಷ್ಟಗಳು ಉದ್ಭವವಾಗುತ್ತಿವೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ ೧೯೫೩ರಲ್ಲಿ ಶ್ರೀರಾಮುಲು ಸತ್ತ ನಂತರ ಭಾಷಾವಾರು ಪ್ರಾಂತಿ ರಚನೆಯಾಯಿತು; ಅನಂತರ ಮಹಾರಾಷ್ಟ್ರದಲ್ಲಿ ರಕ್ತಪಾತವಾದ ಮೇಲೇನೇ ದ್ವಿಭಾಷಾ ಪ್ರಾಂತ ರಚನೆಯಾಯಿತು. ಗುಜರಾತ್ ಬೇರೆ ಪ್ರಾಂತವಾಯಿತು. ೧೯೭೨-೭೩ರಲ್ಲಿ ಬೀದರ್‌ಕ್ಕೋಸ್ಕರ ನಮ್ಮ ಭಾಗದಲ್ಲಿ ಆಂದೋಳನ ಮಾಡಿದರು, ಚಳುವಳಿ ಮಾಡಿದರು, ಆಗಲೂ ಕೂಡ ಲಾಠಿಛಾರ್ಜುವಗೈರೆ ಆಗಿ ಕೊನೆಗೆ ಡಿವಿಷನಲ್ ಕಮೀಷನರ್ ಅನ್ನು ಎನ್‌ಕ್ವೈರಿ ಮಾಡಿ ಒಂದು ರಿಪೋರ್ಟ್ ಕೊಡಿ ಎಂದು ಹೇಳಿದರು. ಅದೂ ಕೂಡ ಇದುವರೆಗೆ ಬಂದಿಲ್ಲಾ. ರೈತರಿಗೆ ಮೊದಲಿನಿಂದಲೂ ಯಾವ್ಯಾವರೀತಿಯಲ್ಲಿ ಅನ್ಯಾಯವಾಗುತ್ತಾ ಇದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ನಂತರ ೨೮ನೇ ಫೆಬ್ರುವರಿ ೧೯೮೦ರಲ್ಲಿ ೫೦ ಸಾವಿರ ಜನರ ಒಂದು ಮೆರವಣಿಗೆ

ಹೋಗಿ ಶಾಂತರೀತಿಯಿಂದ ರೆಪ್ರೆಸೆಂಟೇಷನ್ ಕೊಟ್ಟರು. ಆದಕ್ಕೂ ಕೂಡ ಸರ್ಕಾರದಿಂದ ಇದುವರಿಗೂ ಉತ್ತರ ಬರಲಿಲ್ಲಾ. ಅವರ ಗ್ರಿವೆನ್ಸ್‌ಸ್ ಏನು ಇದೆ ಅದನ್ನಾದರೂ ಕೂಡ ವಿಚಾರ ಮಾಡುತ್ತಾರೆ ಅಂತ ತಿಳಿದುಕೊಂಡರೆ ಅದೂ ಆಗಲಿಲ್ಲಾ. ಇನ್ನು ಸೌತ್ ಕೆನರಾ ಮತ್ತು ನಾರ್ತ್ ಕೆನರಾ ಮತ್ತು ಚಿಕ್ಕ ಮಂಗಳೂರಿನಲ್ಲಿ ಕಿಸಾನ್ ಸಮ್ಮೇಳನ ನಡೆಯಿತು. ಆವಾಗ ಒಂದು ರಪ್ರೆಸೆಂಟೇಷನ್ ಕಳುಹಿಸಿದರು. ಅದಕ್ಕೂ ಕೂಡ ಇದುವರೆಗೆ ಉತ್ತರ ಬರಲಿಲ್ಲಾ. ಈಗ ೮ ತಿಂಗಳ ಹಿಂದೆ ಬಳ್ಳಾರಿಯಲ್ಲಿ ಚಿಕ್ಕಾನದಿ ಬಗ್ಗೆ ಅಲ್ಲಿಯ ರೈತರು ಉಪವಾಸ ಸತ್ಯಾಗ್ರಹ ಹೂಡಿದರು. ಆ ಸಂದರ್ಭದಲ್ಲಿ ಅವರನ್ನು ವಿಚಾರಿಸುವುದಕ್ಕೆ ಯಾರೂ ಹೋಗಲಿಲ್ಲಾ. ಅಷ್ಟೇ ಏತಕ್ಕೆ ಈವೊತ್ತು ನರಗುಂದದಲ್ಲಿ ಏನು ನಡೆಯುತ್ತಾ ಇದೆ ಅದು ಬೇರೆ ಕಡೆಗೂ ಕೂಡ ಹೋಗುತ್ತಾ ಇದೆ. ಕಿಸಾನ್ ಆರ್ಗನೈಸ್ ಈವೊತ್ತಿನ ದಿವಸ ಎಷ್ಟರಮಟ್ಟಿಗೆ ಆಗುತ್ತಾ ಇದೆ ಅನ್ನುವುದು ಗೊತ್ತಾಗುತ್ತಾ ಇದೆ. ಈವೊತ್ತಿನ ದಿವಸ ರೈತರೆಲ್ಲಾ ಒಂದು ಸಂಘಟಿತರಾಗಿ ತಮಗೆ ಅನ್ಯಾಯವಾಗುತ್ತಾ ಇರುವುದನ್ನು ಎತ್ತಿ ಹಿಡಿಯಲು ಹೋರಾಟ ಮಾಡುವುದಕ್ಕೆ ಹೊರಟಿದ್ದಾರೆ. ಅವರಿಗೆ ನಾವು ಸರಿಯಾದಂಥಾ ನ್ಯಾಯವನ್ನು ದೊರಕಿಸಿ ಕೊಡಬೇಕಾಗಿದೆ. ತಮಗೆ ಹೇಳಬೇಕೆಂದರೆ ಅಂದಿನಿಂದ ಈವೊತ್ತಿನವರೆಗೆ ರೈತರು ಎಷ್ಟು ಸಮ್ಮೇಳನಗಳನ್ನು ಮಾಡಿ ಸರ್ಕಾರಕ್ಕೆ ಏನು ರೆಪ್ರೆ ಸೆಂಟೇಷನ್ ಕೊಟ್ಟಿದ್ದಾರೊ ಅದರಲ್ಲಿ ಒಂದಾದರೂ ಕೂಡ ಸರಿಯಾಗಿ ಎನ್‌ಕ್ವೈರಿ ಮಾಡಿ ಕ್ರಮ ತೆಗೆದು ಕೊಂಡಿದ್ದೀರಾ ? ಇದ್ದರಿಂದ ನಮಗೆ ಏನು ಅನಿಸುತ್ತದೆ ಎಂದರೆ ನೀವು ಈ ಬಗ್ಗೆ ಎನ್‌ಕ್ವೈರಿ ಮಾಡಲಿಕ್ಕೆ ಯಾವ ಆಫೀಸರ್ಸ್‌ನ್ನು ನೇಮಿಸಿದ್ದೀರೋ ಅವರು ಏನಾದರೂ ಆಗಲಿ, ಹೇಗಾದರೂ ಆಗಲಿ ಅಂತ ಕೂತುಕೊಂಡು ಅವರ ಮನಸ್ಸಿಗೆ ತೋಚಿದ ಹಾಗೆ ಸುಳ್ಳು ವರದಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಅಂಥಾವರನ್ನು ಕಂಡುಹಿಡಿದು ಶಿಕ್ಷೆ ಮಾಡಬೇಕು, ಯಾವ ಅಧಿಕಾರಿಗಳು ಯಾವರೀತಿ ರಿಪೋರ್ಟ್ ಕೊಟ್ಟಿದ್ದಾರೆ ಅನ್ನುವುದನ್ನು ಕಂಡುಹಿಡಿದು ಅವರಿಗೆ ಸರಿಯಾಗಿ ಶಿಕ್ಷೆ ಮಾಡಬೇಕು. ಇದನ್ನು ಮಾಡುವ, ಸರ್ಕಾರದವರು, ಇದಕ್ಕೆ ಸಂಬಂಧಪಟ್ಟ ಮಂತ್ರಿ ಯಾರಾಗಿದ್ದಾರೆ ಅವರುವವರು ಯಾರು ? ಇದರ ಬಗ್ಗೆ ಸರಿಯಾದ ವಿಚಾರಣೆ ನಡೆಸಿ, ಈ ಅಧಿಕಾರಿಗಳು ಕೊಟ್ಟಿರುವ ವರದಿ ಸರಿಯೋ ತಪ್ಪೋ ಅಂತ ನೋಡಿ ಕ್ರಮ ತೆಗೆದುಕೊಳ್ಳಬೇಕು. ಹಾಗದರೇನೇ ಈ ರೈತರಿಗೆ ಆಗತಕ್ಕಂಥಾ ಅನ್ಯಾಯ ತಪ್ಪುತ್ತದೆ. ಈ ಕೆಲಸ ಮಾಡುವರ್ಯಾರು ? ಸರ್ಕಾರದವರು. ಈ ಕೆಲಸ ವನ್ನು ಸರ್ಕಾರದವರು ಮಾಡಿದರೆ ಅಧಿಕಾರಿಗಳು ಯಾವುದಕ್ಕೇ ಆಗಲಿ ಸರಿಯಾದಂಥಾ ವರದಿಯನ್ನು ಕೊಡುತ್ತಾರೆ. ಇಲ್ಲದೇ ಹೋದರೆ ನಾವು ಏನು ಮಾಡಿದರೂ ಅವರು ಕೂಡ ನಮಗೆ ಶಿಕ್ಷೆ ಕೊಡುವುದಿಲ್ಲ ಎಂದು ತಿಳಿದುಕೊಂಡು ಮನಸ್ಸು ಬಂದಂತೆ ಕೆಲಸ ಮಾಡುತ್ತಾರೆ. ನಿಮಗೆ ಇನ್ನೊಂದು ಉದಾಹರಣೆ ಹೇಳುವುದಾದರೆ ಹೋದ ವರ್ಷ ಕೇಂದ್ರ ಸರ್ಕಾರದವರು ಹೈಬ್ರಿಡ್ ಜೋಳವನ್ನು ಪರ್ಚೇಸ್ ಮಾಡಲು ೫೦೦ ಕೋಟಿ ರೂಪಾಯಿಯನ್ನು ನಮ್ಮ ಸರ್ಕಾರಕ್ಕೆ ಕೊಟ್ಟರೂ ಕೂಡ ಪರ್ಚೇಸ್ ಮಾಡಲಿಲ್ಲಾ. ಹೋದಸಲ ಸಹ ಹೈಬ್ರೀಡ್ ಜೋಳ ೫೬ ರೂಪಾಯಿ ಇತ್ತು. ರೈತರು ಬೆಳೆದಂಥಾ ಈ ಜೋಳವನ್ನು ಖರೀದಿ ಮಾಡಲಿಕ್ಕೆ ಸರ್ಕಾರ ಮುಂದೆ ಬರಲಿಲ್ಲ. ಇದರಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ ಅವರನ್ನು ಕೊಲ್ಲಬೇಕು ಎನ್ನುವ ಭಾವನೆ ಇದೆಯೋ ಏನೋ ಅನ್ನುವುದನ್ನು ಸ್ಪಷ್ಟ ಮಾಡಬೇಕಾಗುತ್ತ ಕೇಂದ್ರ ಸರ್ಕಾರದವರು ಇದನ್ನು ಕೊಳ್ಳಲಿಕ್ಕೆ ರೊಕ್ಕ ಕೊಟ್ಟರೂ ಕೂಡ ಇವರು ಆ ಪ್ರಕಾರ ಖರೀದಿದೆ. ಮಾಡದೇ ಹೋದರೆ ಸೆಕ್ರೆಟೇರಿಯೇಟ್‌ನವರದು ತಪ್ಪೇ, ಸರ್ಕಾರದ್ದು ತಪ್ಪೇ ಅಥವಾ ಮಂತ್ರಿಗಳದ್ದು ತಪ್ಪೇ, ಇದರಲ್ಲಿ ಯಾರು ತಪ್ಪು ಮಾಡುತ್ತಾರೆ ಅನ್ನುವುದು ಗೊತ್ತಾಗುವುದಿಲ್ಲ.

ಛೇರ್ಮನ್.—ಈಗ ಸಭೆಯ ಮುಂದೆ ಇರತಕ್ಕಂಥಾ ವಿಷಯದ ಮೇಲೆ ತಾವು ಮಾತನಾಡಿ. ಬೇಗನೆ ಮುಗಿಸಿ.

ಶ್ರೀ ಭೀಮಣ್ಣ ಖಂಡೆ.—ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಸದಸ್ಯ ರೊಬ್ಬರು ಯಾರೋ ಒಬ್ಬ ಆಫೀಸರ ಮೇಲೆ ಆಪಾದನೆ ಮಾಡಿದರು, ಅದರಿಂದ ನಾನು ಹೇಳುತ್ತಿದ್ದೇನೆ. ಬೇಕಾದರೆ ಇಂಥಾದ್ದು ನೂರಾರು ಕಾರಣಗಳನ್ನು ಕೊಡಬಹುದು, ಅದಕ್ಕೆ ಈ ಮಾತು ನಾನು ಹೇಳು ತ್ತಿದ್ದೇನೆ. ಈ ಬಗ್ಗೆ ಮಾತನಾಡುವುದಕ್ಕೆ ನನಗೆ ಸ್ವಲ್ಪ ಟೈಂ ಬೇಕು. ನನಗೆ ಅದಕ್ಕೆ ಅವಕಾಶಸಿಕ್ಕುತ್ತಾ ಇಲ್ಲ. ಟೈಂ ಸಿಕ್ಕಿದರೆ ಇನ್ನೂ ಬೇಕಾದಷ್ಟು ಹೇಳುತ್ತೇನೆ. ನನಗೆ ಸ್ವಲ್ಪ ಅವಕಾಶ ಕೊಡಿ ಅಲ್ಲಿ ಈ ಒಂದು ಘಟನೆಯಿಂದ ೭೦-೭೫ ಪರ್ಸೆಂಟ್ ಅಷ್ಟು ಜನ ಸಾಯುತ್ತಾ ಇರುವಾಗ ನಮಗೆ ಅವರ ಬಗ್ಗೆ ಇಲ್ಲಿ ಕಣ್ಣೀರು ಹಾಕುವುದಕ್ಕಾದರೂ ಕೂಡ ಸ್ವಲ್ಪ ಅವಕಾಶ ಸಿಗಲಿಲ್ಲ ಎಂದರೆ ಹೇಗೆ ? ಅಲ್ಲಿ ಏನು ನಡೆಯುತ್ತಾ ಇದೆ, ಅನ್ನುವುದನ್ನು ಹೇಳದೇ ಬೇರೆ ವಿಷಯದಲ್ಲಿ ಚರ್ಚೆ ಮಾಡಿದರೆ ಏನು ಪ್ರಯೋಜನ?

ವಾಸ್ತವಿಕವಾಗಿ ಅಲ್ಲಿ ರೈತರಿಗೆ ಏನು ಅನ್ಯಾಯವಾಗಿದೆ ಅದನ್ನು ಹೇಳುವುದಕ್ಕೆ ನಾವು ಬಂದಿದ್ದೇವೆಯೇ ವಿನಾ, ಚರ್ಚೆ ಮಾಡುವುದಕ್ಕೆ ಇಲ್ಲಿಗೆ ನಾವು ಬಂದಿಲ್ಲ. ನಾನು ಅಲ್ಲಿ ಇರತಕ್ಕಂಥಾ ವಾಸ್ತವಿಕತೆ ಏನು ಅನ್ನುವುದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಅಲ್ಲಿ ಜನ ಏನು ಸಾಯುತ್ತಾ ಇದ್ದಾರೆ ಅದನ್ನು ಯಾರೇ ಆಗಲಿ ತಿಳಿದುಕೊಳ್ಳಬೇಕು. ತಮಗೆ ಹೇಳಬೇಕಾದರೆ ಈವೊತ್ತಿನ ದಿವಸ ಈ ವಿಧಾನಸೌಧದಲ್ಲಿ ಯಾರು ಇದ್ದಾರೆ, ಅವರು ವಿಧಾನಸೌಧ ಕಟ್ಟಿದ ಮನುಷ್ಯರಲ್ಲ, ಬೇರೆಯವರು ಇದ್ದಾರೆ. ಹಾಗೆಯೇ ದೊಡ್ಡ ದೊಡ್ಡ ಬಂಗಲೆಗಳನ್ನು ಯಾರು ಕಟ್ಟಿದ್ದಾರೊ ಅವುಗಳಲ್ಲಿ ಇಂದು ಅವರಿಲ್ಲ, ಆ ಬಂಗಲೆಯಲ್ಲಿ ಬೇರೆಯವರು ಇದ್ದಾರೆ. ಇವೊತ್ತು, ಅವರಿಗೆ ಏನು ಅನ್ಯಾಯವಾಗುತ್ತಾ ಇದೆ, ಅದರ ಬಗ್ಗೆ ಸರಿಯಾದ ನ್ಯಾಯ ಸಿಗುತ್ತಾ ಇಲ್ಲ. ಇಡೀ ದೇಶಕ್ಕೆ ಬೆಳೆಯನ್ನು ಬೆಳೆಯತಕ್ಕಂತಾ ಈ ರೈತನ ಬಗ್ಗೆ ಅಂದಿನಿಂದ ಇಂದಿನವರೆಗೂ ಕೂಡ ಸರಿಯಾಗಿ ನ್ಯಾಯ ಒದಗಿಸಿ ಕೊಟ್ಟಿಲ್ಲಾ. ಈಗ ಮುಖ್ಯಮಂತ್ರಿಗಳಾಗಿ ಮಾನ್ಯ ಗುಂಡೂರಾಯರು ಬಂದಿದ್ದಾರೆ. ಹಿಂದಿನಿಂದಲೂ ಬೇಕಾದಷ್ಟು ಜನ ಮುಖ್ಯಮಂತ್ರಿಗಳು ಬಂದರು ಹೋದರು. ಯಾರೂ ಕೂಡ ರೈತರಿಗೆ ಸರಿಯಾಗಿ ನ್ಯಾಯ ಒದಗಿಸಿಕೊಟ್ಟಿಲ್ಲ. ಆದುದರಿಂದ ಈವೊತ್ತಿನ ದಿವಸ ಆ ರೈತರಿಗೆ ಬೇಜಾರಾಗಿದೆ. ಈ ಸರ್ಕಾರ ಹೋಗಿ ಮತ್ತೊಂದು ಸರ್ಕಾರ ಬಂದರೂ ಕೂಡ ಹೀಗೆ.

ಛೇರ್ಮನ್.—ಈ ಘಟನೆಗೆ ಸಂಬಂಧಪಟ್ಟ ಹಾಗೆ ಮಾತನಾಡಿ. ಈ ೪ ಜಾಗದಲ್ಲಿ ಏನು ಘಟನೆ ನಡೆದಿದೆ, ಅದಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ಹೊಸ ವಿಷಯಗಳು ಇದ್ದರೆ, ಆ ಬಗ್ಗೆ ಹೊಸ ಬೆಳಕು ಚೆಲ್ಲಿ, ಅಥವಾ ಏನಾದರೂ ಅದರ ಬಗ್ಗೆ ಸಲಹೆಗಳು ಇದ್ದರೆ ಕೊಡಿ.

ಶ್ರೀ ಭೀಮಣ್ಣ ಖಂಡ್ರೆ.—ಸರ್ಕಾರಕ್ಕೆ ನಾನು ಸಲಹೆ ಮಾಡುವುದು ಇಷ್ಟೆ. ಹೋದ ಸರ್ಕಾರವೂ ಕೂಡ ಈ ರೈತರ ಬಗ್ಗೆ ತಪ್ಪು ಮಾಡುತ್ತಾ ಬಂದಿತ್ತು. ಈಗ ಹೊಸ ಮುಖ್ಯಮಂತ್ರಿಗಳು ಬಂದಿದ್ದಾರೆ. ಈ ರೈತರ ಒಂದು ಸಮಸ್ಯೆ ಬಗ್ಗೆ ಭಾಲ್ಕಿಯಲ್ಲಿ ೩ ದಿವಸ ಸಮ್ಮೇಳನ ಮಾಡಿದರು ಆವಾಗ ನಮ್ಮ ಮುಖ್ಯಮಂತ್ರಿಗಳೂ ಕೂಡ ಬಂದಿದ್ದರು. ಆ ಸಂದರ್ಭದಲ್ಲಿ ಆ ರೈತರಿಗೆ ಎಷ್ಟು ಅನ್ಯಾಯವಾಗಿದೆ ಎನ್ನುವುದನ್ನು ತಿಳಿಯಪಡಿಸಿ ಇದಕ್ಕೋಸ್ಕರವಾಗಿ ಒಂದು ವ್ಯವಸಾಯದ ಸಮಿತಿ ಮಾಡಬೇಕು ಎಂದು ಆ ಜನ ಒಂದು ಗ್ರಿವೆನ್ಸ್ ಕೊಟ್ಟರು. ಆವಾಗ ಮಾನ್ಯ ಮುಖ್ಯಮಂತ್ರಿಗಳು ಒಂದು ಅಶ್ವಾಸನೆಯನ್ನೂ ಸಹ ಕೊಟ್ಟು ಮಾಡುತ್ತೇವೆಂದು ಹೇಳಿದರು. ಅದಕ್ಕೋಸ್ಕರ ಒಂದು ಕಮಿಟಿ ಮಾಡಿ, ಆ ಕಮಿಟಿ ೩ ತಿಂಗಳೊಳಗೆ ರಿಪೋರ್ಟ್ ಕೊಡಬೇಕು ಎಂದು ಮಾಡಿದರು. ಆ ಕಮಿಟಿಗೆ ಶ್ರೀ ಬಂಗಾರಪ್ಪನವರು ಅಧ್ಯಕ್ಷರಾಗಿದ್ದಾರೆ. ಈ ಬಗ್ಗೆ ಯುನಾನಿಮಸ್ ಆಗಿಯೇ ರೆಸಲ್ಯೂಷನ್ ಮಾಡಿದ್ದಾರೆ. ಸಾಮಾನ್ಯವಾಗಿ ೨೫–೩೦ ಪರ್ಸೆಂಟ್ ಹಳ್ಳಿಗಳಲ್ಲಿರುವ ರೈತರಿಗೆ ಯಾವರೀತಿಯಾಗಿ ಅನ್ಯಾಯವಾಗಿದೆ ಅನ್ನುವುದನ್ನು ತಮಗೆ ತಿಳಿಸಬೇಕಾಗಿದೆ. ನಾನು ಮಲಪ್ರಭಾ ಹಾಗೂ ಘಟಪ್ರಭಾ ಪ್ರದೇಶಗಳಿಗೆ ಹೋದಾಗ ಅಲ್ಲಿನ ಸಾವಿರಾರು ರೈತರು ತಮಗೆ ಆಗಿರುವ ಅನ್ಯಾಯಗಳ ವಿರುದ್ಧ ಮನವಿಯನ್ನು ಕೊಟ್ಟರು. ನಂತರ ನಾನು ಅದನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟು ಪರಿಸ್ಥಿತಿಯನ್ನು ವಿವರಿಸಿದ ಮೇಲೆ, ಅವರು ಕೂಡಲೇ ಫೈನ್ ವಸೂಲಿ ಮಾಡಬಾರದೆಂದು ಸ್ಟೇ ಕೊಟ್ಟರು. ಆ ಭಾಗದ ೨೮ ಹಳ್ಳಿಗಳಿಗೆ ಸಂಬಂಧ ಪಟ್ಟಂತೆ ೬೪ ಸಾವಿರ ಬೇಸಾಯಗಾರರಿಂದ ಫೈನ್ ವಸೂಲಿ ಮಾಡಬಾರದೆಂದು ಸ್ಟೇ ಕೊಟ್ಟರು ಮತ್ತು ಇದರ ಬಗ್ಗೆ ವಿಚಾರಣೆ ಮಾಡಿ ೩ ತಿಂಗಳೊಳಗೆ ವರದಿ ಕೊಡಬೇಕೆಂದು ಒಂದು ಕಮಿಟಿ ರಚನೆ ಮಾಡಿದರು. ಅದರ ಪ್ರಕಾರ ವರದಿ ಸರ್ಕಾರಕ್ಕೆ ಬಂದಿದೆ. ಆದರೆ ಅದರ ಮೇಲೆ ಇನ್ನೂ ಕ್ರಮ ತೆಗೆದು ಕೊಳ್ಳದ ಕಾರಣ ರೈತರು ದಂಗೆ ಎದ್ದಿದ್ದಾರೆ. ತಮಗೆ ಆಗಿರುವಂತಹ ಅನ್ಯಾಯದ ವಿರುದ್ಧ ಪ್ರತೀಕಾರ ಮಾಡುವುದಕ್ಕೆ ಅವರು ಎದ್ದು ನಿಂತಿದ್ದಾರೆ. ಇವರ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳದಿದ್ದರೆ, ಶೇಕಡಾ ೭೫ರಷ್ಟು ಇರುವಂತಹ ರೈತರು ಸುಮ್ಮನೆ ಕೂರುವುದಿಲ್ಲ. ಚಳುವಳಿ ಮಾಡಿಯೇ ಮಾಡುತ್ತಾರೆ. ನೆನ್ನೆ ದಿವಸ ರೈತರು ಚಳುವಳಿ ಮಾಡಲು ಹೊರಟಾಗ ಪೋಲೀಸಿನವರು ಅವರ ಮೇಲೆ ಗೋಲೀಬಾರ್ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇದೇ ಮೊದಲ ಸಲ ಈ ರೀತಿ ರೈತರ ಮೇಲೆ ಪೋಲೀಸಿನ ವರ ದೌರ್ಜನ್ಯ ನಡೆದಿರುವುದು. ಈ ಮೊದಲು ಅಲ್ಲಿ ಇಲ್ಲಿ ಲಾಠಿಚಾರ್ಜ ಆಗುವುದನ್ನು ಮಾತ್ರ ಕೇಳಿದ್ದೆವು. ಆದರೆ ಈ ರೀತಿ ನಡೆದಿರುವುದು ಇದೇ ಮೊದಲು. ಈ ರೀತಿ ಅನ್ಯಾಯದಿಂದ ಗೋಲೀಬಾರ್ ಮಾಡು ವುದು ಸರಿಯಲ್ಲ. ಈ ಪ್ರಕರಣದಲ್ಲಿ ಅನ್ಯಾಯ ಯಾರಿಂದಲೇ ಆಗಿರಲಿ, ಯಾವುದೇ ಪಾರ್ಟಿಯಿಂದ ಆಗಿರಲಿ, ಯಾವುದೇ ಮನುಷ್ಯ ಮಾಡಿರಲಿ, ಅವರ ವಿರುದ್ಧವಾಗಿ ಪ್ರತಿಕ್ರಿಯೆ ತೋರಿಸುವುದು ನಮ್ಮ ಗಳ ದರ್ಮವಾಗಿದೆ. ರೈತರು ಸುಮ್ಮನೆ ಕೂರಲು ಸಾಧ್ಯವಿಲ್ಲ. ಆದಕಾರಣ ಸರ್ಕಾರ ರಕ್ಷಣೆಗೆ ಬಾರ ದಿದ್ದರೆ ಅವರು ಹಗ್ಗದಿಂದ ನೇಣು ಹಾಕಿಕೊಂಡು ಸಾಯಬೇಕಾಗುತ್ತದೆ. ಆದ ಕಾರಣ ಸರ್ಕಾರದವರು ಮಣ್ಣಿನಮಕ್ಕಳ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಹೇಳುತ್ತೇನೆ. ರೈತರು

ಮುಖ್ಯಮಂತ್ರಿಗಳನ್ನು ರೊಕ್ಕದಿಂದ ತೂಗಿದ್ದಾರೆ. ಅದೇಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಬಂಗಾರಪ್ಪನವರು ಕಿಸಾನರ ಮೇಲೆ ಅಭಿಮಾನ ಇಟ್ಟುಕೊಂಡು ಅವರ ಬೇಡಿಕೆಗಳನ್ನು ಈಡೇರಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ಸೆಕ್ರೆಟೇರಿಯೇಟ್‌ನಲ್ಲಿರುವಂತಹ ಸೆಕ್ರೆಟರಿಗಳಿಗೆ ರೈತರ ಬಗ್ಗೆ ಕಳಕಳಿ ಇಲ್ಲ ವೆಂದು ನಾನು ಹೇಳುವುದಿಲ್ಲ. ಆದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಏನು ರೈತರಿಗೆ ವಚನ ಕೊಟ್ಟಿ ದ್ದಾರೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಕಮಿಟಿಯ ವರದಿ ಏನು ಬಂದಿದೆ, ಅದರ ಮೇಲೇ ಕೂಡಲೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ.ಜಿ. ಕೊಡಗಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಈ ದುರ್ಘಟನೆಯ ಬಗ್ಗೆ ಸಾಕಷ್ಟು ಚರ್ಚೆಯಾಗಿರುವ ಕಾರಣ, ನಾನು ಹೆಚ್ಚು ಹೇಳುವುದಿಲ್ಲ. ಅನೇಕ ಮಂದಿ ಈ ಘಟನೆಗೆ ಅಧಿಕಾರಿಗಳೇ ಹೊಣೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ ಇದಕ್ಕೆ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವು ದಕ್ಕೆ ಬಹುಶಃ ಸಾಧ್ಯವಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ನಡೆದ ಘಟನೆಗಳನ್ನು ಪರಿಶೀಲನೆ ಮಾಡಿ ನೋಡಿದಾಗ, ಒಂದು ವಿಚಾರ ಸ್ಪಷ್ಟವಾಗಿ ಕಂಡುಬರುವುದೇ ನೆಂದರೆ, ಇದರಲ್ಲಿ ಸರ್ಕಾರದ ಅಸಹಾಯಕತೆ, ಅಸಮರ್ಪಕತೆ, ನಿಸ್ಸಹಾಯಕತೆ ಎದ್ದು ಕಾಣುತ್ತಿದೆ. ಕಳೆದ ಆರು ತಿಂಗಳುಗಳಿಂದ ನಾವು ಪ್ರತಿದಿನವೂ ಪತ್ರಿಕೆಗಳಲ್ಲಿ ಒಂದಲ್ಲ ಒಂದು ಕಡೆಯಲ್ಲಿ ಗೋಲಿಬಾರ್ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದಕ್ಕೆ ಅಧಿಕಾರಿಗಳದ್ದೇ ತಪ್ಪು ಎಂದು ಹೇಳುತ್ತಾ ಹೋದರೆ, ಅದಕ್ಕೆ ಕೊನೆಯೇ ಇಲ್ಲ. ಏಕೆಂದರೆ, ಸರ್ಕಾರದ ಆಜ್ಞೆಗಳನ್ನು ಪರಿಪಾಲನೆ ಮಾಡಲು ಅಧಿಕಾರಿಗಳಿದ್ದಾರೆ. ಒಂದು ವೇಳೆ ಸರ್ಕಾರದ ಆಜ್ಞೆಯನ್ನು ಅವರು ಏನಾದರು ಉಲ್ಲಂಘನೆ ಮಾಡಿದಾಗ, ಅವರ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇಂತಹ ಘಟನೆಗಳು ನಡೆದಾಗಲೆಲ್ಲಾ ನಾವು ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುತ್ತಾ ಹೋದರೆ, ನಾವು ಯಾವ ಒಂದು ಹಂತಕ್ಕೆ ಹೋಗಿ ಮುಟ್ಟುತ್ತೇವೋ ತಿಳಿಯುವುದಿಲ್ಲ. ಈ ರೈತರ ಚಳುವಳಿ ನೆನ್ನೆ ಮೊನ್ನೆಯಿಂದ ಪ್ರಾರಂಭ ವಾಗಿದ್ದು ಅಲ್ಲ, ಮಾನ್ಯ ಬೊಮ್ಮಾಯಿ ಅವರು ಹೇಳಿದಂತೆ ಅವರು ಬಹಳ ಹಿಂದೆಯೇ ಅಲ್ಲಿನ ರೈತರು ಕೆಲವೊಂದು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಾಗ, ಆಗಿನ ಮುಖ್ಯ ಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸ್ ಅವರು ಆ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹೇಳಿ ನೀರಿನ ತೆರಿಗೆ ವಸೂಲಿ ಮಾಡುವ ಬಗ್ಗೆ ತಾತ್ಕಾಲಿಕವಾಗಿ ತಡೆ ಆಜ್ಞೆ ಸಹ ಕೊಟ್ಟಿದ್ದರು. ಈ ಸರ್ಕಾರ ಅಧಿಕಾರಕ್ಕೆ ಬಂದನೇಲೆ ಇದರ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕಾಗಿತ್ತು. ಆದರೆ ಆರು ತಿಂಗಳಾದ ಮೇಲೂ ಸಹ ಕ್ರಮ ತೆಗೆದುಕೊಳ್ಳದಿರುವುದನ್ನು ನೋಡಿದರೆ, ಈ ಸರ್ಕಾರ ನಿಷ್ಕ್ರಿಯವಾಗಿದೆ ಎಂದು ಹೇಳಬೇಕಾಗುತ್ತದೆ. ನೀರನ್ನು ಒದಗಿಸದ ಕಡೆ ನೀರಿನ ತೆರಿಗೆ ಹಾಕಬಾರದು, ಬೆಟರ್‌ಮೆಂಟ್ ಲೆವಿ ವಿಧಿಸಬಾರದೆಂದು ರೈತರು ಕೇಳಿಕೊಂಡಿದ್ದರು. ಇದರ ಬಗ್ಗೆ ಇಲ್ಲಿಯವರೆಗೆ ಸರ್ಕಾರ ಕ್ರಮ ತೆಗೆದುಕೊಳ್ಳದಿರುವುದನ್ನು ನೋಡಿದರೆ, ಸರ್ಕಾರದ ಒಂದು ವೈಫಲ್ಯತೆ ಎದ್ದು ಕಾಣುತ್ತದೆ. ಈಗ ನವಲಗುಂದ ಹಾಗೂ ನರಗುಂದದಲ್ಲಿ ರೈತರ ಚಳುವಳಿ ಪ್ರಾರಂಭವಾಗಿದೆ. ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಕೊಳ್ಳದಿದ್ದರೆ ನಾಳೆ ದಿವಸ ಇದು ಕರ್ನಾಟಕ ರಾಜ್ಯದ ಎಲ್ಲ ಕಡೆಯಲ್ಲಿಯೂ ರೈತರು ಚಳುವಳಿ ಪ್ರಾರಂಭ ಮಾಡುತ್ತಾರೆ. ನಮ್ಮ ಕಡೆಯೂ ನೀರನ್ನು ಕೊಡದಿರುವ ಕಡೆ ನೀರಿನ ತೆರಿಗೆ ಹಾಕಬಾರದೆಂದು ನಾವು ಮನವಿ ಕೊಟ್ಟಿದ್ದರೂ ಸಹ ಇಲ್ಲಿಯವರೆಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ರೈತರ ಪ್ರತಿನಿಧಿಗಳಾದ ನಾವು ರೈತರ ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಟ್ಟಾಗ, ಆ ಬಗ್ಗೆ ಸರ್ಕಾರ ಆಸಕ್ತಿಯ ರೀತಿಯಲ್ಲಿ ವರ್ತಿಸುವುದು ಸರಿಯಲ್ಲ. ಅದೇ ಸರ್ಕಾರದ ನೌಕರರು ಮುಷ್ಕರ ಹೂಡಿದರೆ ಸರ್ಕಾರ ಕೂಡಲೇ ಆ ಬಗ್ಗೆ ಕ್ರಮ ಕೈಕೊಳ್ಳುತ್ತದೆ. ಅದೇ ರೀತಿಯಲ್ಲಿ ಪಟ್ಟಣಗಳಲ್ಲಿರುವ ಕೂಲಿಗಾರರು, ಕಾರ್ಮಿಕರು ಮುಷ್ಕರ ಹೂಡಿದರೆ, ಸರ್ಕಾರ ಕೂಡಲೇ ಕಣ್ಣು ತೆರೆದು ನೋಡುತ್ತದೆ. ಅದೇ ಸಂಘಟಿತರಾದಂಥ ರೈತರು ಏನಾದರು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಾಗ, ಸರ್ಕಾರದವರು ಆ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳದ ಕಾರಣದಿಂದಲೇ ಈ ಒಂದು ಘಟನೆ ನಡೆದಿದೆ ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆದಕಾರಣ ರೈತರ ಬೇಡಿಕೆ ಗಳನ್ನು ಈಡೇರಿಸದಿದ್ದರೆ. ಇಲ್ಲಿಯೂ ಅಸ್ಸಾಂ ತರಹ ಪರಿಸ್ಥಿತಿ ಉಂಟಾಗಬಹುದೆಂದು ಹೇಳುತ್ತೇನೆ. ಈಗ ಅಸ್ಸಾಂನಲ್ಲಿ ಕೈಮೀರಿ ಹೋಗುವಂತಹ ಪರಿಸ್ಥಿತಿ ಉಂಟಾಗಿದೆ. ಅದೇ ರೀತಿ ಇಲ್ಲಿಯೂ ಆಗಲು ಅವಕಾಶ ಕೊಡದೆ ಕೂಡಲೇ ಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಪತ್ರಿಕೆ ಗಳಲ್ಲಿ ದಿನವೂ ಸಾವಿನ ಸುದ್ದಿಗಳು ಇದ್ದೇ ಇರುತ್ತವೆ. ಸಾವಿನ ಸುದ್ದಿ ಇಲ್ಲದ ಒಂದು ಪತ್ರಿಕೆಯನ್ನು

ಯಾರಾದರು ನನಗೆ ತೋರಿಸಲಿ ? ಇದಕ್ಕೆ ಸರ್ಕಾರದ ಆಡಳಿತ ವೈಫಲ್ಯತೆ ಹಾಗೂ ಅಸಹಾಯಕತೆಯೇ ಕಾರಣವೆಂದು ಹೇಳಬೇಕಾಗುತ್ತದೆ. ಇನ್ನಾದರೂ ರೈತರ ಬಗ್ಗೆ ಭಾಷಣಗಳನ್ನು ಮಾಡುವುದನ್ನು ಬಿಟ್ಟು, ಅವರ ಬೇಡಿಕೆಗಳನ್ನು ಈಡೇರಿಸಲು ಸಕ್ರಿಯ ಪಾತ್ರವಹಿಸಲಿ ಎಂದು ಹೇಳುತ್ತೇನೆ. ಒಂದು ಭಾಗದ ರೈತರು ಮಾತ್ರ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ರೈತರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಗೊಬ್ಬರದ ಬೆಲೆ ಏರಿಕೆಯಿಂದ ಹಾಗೂ ವ್ಯವಸಾಯ ಉಪಕರಣಗಳ ಬೆಲೆಗಳು ಜಾಸ್ತಿಯಾದ ಕಾರಣ ರೈತರಿಗೆ ತೊಂದರೆಯಾಗಿದೆ. ಇದನ್ನೆಲ್ಲಾ ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದಕಾರಣ ರೈತರ ಬೇಡಿಕೆಗಳನ್ನು ಶೀಘ್ರವಾಗಿ ಪರಿಹರಿಸಿ ಅವರ ಚಳುವಳಿ ವ್ಯಾಪಕವಾಗಿ ಹಬ್ಬದಂತೆ ಸರ್ಕಾರ ಕ್ರಮ ಕೈಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದಂಥ ಘಟನೆ ಬಗ್ಗೆ ನನ್ನ ವಿಷಾದವನ್ನು ಮೊದಲನೆಯದಾಗಿ ವ್ಯಕ್ತಪಡಿಸುತ್ತಿದ್ದೇನೆ. ನಿನ್ನೆ ನಡೆದ ಘಟನೆಗೆ ಒಂದು ಸಣ್ಣ ಕಾರಣ ಇರಬಹುದು, ಆದರೆ ಅದರ ಹಿಂದೆ ಒಂದು ದೊಡ್ಡ ಇತಿಹಾಸದ ಕಾರಣಗಳು ಇವೆ. ಆ ಬಗ್ಗೆ ನಮ್ಮ ನಾಯಕರು ಕೂಡ ಬಹಳ ಆಸಕ್ತಿವಹಿಸಿ ಯೋಗ್ಯ ಕ್ರಮ ಕೈಗೊಳ್ಳುತ್ತೇವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅದು ಸ್ವಾಗತಾರ್ಹವಾದ ವಿಚಾರ. ಇದು ಎಂದೋ ನಡೆಯಬೇಕಾದಂಥ ಘಟನೆ ಇಂದು ನಡೆದಿದೆ. ಬಹಳ ವರ್ಷಗಳ ಪ್ರಯತ್ನದಿಂದ ಹರತಾಳಗಳನ್ನು ಮಾಡುತ್ತಾ ಮಾಡುತ್ತಾ ರೈತರ ಪ್ರತಿಭಟನೆ ನಿನ್ನೆ ಉಗ್ರವಾದಂಥ ಸ್ವರೂಪವನ್ನು ತಾಳಿದೆ. ಇದನ್ನು ನಾವು ನೋಡಿದಾಗ ಇದು ನಿಜವಾಗಲೂ ವಿಷಾದಕರವಾದಂಥಾದ್ದು ಎಂದೆನಿಸುತ್ತದೆ. ಎಂದೂ ಸಂಘಟನೆಯಾಗದ ರೈತರು ಇವತ್ತಿನ ದಿವಸ ಸಂಘಟನೆಯಾಗಿ ಉಗ್ರಸ್ವರೂಪದಲ್ಲಿ ತಮ್ಮ ಅಭಿಪ್ರಾಯವನ್ನು ತೋರಿಸಿದ್ದಾರೆ. ಇದು ಇಡೀ ಕರ್ನಾಟಕ ರಾಜ್ಯಕ್ಕೆ ಗಂಡಾಂತರಕಾರಿ ಎಂದು ಹೇಳದೆ ವಿಧಿಯಿಲ್ಲ. ಈ ಘಟನೆಗಳ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆಂದು ನಮ್ಮ ನಾಯಕರು ಹೇಳಿದ್ದಾರೆ. ಈ ಘಟನೆ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುವುದಕ್ಕಿಂತಲೂ ಘಟನೆಗಳು ನಡೆಯುವುದಕ್ಕೆ ಏನು ಕಾರಣಗಳಿವೆ ಎನ್ನುವುದರ ಬಗ್ಗೆ ಆಸಕ್ತಿ ವಹಿಸಬೇಕು. ಬೆಟರ್‌ಮೆಂಟ್ ಲೆವಿ ಹಾಕಿರುವುದು ಒಂದ ಕಡೆ ಇರಲಿ. ಮುಖ್ಯವಾದ ಕಾರಣಗಳು ಅಂದರೆ, ರೈತರು ಬೆಳೆದಂಥ ಮಾಲುಗಳಿಗೆ ಯೋಗ್ಯವಾದಂಥ ಬೆಲೆಗಳು ಸಿಕ್ಕುತ್ತಾ ಇಲ್ಲ ಎನ್ನುವುದು ಹರತಾಳ ಮಾಡುವುದಕ್ಕೆ ಮುಖ್ಯ ಕಾರಣ, ಇದು ಒಪ್ಪತಕ್ಕ ಮಾತು. ಇನ್ನೂ ಅನೇಕ ಬೇಡಿಕೆಗಳು ಏನಿವೆ ಆ ಬೇಡಿಕೆಗಳನ್ನು ಅಮೂಲಾಗ್ರವಾಗಿ ವಿಚಾರಿಸಿ, ಆದಷ್ಟು ಬೇಗ ತೀವ್ರಗತಿಯಲ್ಲಿ ಪರಿಹಾರ ಸಿಗುವಂತೆ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಮತ್ತೊಮ್ಮೆ ತಮ್ಮ ಮೂಲಕ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ (ಸೂರತ್ಕಲ್) —ಮಾನ್ಯ ಅಧ್ಯಕ್ಷರೆ, ಈ ಒಂದು ಮಲಪ್ರಭ ರೈತರ ಚಳುವಳಿಯಲ್ಲಿ ನಡೆದ ಘಟನೆ ಏನಿದೆ ಇದು ಕಂದಾಯ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಲ್ಲಿ ಏನೋಂದು ಉಪೇಕ್ಷೆ ಇತ್ತು ಅದರ ಫಲವಾಗಿ ಈ ಘಟನೆ ನಡೆದಿದೆ ಎಂದು ನನ್ನ ಮನಸ್ಸಿಗೆ ಕಾಣುತ್ತದೆ. ಬಹಳ ವರ್ಷಗಳಿಂದ ಮಲಪ್ರಭ ಪ್ರದೇಶದ ರೈತರು ತಮ್ಮ ಸಂಕಷ್ಟವನ್ನು ನಿವೇದಿಸುತ್ತಾ ಬಂದಿದ್ದಾರೆ. ಅದನ್ನು ಅಧಿಕಾರಿಗಳು ಪರಿಹರಿಸಬೇಕಾಗಿತ್ತು. ಪರಿಹರಿಸಿಲ್ಲ. ಸರ್ಕಾರದ ಮುಂದೆ ಕೂಡ ಅವರ ಬೇಡಿಕೆ ಬಂದಿತ್ತು. ಹಿಂದಿನ ಮುಖ್ಯ ಮಂತ್ರಿಯವರಾದ ಶ್ರೀಮಾನ್ ದೇವರಾಜ ಅರಸ್‌ರು ಇದನ್ನು ಮನಗಂಡು ಒಂದು ಸ್ಟೇ ಆರ್ಡರ್ ಕೂಡ ಕೊಟ್ಟಿದ್ದರು. ಅವರ ಸರ್ಕಾರ ರಾಜಿನಾಮೆ ಕೊಟ್ಟಾಗ ಈ ಸ್ಟೇ ಆರ್ಡರ್ ಊರ್ಜಿತದಲ್ಲಿತ್ತು ಎಂದು ನಾನು ತಿಳಿದಿದ್ದೇನೆ. ಆ ಸರ್ಕಾರ ಹೋದ ತಕ್ಷಣ ಎಲ್ಲವನ್ನೂ ವಸೂಲೂ ಮಾಡಲಿಕ್ಕೆ ಶುರುಮಾಡಿದರು. ಇದರಿಂದ ಇನ್ನಷ್ಟು ರೈತರ ಸಂಕಷ್ಟ ಶುರುವಾಯಿತು. ಇಷ್ಟು ವರ್ಷಗಳಿಂದ ಅದುಮಿಟ್ಟುಕೊಂಡಿದ್ದ ಸಿಟ್ಟು ಚಳುವಳಿ ರೂಪವಾಗಿ ಹೊರಗೆ ಬಂದಿದೆ ಎಂದು ನಮಗೆ ತಿಳಿದು ಬಂದ ವರ್ತಮಾನ. ಚಳುವಳಿಕಾರರು ಬಂದಾಗ ಪೋಲೀಸರು ಮುಂದೆ ಬಂದರು, ಅಹಿತಕರ ಘಟನೆ ನಡೆದಿದೆ, ಪೋಲೀಸರೂ ಸತ್ತರು, ರೈತರೂ ಬಲಿಯಾದರು; ಇದು ದುರದೃಷ್ಟಕರ. ಇದಕ್ಕಾಗಿ ನಾನು ಸಂತಾಪ ಸೂಚನೆ ಮಾಡಬೇಕು. ಆದರೆ ಇದರಲ್ಲಿ ಮುಖ್ಯವಾದಂಥ ಒಂದು ಸಂಗತಿ ಏನು ಕಾಣುತ್ತದೆ ಎಂದರೆ, ನಿಮ್ಮ ಅಧಿಕಾರಿಗಳ ಮನೋಭಾವದ ಮೇಲೆ ಸ್ವಲ್ಪ ಬೆಳಕನ್ನು ಬೀರುತ್ತದೆ. ಯಾವ ಒಂದು ಕಾನೂನು ಇರಲಿ, ಜನಗಳ ಹಿತದೃಷ್ಟಿ

ಯಿಂದ ಆ ಕಾನೂನನ್ನು ಇಂಟರ್‌ಪ್ರಿಟ್ ಮಾಡುವುದು ಬಿಟ್ಟು, ಜನಗಳ ಹಿತಕ್ಕೆ ಅಡಚಣೆಯಾಗುವಂತೆ ಇಂಟರ್‌ಪ್ರಿಟ್ ಮಾಡುವಂಥ ಹವ್ಯಾಸ ನಮ್ಮ ಸರ್ಕಾರಿ ಅಧಿಕಾರಿಗಳಿಗೆ ಬಂದಿದೆ ಎಂದು ನನಗಾದರೂ ಮನದಟ್ಟಾಗಿದೆ. ಇದು ಒಂದು ದೃಷ್ಟಾಂತ ಮಾತ್ರ ಇಲ್ಲಿ ಇದನ್ನು ಇಷ್ಟಕ್ಕೆ ಹೇಳಿದರೆ ಮುಗಿಯುವುದಿಲ್ಲ ತಕ್ಷಣವಾಗಿ ಎರಡು ಸಂಗತಿಗಳನ್ನು ಮಾಡಬೇಕಾಗಿದೆ. ನಿನ್ನೆ ನಡೆದಂಥ ಘಟನೆ ಏನಿದೆ ಆ ಘಟನೆ ಬಗ್ಗೆ ಆಲೋಚನೆ ಮಾಡುವಂಥದ್ದು. ಅನಂತರ ಏನು ಒಂದು ಮೂಲಭೂತ ಸಮಸ್ಯೆ ಇದೆ ಆ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕು. ಈ ಎರಡು ಸಂಗತಿಗಳನ್ನು ಮಾಡಬೇಕಾದ ಅಗತ್ಯವಿದೆ, ಇದನ್ನು ಮಾಡುವುದಕ್ಕೆ ಹೆದರಿಕೆ ಏನು ? ಇಬ್ಬರು ಪೋಲೀಸರು ಸತ್ತಿದ್ದರಿಂದ ಪೋಲೀಸರು ತಮ್ಮ ಒಂದು ಅಧಿಕಾರವನ್ನು ಪುನಃ ಸ್ಥಾಪನೆಮಾಡಬೇಕು ಎನ್ನುವ ಮನೋಭಾವದಿಂದ ಬಂದಂಥ ರೈತರ ಮೇಲೆ ಇನ್ನೂ ಹೆಚ್ಚಿನ ದಬ್ಬಾಳಿಕೆಯಾಗುವ ಸಂಭವವಿದೆಯೋ ಎಂದು ಹೆದರಿಕೆ. ಮುಖ್ಯ ಮಂತ್ರಿಗಳು ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಯಾರನ್ನೂ ದೂರಲಿಕ್ಕೆ ಹೋಗುವುದಿಲ್ಲ, ಇಂಥಾ ಒಂದು ಅನುಮಾನ ನನಗೆ ಬರುತ್ತಾ ಇದೆ. ಇದಕ್ಕೆ ನಮ್ಮ ಸದನದ ಒಂದು ಸಮಿತಿಯನ್ನು ಮಾಡಿ ಅದು ಫ್ಯಾಕ್ಟ್ ಫೈಂಡಿಂಗ್ ಎಂದು ಹೇಳುವುದಿಲ್ಲ, ಸದನದ ಒಂದು ಸಮಿತಿಯನ್ನು ಮಾಡಿ ಅವರನ್ನು ಅಲ್ಲಿಗೆ ಕಳಿಸಿ ಕೊಡುವುದು ಉತ್ತಮವೆಂದು ನನ್ನ ಮನಸ್ಸಿಗೆ ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಅಲ್ಲಿಗೆ ಹೋಗುವುದು ಅಗತ್ಯವಿದೆ, ಅಲ್ಲಿಯ ಜನರನ್ನು ಖುದ್ದಾಗಿ ಕಂಡು ಮಾತನಾಡಿ, ಜನಗಳಿಗೆ ಭರವಸೆ ಹುಟ್ಟುವಹಾಗೆ ಮಾಡಬೇಕು. ಮುಖ್ಯ ಮಂತ್ರಿಗಳು ಬಂದಿದ್ದಾರೆ, ನಮ್ಮ ಮಾತನ್ನು ಕೇಳುವವರಿದ್ದಾರೆ ಎಂಬ ಭರವಸೆಯನ್ನು ಅಲ್ಲಿಯ ಜನರಲ್ಲಿ ಹುಟ್ಟಿಸುವಂಥದ್ದು ಅಗತ್ಯವಿದೆ. ಇದರ ಜೊತೆಗೆ ಮೂಲ ಭೂತ ಸಮಸ್ಯೆಯನ್ನು ತಕ್ಷಣ ಪರಿಹಾರ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ವಿ. ಪತ್ತಾರ್ (ಜಮಖಂಡಿ).—ಸನ್ಮಾನ್ಯ ಸಭಾಧ್ಯಕ್ಷರೆ, ಈ ನರಗುಂದ್ ನವಲಗುಂದ ಸಮೀಪದಲ್ಲಿ ನಮ್ಮ ಜಿಲ್ಲೆ ಬರುತ್ತದೆ. ಜಮಖಂಡಿ, ಮುಧೋಳ್ ಪ್ರಶ್ನೆ ಬಹಳ ತೀಕ್ಷ್ಣವಾಗಿದೆ. ಬೆಟರ್ ಮೆಂಟ್ ಲೆವಿಯನ್ನು ಫಿಕ್ಸ್ ಮಾಡಿದ್ದಾರೆ. ಅದನ್ನು ಫಿಕ್ಸ್‌ಮಾಡುವಾಗ ಒಂದು ನಿರ್ದಿಷ್ಟವಾಗಿ ಕಾನೂನು ಪ್ರಕಾರ ಮಾಡಿದ್ದಾರೆ. ಒಮ್ಮೆ ನಿರ್ಣಯಿಸಿದ ನಂತರ ಮುಂದೆ ರೈತರಿಗೆ ಇರತಕ್ಕ ರೆಮಿಡಿ ಅಂದರೆ ಸಿವಿಲ್ ಕೋರ್ಟ್‌ಗೆ ಅಪೀಲ್ ಮಾಡಬೇಕಾಗುತ್ತದೆ, ಬಹುತೇಕ ರೈತರು ಅಪೀಲ್ ಮಾಡಿಲ್ಲ. ಸರಿಯೋ ತಪ್ಪೋ, ನಿರ್ಣಯಮಾಡಿ, ಫಿಕ್ಸ್ ಮಾಡಿದಂಥಬೆಟರ್‌ಮೆಂಟ್ ಲೆವಿಯನ್ನು ಕೊಡತಕ್ಕ ಪ್ರಸಂಗ ಎಲ್ಲಾ ರೈತರಿಗೂ ಬಂದಿದೆ. ಆದ್ದರಿಂದ ನಾನು, ಈ ಬೆಟರ್‌ಮೆಂಟ್ ಲೆವಿ ಆಕ್ಟ್ ಏನಿದೆ ಅದಕ್ಕೆ ದಯಮಾಡಿ ಅಮೆಂಡ್‌ಮೆಂಟ್ ತನ್ನಿ ಎಂದು ಕೇಳಿಕೊಳ್ಳುತ್ತಾ ಇದ್ದೇನೆ. ಎಲ್ಲಾ ಬೆಟರ್‌ಮೆಂಟ್ ಲೆವಿಗಳನ್ನು ಪುನರ್ವಿಮರ್ಶೆಮಾಡಿ, ರಿವಿಜನ್ ಮಾಡಿ ತಿದ್ದುಪಡಿಮಾಡಿ ರೈತರಿಗೆ ಅನುಕೂಲವಾಗುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಒಂದು ದುರದೃಷ್ಟ ಸಂಗತಿ ಅಂದರೆ, ಪೋಲೀಸರು ಏನಾದರೂ ಇಂತಹ ದುರ್ಘಟನೆ ನಡೆದಾಗ ಕ್ರಮ ತೆಗೆದುಕೊಂಡರು ಅಂದರೆ ಏಕೆ ಕ್ರಮ ತೆಗೆದುಕೊಂಡರು ಎಂದು ಹೇಳುತ್ತೇವೆ, ಕ್ರಮ ತೆಗೆದುಕೊಳ್ಳದೇ ಹೋದರೆ ಏಕೆ ಕ್ರಮ ತೆಗೆದು ಕೊಳ್ಳಲಿಲ್ಲ ಎಂದು ಹೇಳುತ್ತೇವೆ, ಎರಡೂ ವಿಚಾರಗಳಲ್ಲಿ ದೋಷಾರೋಪಣೆ ಮಾಡುತ್ತೇವೆ. ಈಗ ಅಲ್ಲಿ ನಡೆದಂಥ ಘಟನೆಏನಿದೆ ಅದನ್ನು ಮಾಡಿರುವುದು ಬಹುಶಃ ಸಮಾಜ ವಿರೋಧಿ ಶಕ್ತಿಗಳು, ರೈತರು ಮಾಡಿರುವುದಲ್ಲ. ಕೆಲವೊಂದು ನಿರ್ದಿಷ್ಟ ಶಕ್ತಿಗಳು ಕುಚೋದ್ಯತನ ಮಾಡಿರುತ್ತಾರೆ ಅದಕ್ಕೆ ಪೋಲೀಸರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ತೆಗೆದುಕೊಳ್ಳದೇ ಹೋದರೆ ಕರ್ತವ್ಯಚ್ಯುತಿ ಆಗುತ್ತದೆ. ಅಂಥಾ ವೇಳೆಯಲ್ಲಿ ಇಂಥಾ ಅನಾಹುತಗಳು ಆಗುತ್ತವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ರೈತರು ಇದರಲ್ಲಿ ಭಾಗವಹಿಸಲಿಲ್ಲ ಪ್ರಚೋದನೆ ಮಾಡಿರುವುದಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ನಿಜವಾಗಲೂ ರೈತರಿಂದಲೇ ಆದಂಥ ಚಳುವಳಿ ಎನ್ನುವುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕು.

12-00 Noon

ಈ ರೈತರ ಚಳುವಳಿಯಲ್ಲಿ ಎಷ್ಟೋ ಗೂಂಡಾ ಎಲಿಮೆಂಟ್ಸ್ ಇರುತ್ತಾರೆ. ಇಂಥಾ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುವ ಸಂದರ್ಭಗಳು ಇರುತ್ತದೆ. ಆದುದರಿಂದ ಆ ರೀತಿಯಿಂದ ಏನಾದರೂ ಆಗುತ್ತಿದೆಯೋ ಏನೋ ಗೊತ್ತಿಲ್ಲ. ಆದರೆ ಆ ರೀತಿ ಆಗುವುದಕ್ಕೆ ಸಾಕಷ್ಟು ಅವಕಾಶ ಅಲ್ಲಿರುವುದರಿಂದ...

ಒಬ್ಬ ಸದಸ್ಯರು.—ಅಲ್ಲಿ ಏನು ಘಟನೆ ನಡೆದಿದೆ ಎನ್ನುವುದೇ ಗೊತ್ತಿಲ್ಲದಿರುವವರಿಗೆ ಮಾತನಾಡಲು ಅವಕಾಶ ಕೊಡಬೇಡಿ.

ಶ್ರೀ ಪಿ. ವಿ. ಪತ್ತಾರ್.—ಇವತ್ತು ಅಲ್ಲಿ ಏನು ಘಟನೆ ನಡೆದು ಸತ್ತಂಥ ಪೋಲೀಸಿನವರಿಗೆ ಮತ್ತು ರೈತರಿಗೆ ಮಿಡಿ ಕಣ್ಣೀರನ್ನು ಸುರಿಸಬೇಕಾಗುತ್ತದೆ. ಆದುದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ ಈಗ ಯಾವುದೇ ನ್ಯಾಯಾಂಗ ವಿಚಾರಣೆ ಮಾಡುವುದಾಗಲೀ ಇಲ್ಲವೇ ಈ ಹೌಸಿನ ಒಂದು ಕಮಿಟಿಯನ್ನು ನೇಮಿಸುವುದಾಗಲೀ ಅಷ್ಟು ಸೌಧುವಾದುದಲ್ಲ. ಆದುದರಿಂದ ಮುಖ್ಯ ಮಂತ್ರಿಗಳವರೇ ಅಲ್ಲಿಗೆ ಹೋಗಿ ಅಲ್ಲಿಯ ಜನರ ಕಷ್ಟ ಸುಖಗಳನ್ನು ಅರಿತು ಪರಿಹಾರವನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಎಚ್. ಗಂಗಾಧರನ್.—ಶ್ರೀ ಪಥಾರ್‌ರವರು ರೈತರ ತಲೆಯ ಮೇಲೆ ಪಥರ್ (ಕಲ್ಲು) ಹಾಕಿ ಬಿಟ್ಟಿರಲ್ಲಾ,

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತರ ಚಳುವಳಿಯ ನಾಯಕರು ಏನಿದ್ದಾರೆ ಅವರು ಸರ್ವ ಪಕ್ಷಕ್ಕೂ ಸೇರಿದವರು. ಎಲ್ಲ ಪಕ್ಷದವರೂ ಸೇರಿ ಅಲ್ಲಿ ಚಳುವಳಿಯನ್ನು ಎರಡು ವರ್ಷಗಳಿಂದ ಮಾಡುತ್ತಿದ್ದಾರೆ. ಮತ್ತು ಅದರ ನಾಯಕರು ಯಾರಿದ್ದಾರೆ ಅವರು ಕೂಡ ಕಟ್ಟಾ ಮಹಾತ್ಮಾ ಗಾಂಧಿವಾದಿಗಳು. ಅವರು ಹಿಂದೆ ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆಲ್ಲಾ ಹೋಗಿ ಬಂದಿದ್ದಾರೆ, ಅವರನ್ನು ನೋಡಿದರೇ ಗೊತ್ತಾಗುತ್ತದೆ. ಅವರ ಪರಿಚಯ ಮಾನ್ಯ ಸದಸ್ಯರಿಗಿಲ್ಲವೆಂದು ಕಾಣುತ್ತದೆ. ರೈತರು ಶಾಂತ ರೀತಿಯಲ್ಲಿ ಸಂಘಟನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಆದುದರಿಂದ ರೈತರ ಚಳುವಳಿಗೆ ಬೇರೆ ಬಣ್ಣ ಬಳಿಯತಕ್ಕ ಪ್ರಯತ್ನ ಮಾಡುವುದು ಬೇಡ.

(ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಸದಸ್ಯರುಗಳು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿರುವುದರಿಂದ ಪುನಃ ಅದನ್ನೇ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಿನ್ನೆ ನಡೆದ ಘಟನೆಯ ಬಗ್ಗೆ ಮಾತ್ರ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಈಗ ಹಲವಾರು ಸದಸ್ಯರು ಇಲ್ಲಿ ಮಾತನಾಡುವಾಗ ಇದಕ್ಕೆಲ್ಲಾ ಸಮಾಜ ಘಾತುಕ ಶಕ್ತಿಗಳು ಕಾರಣ ಎನ್ನುವ ರೀತಿಯಲ್ಲಿ ತಮ್ಮ ವಿಚಾರವನ್ನು ಮುಂದಿಟ್ಟಿದ್ದಾರೆ. ಇದರ ಬಗ್ಗೆ ಹೇಳಬೇಕು ಎಂದರೆ, ನಿನ್ನೆ ನಡೆದ ಘಟನೆಯ ಬಗ್ಗೆ ಸರಿಯಾದ ಒಂದು ತೀರ್ಮಾನಕ್ಕೆ ಬರುವುದ ಕೋಸ್ಕರವಾಗಿ ನಾನು ಈ ಮಾತನ್ನು ಹೇಳುತ್ತಿಲ್ಲ. ಹಿಂದೆ ಕೂಡ ಚೌರಿಚೌರಿ ಸತ್ಯಾಗ್ರಹ ನಡೆದಾಗ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಅಹಿಂಸಾತ್ಮವಾಗಿ ಚಳುವಳಿಯನ್ನು ನಡೆಸಬೇಕೆಂದು ಹೊರಟಾಗ, ಚೌರಿಚೌರಿ ಪೋಲೀಸ್ ಸ್ಟೇಷನ್ನನ್ನು ಜನರು ಸುಟ್ಟು ಹಾಕಿದರು ಆಗ ಮಹಾತ್ಮಾ ಗಾಂಧೀಜಿಯವರು ಆ ಚಳುವಳಿಯನ್ನು ವಾಪಸ್ಸು ತೆಗೆದುಕೊಂಡರು. ಅಂದರೆ ಅವರ ತತ್ವ ಹಾಗಿತ್ತು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಆ ಪರಿಸ್ಥಿತಿ ಇವತ್ತು ಇಲ್ಲ, ಅಂಥ ನಾಯಕತ್ವವೂ ಇಲ್ಲ, ಅಂಥಾ ಚಳುವಳಿಯೂ ಇಂದಿಲ್ಲ. ಇವತ್ತು ಪರಿಸ್ಥಿತಿ ಅಲ್ಲಿ ಏನು ನಡೆದಿದೆ ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಏನಾಗಿದೆ ಮಾನ್ಯ ಮುಖ್ಯ ಮಂತ್ರಿಗಳವರು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದು ನೆನಪಿಗೆ ತರುತ್ತಿದ್ದೇನೆ. ಪೋಲೀಸರ ಕೈಯಲ್ಲಿ ದೊಣ್ಣೆ ಕೊಟ್ಟಿರುವುದು ಹೊಡೆಯುವುದಕ್ಕಾಗಿಯೇ, ಪ್ರಧಾನ ಮಂತ್ರಿಗಳಾಗಿದ್ದರೂ ಅವರು ಚಳುವಳಿಗೆ ಹೋಗಿದ್ದರೆ ಪೋಲೀಸಿನವರು ಹೊಡೆಯುತ್ತಾರೆ, ಅವರು ಮುಖ್ಯ ಮಂತ್ರಿಗಳಿಗೂ ಇಲ್ಲವೇ ಶಾಸಕರೇ ಅಲ್ಲಿಗೆ ಹೋಗಿರಲಿ ಹೊಡೆಯುತ್ತಾರೆ ಎನ್ನುವ ಧಾಟಿಯಲ್ಲಿ ಮಾತನಾಡಿದರು. ಹಾಗೆ ಹೇಳಿದರೆ ಅದರಿಂದ ನಮ್ಮ ಜನರ ಮೇಲೆ ಏನು ಪರಿಣಾಮ ಬೀರುತ್ತದೆ ? ಅಧಿಕಾರಿಗಳ ಮೇಲೆ ಏನು ಪರಿಣಾಮ ಬೀರುತ್ತದೆ ಎನ್ನುವುದನ್ನು ನಾವು ನಿನ್ನೆ ದಿವಸ ನಡೆದಂಥ ಘಟನೆಯಿಂದ ನೋಡಿದ್ದೇವೆ. ರೈತರು ತಮ್ಮ ಸಮಸ್ಯೆಗಳನ್ನು ಸರ್ಕಾರದವರ ಗಮನಕ್ಕೆ ತೆಗೆದುಕೊಂಡು ಬಂದರೆ ಹಿಂದಿನ ಸರ್ಕಾರವಾಗಲೀ ಇಲ್ಲವೇ ಈಗಿನ ಸರ್ಕಾರವೇ ಆಗಲೀ ಒಟ್ಟು ಕರ್ನಾಟಕ ಸರ್ಕಾರ ೧೯೭೦ ರಿಂದ ೧೯೮೦ರ ತನಕ ಅಂದರೆ ೧೦ ವರ್ಷಗಳ ತನಕ ಯಾವುದೇ ತೀರ್ಮಾನವನ್ನು ತೆಗದುಕೊಳ್ಳುವುದಕ್ಕೆ ಆಗಿಲ್ಲ. ತಾವು ಮಾಡಲಿಲ್ಲ ಇದರಿಂದಾಗಿ ಅವರು ಚಳುವಳಿಯನ್ನು ನಡೆಸುತ್ತಿದ್ದಾರೆ. ಇಷ್ಟರತನಕ ಬಹಳ ಶಾಂತ ರೀತಿಯಿಂದ ಚಳುವಳಿಯನ್ನು ನಡೆಸಿಕೊಂಡು ಬಂದರು. ನಮ್ಮ ರೈತರು ಪೋಲೀಸ್‌ರನ್ನು ಹೊಡೆಯಬೇಕೆಂದೇನೂ ಇರಲಿಲ್ಲ, ರೈತರ ಮಕ್ಕಳೇ ಪೋಲೀಸ್ ಇಲಾಖೆಯಲ್ಲಿ ಇದ್ದಾರೆ, ಆದುದರಿಂದ ಖಂಡಿತವಾಗಿಯೂ ನಮ್ಮ ಪೋಲೀಸಿ

ನವರನ್ನು ಹೊಡೆಯಬೇಕೆಂದೇನೂ ಇರಲಿಲ್ಲ. ಆದರೆ ಪರಿಸ್ಥಿತಿ ಅಷ್ಟು ವಿಕೋಪಕ್ಕೆ ಹೋಗುವುದಕ್ಕೆ ಕಾರಣವೇನು ? ಇದು ಸಮಾಜ ಘಾತುಕ ವ್ಯಕ್ತಿಗಳ ಪ್ರಶ್ನೆಯಲ್ಲ. ನಮ್ಮ ರೈತರು ರಕ್ಷಣೆ ಕೊಡದೇ ಇರುವುದು ಸರ್ಕಾರ ವಿಫಲವಾದುದು ಮೊದಲನೆಯದು, ಎರಡನೆಯದಾಗಿ ಅವರು ಶಾಂತ ರೀತಿಯಲ್ಲಿ ಪ್ರತಿಭಟನೆ ಮಾಡುವುದಕ್ಕೆ ಬಂದಾಗ ಸರ್ಕಾರದವರು ಅದನ್ನು ಇತ್ಯರ್ಥಪಡಿಸದೇ ಪೋಲೀಸಿನವರನ್ನು ಚೂ ಬಿಟ್ಟು ಹೊಡೆಸುವುದಕ್ಕೆ ಪ್ರಯತ್ನ ಮಾಡಿದ್ದೀರಿ, ಇದು ಇವತ್ತು ಜಾಸ್ತಿಯಾಗುತ್ತಿದೆ. ಉದಾಹರಣೆಗೆ ಶ್ರೀನಿವಾಸಪುರದಲ್ಲಿ ನಡೆದಂಥ ಘಟನೆ ನೋಡಿದ್ದೇವೆ. ಮತ್ತೆ ಇನ್ನು ಅನೇಕ ಕಡೆಗಳಲ್ಲಿ ನಡೆದಿರುವುದನ್ನು ಪತ್ರಿಕೆಗಳ ಮುಖಾಂತರವಾಗಿ ಸಹ ತಿಳಿದುಕೊಂಡಿದ್ದೇವೆ. ಒಬ್ಬ ತಂದೆ ತನ್ನ ಮಗನನ್ನು ಪೋಲೀಸ್ ಸ್ಟೇಷನ್‌ಗೆ ಕಳುಹಿಸಿದರೆ ಪುನಃ ಆತನ ಶವವನ್ನು ವಾಪಸ್ಸು ತರಬೇಕಾಗಿ ಬಂದಂಥ ಪರಿಸ್ಥಿತಿ ಉಂಟಾಗಿದೆ. ಅವರ ತಂದೆ ಫೋಟೋ ತೋರಿಸಿ ಕಣ್ಣೀರು ಸುರಿಸುತ್ತಿದ್ದಾರೆ ಇಂಥಾ ಘಟನೆಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿರುವಾಗ ಮುಖ್ಯ ಮಂತ್ರಿಗಳವರು ಸರ್ಕಾರದ ಪರವಾಗಿ ಪೋಲೀಸಿನವರು ಇರುವುದೇ ಹೊಡೆಯುವುದಕ್ಕಾಗಿ ಎನ್ನುವ ಧಾಟಿಯಲ್ಲಿ ಹೇಳಿದರೆ, ಇವತ್ತು ರೈತನ ಜೀವನ ಮತ್ತು ಅವನನ್ನು ಸಂರಕ್ಷಣೆ ಮಾಡುವವರು ಯಾರು ಎನ್ನುವ ವಿಷಯ ಬರುತ್ತದೆ. ಇವತ್ತು ಅಲ್ಲಿ ರೈತರು ಚಳುವಳಿ ಮಾಡಿದರು, ಅದಕ್ಕೆ ಪೋಲೀಸಿನವರು ಅಲ್ಲಿ ಲಾಟಿ ಚಾರ್ಜ್ ಮಾಡಿದರು, ಅದು ಸರಿ ಆದರೆ ಇವತ್ತು ಅಲ್ಲಿ ಲಾಟಿ ಚಾರ್ಜು ಮಾಡುವಂಥ ಪರಿಸ್ಥಿತಿ ಏತಕ್ಕೆ ಬಂತು ? ಸಾವಿರಾರು ಜನ ನ್ಯಾಯವಾದ ಬೇಡಿಕೆಗಳಿಗೋಸ್ಕರವಾಗಿ ಶಾಂತರೀತಿಯಲ್ಲಿ ಚಳುವಳಿಯನ್ನು ನಡೆಸಬೇಕಾಗಿದ್ದರೆ ಇವತ್ತು ಪೋಲೀಸಿನವರು ಅವರ ಮೇಲೆ ಲಾಟಿ ಚಾರ್ಜ ಮಾಡಿದ್ದಾರೆ. ಅದನ್ನು ಪ್ರತಿಭಟಿಸುವಾಗ ಇಂಥಾ ಘಟನೆ ನಡೆದಿದೆ ಆದುದರಿಂದ ಇವರಲ್ಲಿ ಸಮಾಜ ಘಾತುಕ ಶಕ್ತಿಗಳ ಮೇಲೆ ಹಾಕಿ ತಪ್ಪಿಸಿ ಕೊಳ್ಳುವುದು ಸೂಕ್ತವಲ್ಲವೆಂದು ಹೇಳುತ್ತೇನೆ. ಆದರೆ ಇಂಥಾ ಘಟನೆ ಆಗಬಾರದಾಗಿತ್ತು, ಪೋಲೀಸಿನವರು ಆಗಲೇ ಇಲ್ಲವೇ ರೈತರೇ ಆಗಲೀ ಸಾಯಬಾರದಾಗಿತ್ತು. ಇಬ್ಬರ ಜೀವ ಹಾನಿಯಾಗಬಾರದಾಗಿತ್ತು ಅಂಥಾದ್ದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಸೂಕ್ತ ಮಾರ್ಗವನ್ನು ಹಾಕಿಕೊಳ್ಳದೇ ಇರುವುದರಿಂದ ಇಂಥಾ ದುರ್ಘಟನೆಗಳು ರಾಜ್ಯದಲ್ಲಿ ಆಗುತ್ತಿದೆ. ಈ ಮೂಲಭೂತ ಪ್ರಶ್ನೆಯ ಬಗ್ಗೆ ನಾವು ವಿಚಾರ ಮಾಡುವುದಾದರೆ ನಾವು ಪಿ.ಎ.ಸಿ.ಯ ಅಧ್ಯಕ್ಷರ ಜೊತೆಯಲ್ಲಿ ನರಗುಂದ, ನವಲಗುಂದ ಭಾಗಗಳಿಗೆ ನಾವು ಹೋಗಿದ್ದಾಗ ಅಲ್ಲಿಯ ಕ್ಷೇತ್ರದ ರೈತರು ಬಂದು ಕಳಕಳಿಯಿಂದ ನಮ್ಮ ಹತ್ತಿರ ಮನವಿ ಮಾಡಿಕೊಂಡಿದ್ದರು. ನಾವು ಸರ್ಕಾರಕ್ಕೆ ಹೇಳಿ ಹೇಳಿ ಸಾಕಾಯಿತ್ತು ನೀವಾದರೂ ಕೂಡ ಸರ್ಕಾರದವರ ಗಮನಕ್ಕೆ ತನ್ನಿ, ನಮಗೆ ನೀರು ಸಿಗುತ್ತಿಲ್ಲ. ಆದರೆ ಕರವನ್ನು ಮಾತ್ರ ವಸೂಲಿ ಮಾಡುತ್ತಿದ್ದಾರೆ, ಆಮೇಲೆ ಜಮೀನುಗಳನ್ನು ಕಳೆದುಕೊಂಡಿದ್ದಾರೆ ವರ್ಷಾನುಗಟ್ಟಲೆಯಾದರು ಪರಿಹಾರ ಧನವನ್ನು ಕೂಡ ಕೊಟ್ಟಿಲ್ಲ, ಜಮೀನು ಕಳೆದುಕೊಂಡಿದ್ದರೂ ಅದರ ಮೇಲೆ ಬೆಟರ್‌ಮೆಂಟ್ ಲೆವಿಯನ್ನು ವಸೂಲಿ ಮಾಡುತ್ತಿದ್ದಾರೆ. ಇದಲ್ಲದೆ ಅವರ ಮೇಲೆ ಅನೇಕ ರೀತಿಯ ಕೇಸ್‌ಗಳನ್ನು ಹಾಕಿ ಕೋರ್ಟಿಗೆ ಬೇರೆ ಅಲೆದಾಡಿಸುತ್ತಿದ್ದಾರೆ. ಎನ್ನುವ ತಮ್ಮ ಕಷ್ಟ ಸುಖಗಳನ್ನು ನಮ್ಮ ಮುಂದೆ ಹೇಳಿಕೊಂಡರು. ಅದಕ್ಕೆ ನಾವು ಹೇಳಿದೆವು ಇದರ ಬಗ್ಗೆ ಏನೇ ಕ್ರಮ ತೆಗೆದುಕೊಳ್ಳಲು ನಮಗೆ ಅಧಿಕಾರವಿಲ್ಲ, ಸರ್ಕಾರಕ್ಕೆ ಬೇಕಾದರೆ ಬರೆದು ತಿಳಿಸುತ್ತೇವೆಂದು ಹೇಳಿ ಹಾಗೇನೇ ನಮ್ಮ ಪಿ.ಎ.ಸಿ.ಯ ಅಧ್ಯಕ್ಷರು ಸರ್ಕಾರಕ್ಕೆ ಇದರ ಬಗ್ಗೆ ಪತ್ರ ಕೂಡ ಬರೆದು ತಿಳಿಸಿದ್ದಾರೆ. ಇದಾದ ನಂತರ ಅದು ಇನ್ನೂ ಸರ್ಕಾರದವರ ಪರಿಶೀಲನೆಯಲ್ಲಿಯೇ ಇದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಇಂಥಾ ದುರ್ಘಟನೆ ನಮ್ಮ ರಾಜ್ಯದಲ್ಲಿ ಇನ್ನು ಸಿಡಿಯುವಂಥಾ ಅಪಾಯದ ಪರಿಸ್ಥಿತಿ ಇರುವುದರಿಂದ ಸರ್ಕಾರದವರು ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಪಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತು ಮೂಲಭೂತವಾಗಿ ರೈತರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಅವರಿಗೆ ಪರಿಹಾರವನ್ನು ಒದಗಿಸಿ ಕೊಡುವಂತೆ ಮಾಡುವುದು ಮೊದಲನೆಯದು. ಎರಡನೆಯದಾಗಿ ನಡೆದಿರುವಂಥಾ ಘಟನೆಯಲ್ಲಿ ಯಾರು ಮೃತರಾಗಿದ್ದಾರೆ ಅವರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಅವರಿಗೆ ಪರಿಹಾರ ಏನು ಕೊಡುವುದಿದೆ ಅದನ್ನು ಕೊಡಿ ಇವತ್ತು ಏನು ಪೋಲೀಸಿನವರು ನಿಮ್ಮ ಆದೇಶವನ್ನು ನೆರವೇರಿಸುವುದಕ್ಕಾಗಿ ಅಲ್ಲಿ ಹೋಗಿದ್ದಾಗ ಈ ದುರ್ಘಟನೆ. ನಡೆದಿದೆ ಸಾಮಾನ್ಯವಾಗಿ ಇಂಥಾ ಘಟನೆಯಲ್ಲಿ ಪೋಲೀಸಿನವರು ಸತ್ತಾಗ ಜನರಲ್ಲಿ ಸಾಮಾನ್ಯವಾಗಿ ಒಂದು ರೀತಿಯ ಭೀತಿಯ ವಾತಾವರಣ ತುಂಬಿರುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳವರು ಇಲ್ಲಿಯ ಕೆಲವು ಸದಸ್ಯರುಗಳನ್ನು ಕರೆದುಕೊಂಡು ಅಲ್ಲಿಯ ಪ್ರದೇಶಗಳಿಗೆಲ್ಲಾ ಭೇಟಿ ಕೊಟ್ಟು ಜನರಲ್ಲಿ ಏನು ಒಂದು ಭೀತಿಯ ವಾತಾವರಣ ಉಂಟಾಗಿದೆ. ಅದನ್ನು ತಪ್ಪಿಸುವ ಸಲುವಾಗಿ ಪ್ರಯತ್ನ ಪಡಬೇಕು. ಅಲ್ಲಿ ಶಾಂತ ಪರಿಸ್ಥಿತಿ ಉಂಟಾಗುವ ಹಾಗೆ ವ್ಯವಸ್ಥೆ ಮಾಡಬೇಕು. ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೋಗು

ವಾಗ ಅವರ ಜೊತೆಯಲ್ಲಿ ಮಾನ್ಯ ಕಂದಾಯ ಸಚಿವರನ್ನು ಮತ್ತು ಈ ಮನೆಯ ಕೆಲವು ಸದಸ್ಯರುಗಳನ್ನು ಕಳುಹಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಕೊನೆಯದಾಗಿ ಅಲ್ಲಿ ೪ ಜೀವಗಳ ಹಾನಿಯಾಗಿರುವುದರಿಂದ ಇದರ ಬಗ್ಗೆ ಒಂದು ಜುಡಿಶಿಯಲ್ ಪ್ರೋಬ್ ಅಗತ್ಯವಿರುವುದರಿಂದ ಅದನ್ನು ಸಹ ಏರ್ಪಡಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಂದಾಯ್ಯ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ನೂರಕ್ಕೆ ೮೦ ರಷ್ಟು ಮಂದಿ ರೈತರು ಇನಿದ್ದಾರೆ ಅವರ ಬಗ್ಗೆ ನಾವು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಸ್ವಾತಂತ್ರ್ಯ ನಂತರ ಈ ಸದನದ ಸದಸ್ಯರು ರೈತರ ಬಗ್ಗೆ ಸಾಮೂಹಿಕವಾಗಿ ಚಿಂತನೆ ಮಾಡುತ್ತಿರುವುದು ಇದೇ ಮೊದಲ ಬಾರಿಗೆ. ಇಂಥ ಒಂದು ಸದವಕಾಶ ಇವತ್ತು ನಮಗೆ ದೊರೆತಿದೆ, ಅದಕ್ಕೆ ರೈತರ ಪರವಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ನಾವು, ರೈತ ನಮ್ಮ ದೇಶದ ಬೆನ್ನೆಲುಬು, ಅವನಿಗೆ ಎಲ್ಲ ವಿಧವಾದ ಸೌಲಭ್ಯಗಳನ್ನು ಕೊಡಬೇಕೆಂದು ದೊಡ್ಡ ದೊಡ್ಡದಾಗಿ ಭಾಷಣಗಳನ್ನು ಮಾಡುತ್ತಿದ್ದೇವೆಯೇ ವಿನಹ ಆತನಿಗೆ ಏನೇನೂ ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ. ಅವನು ಬೆಳೆದುಕೊಟ್ಟ ಆಹಾರದಿಂದ ನಾವು ಜೀವಿಸುತ್ತಿದ್ದೇವೆ. ಆದರೂ ಅವನ ಕಡೆ ಗಮನ ಕೊಡುತ್ತಿಲ್ಲ. ರೈತನ ಆರ್ಥಿಕ ಮಟ್ಟವನ್ನು ಹೆಚ್ಚಿಸಬೇಕು, ಅವನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕು ಮತ್ತು ಅವನಿಗೆ ಸರಿಯಾದ ರೀತಿ ತಿಳುವಳಿಕೆ ನೀಡಬೇಕೆಂದು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯನಂತರ ಇವತ್ತಿನವರೆಗೂ ಭಾಷಣ ಮಾಡುತ್ತಿದ್ದೇವೆಯೇ ಹೊರತು ರೈತರ ಸಂಕಷ್ಟಗಳನ್ನು ನಿವಾರಣೆ ಮಾಡಿಲ್ಲ. ಬೆಳೆ ಹೋದಾಗ ರೈತರಿಗೆ ಪರಿಹಾರ ಕೊಡಿ ಎಂದರೆ ಕಂದಾಯ ಮಾಫಿ ಮಾಡಿದ್ದೇವೆಂದು ಹೇಳುತ್ತಾರೆ, ರೈತ ಕೊಡತಕ್ಕ ಕಂದಾಯ ಎಕರೆಗೆ ಕೇವಲ ಒಂದೆರಡು ರೂಪಾಯಿಗಳು. ಇದನ್ನು ಮಾಫಿ ಮಾಡಿದ್ದೇವೆಂದು ದೊಡ್ಡದೊಡ್ಡದಾಗಿ ಪತ್ರಿಕೆಗಳಲ್ಲಿ ಬಹಿರಂಗಪಡಿಸುವುದು ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ ಆದರೆ ಭಾಷಣಗಳನ್ನು ಮಾತ್ರ ಜೋರಾಗಿ ಮಾಡುತ್ತಿದ್ದೇವೆ; ಯಾವುದೇ ರೀತಿಯ ಪರಿಹಾರವನ್ನು ಕೊಟ್ಟಿಲ್ಲ. ಇವತ್ತಿನ ದಿವಸ ರೈತ ಬೆಳೆದಂತಹ ಪದಾರ್ಥಗಳಿಗೆ (ದವಸಧಾನ್ಯಗಳಿಗೆ) ನ್ಯಾಯವಾದ, ನಿಗದಿಯಾದ ಬೆಲೆ ಸಿಗುತ್ತಿಲ್ಲ. ಇವತ್ತು ರೈತ ಕೊಂಡುಕೊಳ್ಳತಕ್ಕ ರಸಗೊಬ್ಬರದ ಬೆಲೆ ಗಗನಕ್ಕೇರಿದೆ. ರೈತ ಒಂದು ಕ್ವಿಂಟಾಲ್ ರಸಗೊಬ್ಬರವನ್ನು ಕೊಳ್ಳಬೇಕೆಂದರೆ ೪ ಕ್ವಿಂಟಾಲ್ ಭತ್ತವನ್ನು ಮಾರಬೇಕು. ರೈತನ ಮಗ ಬೆಂಗಳೂರು ನಗರದಲ್ಲಿ ವ್ಯಾಸಂಗ ಮಾಡಬೇಕೆಂದರೆ ತಿಂಗಳೊಂದಕ್ಕೆ ೨೫೦ ರೂಪಾಯಿ ಹಾಸ್ಟಲ್ ಚಾರ್ಜ್ ಕೊಡಬೇಕಾಗುತ್ತದೆ. ಈ ರೀತಿಯಾದರೆ ಯಾವ ರೈತರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸಲಿಕ್ಕೆ ಸಾಧ್ಯವಾಗುತ್ತದೆ? ಯಾವ ರೈತನ ಮಗನಿಗೆ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸಿಗುತ್ತದೆ ಹೇಳಿ; ಆತ ಅಲ್ಲಿ ಅಷ್ಟೊಂದು ಹಣ (ಕ್ಯಾಪಿಟೇಷನ್ ಫೀಜನ್ನು) ತೆತ್ತು ಓದಿಸುವುದಾದರೂ ಹೇಗೆ ? ಆದ್ದರಿಂದ, ರೈತರ ಮಕ್ಕಳು ಪಾಲಿಟೆಕ್ನಿಕ್ ಕಾಲೇಜುಗಳಿಗೆ ಓದಲು ಬಂದರೆ ಅವರಿಗೆ ಮೊದಲ ಆದ್ಯತೆ ನೀಡಬೇಕೆಂದು ಒತ್ತಾಯ ಮಾಡುತ್ತೇನೆ. ಆಗ ಮಾತ್ರ ರೈತರ ಉದ್ಧಾರ ಸಾಧ್ಯವಾಗುತ್ತದೆ. ಬರೀ ಘೋಷಣೆ ಭಾಷಣಗಳಿಂದ ಏನೂ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ ನಾವು ಕಾಣುತ್ತಿರುವ ಹಾಗೆ, ಅನೇಕ ಜನ ವರ್ತಕರು ಬೆಂಗಳೂರಿನ ಅಶೋಕ ಹೋಟೆಲ್ ಹಾಗೂ ೫-ಸ್ಟಾರ್; ೭-ಸ್ಟಾರ್ ಹೋಟೆಲುಗಳಲ್ಲಿ ಮಜ ಮಾಡುತ್ತಿದ್ದಾರೆ. ಅವರು ಸಂಪಾದನೆ ಮಾಡಿದ ಕಳ್ಳ ಹಣ ಏನಿದೆ ಅದನ್ನು ಅವರಿಗೆ ಖರ್ಚು ಮಾಡುವುದಕ್ಕೆ ಮಾರ್ಗ ದೊರೆಯುತ್ತಿಲ್ಲ. ಹೀಗಾಗಿ ಅವರು ದೊಡ್ಡದೊಡ್ಡ ಹೋಟೆಲುಗಳಿಗೆ ಬಂದು ಖರ್ಚು ಮಾಡತೊಡಗಿದ್ದಾರೆ, ಸರ್ಕಾರಕ್ಕೆ ಮೋಸಮಾಡಿ ಸಂಪಾದನೆ ಮಾಡಿದ ಹಣವನ್ನು ಖರ್ಚು ಮಾಡುವುದಕ್ಕೆ ಅವರಿಗೆ ದಿಕ್ಕೇ ತೋಚುತ್ತಿಲ್ಲ. ಅಂಥವರಿಂದ ಹಣ ವಸೂಲ್ಮಾಡುವ ಮಾರ್ಗವನ್ನು ಕಂಡುಹಿಡಿಯಬೇಕು. ಇಂಥ ಸಮಯದಲ್ಲಿ ರೈತರಿಗೆ ಏನಾದರೂ ಪರಿಹಾರ ಕೊಡಿ ; ಬರೀ ಕಂದಾಯವನ್ನು ಮಾಫಿ ಮಾಡಿದರೆ ಏನೂ ಕೊಟ್ಟಂತಾಗುವುದಿಲ್ಲ. ಅವನು ಬೆಳೆಯತಕ್ಕ ಬೆಳೆಗೆ ನ್ಯಾಯಬದ್ಧವಾದ ಬೆಲೆಯನ್ನು ಒದಗಿಸಿಕೊಡಬೇಕು. ಈ ರೀತಿ ಮಾಡಿದರೆ ಅವರಿಗೆ ನ್ಯಾಯ ದೊರಕಿಸಿಕೊಟ್ಟಂತಾಗುತ್ತದೆ ಇವತ್ತು ಉತ್ತರ ಕರ್ನಾಟಕದಲ್ಲಿ ಏನು ಒಂದು ಘಟನೆ ನಡೆದಿದೆ ಅದು ನಿಜಕ್ಕೂ ಶೋಚನೀಯವಾದ ಸಂಗತಿ. ಅನೇಕ ಮಾನ್ಯ ಹಿರಿಯ ಸದಸ್ಯರುಗಳು, ರೈತ ಸಂಘಟನೆಯಾಗುವುದು ಅಪರೂಪ ಎಂಬ ಮಾತನ್ನು ಹೇಳಿದ್ದಾರೆ ಅವರು ಇವತ್ತು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾಗೆ. ಅವರೇನಾದರೂ ಉಗ್ರ ರೂಪ ತಾಳಿದರೆ ಅವರನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಚಳುವಳಿ ಇಡೀ ಕರ್ನಾ

ಟಕದಾದ್ಯಂತ ಆವರಿಸುತ್ತದೆ. ಅದರ ನೇತೃತ್ವವನ್ನು ನಾವೆಲ್ಲರೂ ವಹಿಸಲೇಬೇಕಾಗುತ್ತದೆಂಬ ಮಾತನ್ನು ಕೂಡ ಅನೇಕರು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ರೈತರ ಬಗ್ಗೆ, ಬಡವರ ಬಗ್ಗೆ ಅಪಾರವಾದ ಕಳಕಳಿ, ಪ್ರೀತಿ, ವಿಶ್ವಾಸಗಳನ್ನು ಇಟ್ಟುಕೊಂಡಿದ್ದಾರೆಂದರೆ ಉತ್ಪ್ರೇಕ್ಷೆಯಾಗಲಾರದು. ಯಾವ ಸದಸ್ಯರು ಏನು ಕೇಳಿದರೂ (ರೈತರ ಬಗ್ಗೆ) ಇಲ್ಲವೆಂದು ಹೇಳಿಲ್ಲ. ಈ ಸಂದರ್ಭದಲ್ಲಿ, ರೈತರ ಸಲುವಾಗಿ ಏನೇನು ಪರಿಹಾರ ನೀಡುತ್ತೀರೆಂಬುದನ್ನು ಎಲ್ಲ ಬಹಿರಂಗಪಡಿಸಬೇಕೆಂದು ಹೇಳಬಯಸುತ್ತೇನೆ. ನಾವು ರೈತರಿಗೆ ಏನೇನು ಪರಿಹಾರ ನೀಡಬೇಕೆಂದು ಕೇಳಿದ್ದೇವೆ, ಅವುಗಳ ಬಗ್ಗೆ ಯಾವ ಯಾವ ರೀತಿ ಪರಿಹಾರ ಕೊಡುತ್ತೀರೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಕಂದಾಯ ಮಂತ್ರಿಗಳು ಸೇರಿ ಬಹಿರಂಗಪಡಿಸಬೇಕು. ಇಲ್ಲದಿದ್ದರೆ ನಾವೆಲ್ಲ ಧರಣಿ ಮುಷ್ಕರ ಹೂಡಬೇಕಾಗುತ್ತದೆ; ಇಲ್ಲವಾದರೆ ರೈತರ ಚಳುವಳಿಯ ನಾಯಕತ್ವವನ್ನು ವಹಿಸಬೇಕಾಗುತ್ತದೆ. ತಾವು ರೈತರ ಬಗ್ಗೆ ನಿರ್ಲಕ್ಷ್ಯ ತಾಳಬಾರದು. ತಾವೂ ಕೂಡ ರೈತರ ಮಕ್ಕಳು, ತಮಗೆ ರೈತರ ಸಂಕಷ್ಟ ಗೊತ್ತಿದೆ. ಈ ಬಗ್ಗೆ ಇಡೀ ದಿನವೆಲ್ಲ ಚರ್ಚೆಯಾಗಬೇಕಾಗಿದೆ. ಅದರಲ್ಲೂ ಇದು ಮೊಟ್ಟಮೊದಲ ಬಾರಿಗೆ ಚರ್ಚೆಯಾಗುತ್ತಿದೆ, ಇಲ್ಲಿ ರೈತರ ಪ್ರತಿನಿಧಿಗಳು ಸುಮಾರು ಶೇಕಡ ೯೦ರಷ್ಟು ಜನರಿದ್ದೇವೆ. ನಾವೆಲ್ಲ ಕೂಡಿ ಇಡೀ ದಿನವೆಲ್ಲ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ; ಮತ್ತು ಅವರಿಗೆ ಸರ್ಕಾರದವರು ನೀಡತಕ್ಕ ಪರಿಹಾರಗಳನ್ನು ಬಹಿರಂಗಪಡಿಸಬೇಕೆಂದು ಮತ್ತೊಮ್ಮೆ ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದ ಘಟನೆಗಳಿಗೆ ಹಿಂದಿನ ಕೆಲವಾರು ಕಾರಣಗಳಿದ್ದರೂ ಕೂಡ ಮುಖ್ಯವಾಗಿ ಕಂದಾಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಒಂದು ತಿಳಿಗೇಡಿತನದಿಂದ ಹಾಗೂ ಪೋಲೀಸರ ಅಚಾತುರ್ಯದ ಪರಿಣಾಮವಾಗಿ ಆಗಿದೆ. ಕಳೆದ ಎರಡು ವರ್ಷಗಳಿಂದ ಅದರಲ್ಲಿಯೂ ಕಳೆದ ಎರಡು ತಿಂಗಳುಗಳಿಂದ ತೀವ್ರವಾಗಿ ಅನೇಕ ಕಡೆಗಳಲ್ಲಿ ನಡೆಯುತ್ತಿರುವ ರೈತರ ಹೋರಾಟದ ಬಗ್ಗೆ ಈ ಸದನದಲ್ಲಿ ಚರ್ಚೆಯಾದಾಗಲಾದರೂ ಕೂಡ ಎರಡೂ ಇಲಾಖೆಯವರು ಕೂಡಿ ಒಂದು ಸೂಕ್ತವಾದ ತೀರ್ಮಾನ ತೆಗೆದುಕೊಂಡು ಅವರಿಗೆ ಏನಾದರೂ ಒಂದು ಪರಿಹಾರ ನೀಡಿದ್ದರೆ ಇವತ್ತು ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಕಂದಾಯ ಇಲಾಖೆಯ ಅಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಕುಳಿತುಕೊಂಡು, ರೈತರ ಸಮಸ್ಯೆಗಳ ಬಗ್ಗೆ ಮಾಹಿತಿಗಳನ್ನು ಸರಿಯಾದ ಸಮಯದಲ್ಲಿ ತರಿಸಿಕೊಂಡು ಸರಿಯಾದ ಕಾಲದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳದೆ ಹೋದದ್ದರಿಂದ ಪರಿಸ್ಥಿತಿ ಹೀಗಾಯಿತೆಂದರೆ ತಪ್ಪಾಗಲಾರದು. ಇದಕ್ಕೆ ಮುಖ್ಯ ಕಾರಣಕರ್ತರು ಎಂದರೆ, ಕಂದಾಯ ಮತ್ತು ಲೋಕೋಪಯೋಗಿ ಇಲಾಖೆಯವರು. ಅವರ ಮೇಲೆ ಸರ್ಕಾರ ನೇರವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲಿ ಮೊದಲು ಕಾನೂನು ಪ್ರಕಾರ ವಿಚಾರಣೆ ಆಗಬೇಕಾಗಿದೆ. ಎರಡನೆಯದಾಗಿ, ಪೋಲೀಸರು ನಿನ್ನೆ ನಡೆದಂತಹ ಘಟನೆಯಲ್ಲಿ ರಕ್ಷಣೆ ಕೊಡುವುದಕ್ಕೆ ಹೋಗಿರಬಹುದು. ಆದರೆ ಹಿಂದೆ ಅನೇಕ ಪ್ರದೇಶಗಳಲ್ಲಿ ಆದಂತಹ ಅವರ ಒಂದು ತಿಳಿಗೇಡಿತನವನ್ನು ನೋಡಿ (ಅವರು ಹೇಗೆ ಜನಗಳ ವಿರೋಧಿ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು ಅದನ್ನು ನೋಡಿ) ಈಗ ಆ ಸಮಯವನ್ನು ಜನರು ಉಪಯೋಗಿಸಿಕೊಂಡಿದ್ದಾರೆ; ಅಂದರೆ ರೈತರು ತಮ್ಮ ಕೋಪವನ್ನು ಅವರ ಮೇಲೆ ತೋರಿಸುತ್ತಾರೆ. ಇದನ್ನು ಸರ್ಕಾರ ಗಂಭೀರವಾಗಿ ಅರ್ಥ ಮಾಡಿಕೊಳ್ಳಬೇಕು. ಲಾ ಅಂಡ್ ಆರ್ಡರ್ ಅನ್ನು ಕಾಪಾಡಲು ಯಾರಿಗೆ ವಹಿಸಿದ್ದೀರಿ ಅವರು ಯಾವ ರೀತಿ ವರ್ತಿಸಿದ್ದಾರೆಂಬುದನ್ನು ನೋಡಬೇಕು. ಇದು ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾದುದಲ್ಲ; ಇಡೀ ರಾಜ್ಯಾದ್ಯಂತ ದೇಶಾದ್ಯಂತ ಪ್ರತಿಬಿಂಬಿತವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದ ಹಾಗೂ ಅಧಿಕಾರಿಗಳ ತಿಳಿಗೇಡಿತನದಿಂದ ಅಚಾತುರ್ಯ ಆದರೂ ಕೂಡ ಇವತ್ತು ಅನೇಕ ಜನ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ರೈತರ ಚಳುವಳಿಗೆ ಒಳ್ಳೆಯ ನಾಯಕತ್ವ ಇದ್ದರೂ ಸಹ ಕಳೆದ ಎರಡು ತಿಂಗಳುಗಳಿಂದ ಶಾಂತ ರೀತಿಯಿಂದ ನಡೆದುಕೊಂಡು ಹೋಗುತ್ತಿದ್ದ ಚಳುವಳಿ ಇದ್ದಕ್ಕಿದ್ದ ಹಾಗೇ ನಿನ್ನೆ ೭-೮ ಸ್ಥಳಗಳಲ್ಲಿ ಪ್ರಕೋಪಕ್ಕೆ ಹೋಗಿದೆ ಎಂದರೆ ಅಲ್ಲಿ ಕೇವಲ ನಾಯಕತ್ವ ವಹಿಸಿದಂತಹ ಜನರಿಂದ ಮಾತ್ರ ಆಗಿದೆ ಎಂದು ಅಲ್ಲ, ಇದರಲ್ಲಿ ಉಗ್ರಗಾಮಿ ಗಳು ಸಮಾಜಘಾತಕ ವ್ಯಕ್ತಿಗಳು ಯಾರಾದರೂ ಪ್ರವೇಶವಾಗಿರಬಹುದೆಂದು ನನಗೆ ಸಂಶಯ ಉಂಟಾಗಿದೆ. ನಮ್ಮ ದೇಶದಲ್ಲಿ ಕಳೆದ ೩೦ ವರ್ಷಗಳಿಂದ ರೈತರ ಚಳುವಳಿ ಕೆಲವಾರು ಪ್ರದೇಶಗಳಲ್ಲಿ ಆಗಿದೆ. ಉದಾಹರಣೆಗೆ, ತೆಲಂಗಾಣದಲ್ಲಿ ಆಯಿತು; ಆದರೆ ಅದರ ನಾಯಕತ್ವವನ್ನು ವಹಿಸಿದ್ದ ಜನರು ಬೇರೆ. ಉತ್ತರ ಭಾರತದಲ್ಲಿ ಇವತ್ತಿನ ದಿವಸ ಮಾನ್ಯ ಚರಣಸಿಂಗರ ನಾಯಕತ್ವದಲ್ಲಿ ರೈತರ

ಸಂಘಟನೆಯಾಗಿದೆ. ಇವತ್ತು ತಮಿಳ್ನಾಡಿನಲ್ಲಿ ನಾರಾಯಣಸ್ವಾಮಿ ನಾಯ್ಡು ಅವರ ನಾಯಕತ್ವದಲ್ಲಿ ರೈತರ ಸಂಘಟನೆ ಯಾಗಿದೆ. ಮೊನ್ನೆ ಪತ್ರಿಕೆಗಳಲ್ಲಿ ನೋಡಿದೆ; ಅಲ್ಲಿ ಲಕ್ಷಾಂತರ ಜನರು ಶಿಸ್ತಿನಿಂದ, ಸಂಯಮದಿಂದ ಅಹಿಂಸಾತ್ಮಕವಾಗಿ ಪ್ರತಿಭಟನೆ ಮಾಡಿದ್ದಾರೆ. ಕಾರಣ, ಅದರ ನಾಯಕತ್ವ ಸರಿಯಾದವರ ಕೈಯಲ್ಲಿದೆ. ಇವತ್ತು ಆಂದ್ರಪ್ರದೇಶದಲ್ಲಾಗಲೀ, ತೆಲಂಗಾಣದಲ್ಲಾಗಲೀ ಚಳುವಳಿ ನಡೆದಾಗ ಅಲ್ಲಿನ ಸರ್ಕಾರ ಹತ್ತಿಕ್ಕುವುದಕ್ಕೆ............

ಅಧ್ಯಕ್ಷರು.—ನೀವು ನಿರ್ದಿಷ್ಟವಾದ ಘಟನೆ ಬಗ್ಗೆ ಮಾತನಾಡಿ, ಬೇರೆ ವಿಷಯ ಬೇಡ.

ಶ್ರೀ ಎಂ. ಚಂದ್ರಶೇಖರ್.—ಚಳುವಳಿಯ ಹಿಂದೆ ಇರುವಂಥ ಶಕ್ತಿಗಳು ಯಾವುವು ಎಂಬುದನ್ನು ಸರ್ಕಾರ ಗುರುತಿಸಬೇಕು. ರೈತರ ಚಳುವಳಿ ಎಲ್ಲಾ ಕಡೆ ಪ್ರಾರಂಭವಾಗಿದೆ. ದಕ್ಷಿಣ ಪ್ರಾಂತ್ಯದಲ್ಲಿ ಮುಖ್ಯವಾಗಿ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಆದಂತೆ ಈ ಸಾರಿ ಕರ್ನಾಟಕದಲ್ಲಿ ಆಗಿದೆ, ಇದು ನಾಂದಿಯಾಗಿದೆ. ಆದರೆ ಚಳುವಳಿ ಉಗ್ರ ರೂಪವನ್ನು ತಾಳುತ್ತಿದೆ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಈ ರೈತ ಚಳುವಳಿ ಉಗ್ರ ಸ್ವರೂಪವನ್ನು ತಾಳಬಾರದು, ಬೇರೆ ದಾರಿ ಹಿಡಿಯಬಾರದು. ಸಂಯಮದಿಂದ ಅಹಿಂಸಾತ್ಮಕವಾಗಿ ಸಂಘಟನೆಯಿಂದ ಚಳುವಳಿಯನ್ನು ಕ್ರೋಡೀಕರಿಸುವಂಥ ಸಂಘಟನೆ ಮಾಡುವಂಥ ನಾಯಕತ್ವ ನಮಗೆ ಬೇಕಾಗಿದೆ. ಈ ಸದನದಲ್ಲಿ ಯಾರು ರೈತರ ಪ್ರತಿನಿಧಿಗಳಿದ್ದಾರೆ ಅವರ ಜವಾಬ್ದಾರಿಯೂ ಮಹತ್ತರವಾಗಿದೆ. ರೈತ ಚಳುವಳಿ ಇಷ್ಟು ವಿಕೋಪಕ್ಕೆ ಹೋಗಬೇಕಾಗಿದ್ದರೆ ಬಲವಾದ ಕಾರಣ ಇರಲೇಬೇಕು. ಅಧಿಕಾರಿಗಳ ಅಚಾತುರ್ಯದಿಂದ, ತಿಳಿಗೇಡಿತನದಿಂದ ಇದು ಆಗಿದ್ದರೂ ಕೂಡ ಇದಕ್ಕೆ ಕಾರಣ ಏನು, ಕಾರಣಕರ್ತರು ಯಾರು ಎಂಬುದನ್ನು ನೋಡಿ ಸರಿಯಾದ ಪರಿಹಾರವನ್ನು ಹುಡುಕದಿದ್ದರೆ ಇಂತಹ ಚಳುವಳಿ ವ್ಯಾಪಕವಾಗಿ ಹರಡುವ ಅಪಾಯ ಇದೆ. ಕರ್ನಾಟಕದಾದ್ಯಂತ ಹರಡುವ ಅವಕಾಶಗಳಿವೆ ಇತ್ತೀಚೆಗೆ ಬಳ್ಳಾರಿಯಲ್ಲಾಗಿದೆ, ಮತ್ತಿತರ ಕಡೆ ಆಗಿದೆ. ವ್ಯಾಪಕವಾಗಿ ಚಳುವಳಿ ಹರಡದಂತೆ ಸರ್ಕಾರ ತನ್ನ ಜವಾಬ್ದಾರಿಯನ್ನರಿತು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಚಳುವಳಿ ಇಷ್ಟು ಉಗ್ರ ಸ್ವರೂಪ ತಾಳುವುದಕ್ಕೆ ಮುಖ್ಯ ಕಾರಣಕರ್ತರು ಯಾರು. ಅಧಿಕಾರಿವರ್ಗದವರು ಯಾರೇ ಆಗಿರಲಿ ಅವರನ್ನು ಗುರುತಿಸಿ ಸೂಕ್ತ ಕ್ರಮ ತೆಗೆದುಕೊಂಡು ಸರಿಯಾದ ಶಿಕ್ಷೆ ಕೂಡ ಅವರಿಗೆ ಕೊಡಬೇಕು. ಆ ರೀತಿ ಮಾಡಿದರೆ ಮಾತ್ರ ಇದಕ್ಕೆ ಪರಿಹಾರ ಸಿಗುತ್ತದೆಯೇ ವಿನಹ ಸುಮ್ಮನೆ ಸಮಾಧಾನ ಮಾಡುವುದಕ್ಕೆ ಹೋದರೆ ಇಲ್ಲಿಗೇ ನಿಲ್ಲುವುದಿಲ್ಲ. ಇದನ್ನು ಸರ್ಕಾರ ತಿಳಿದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಲಿ ಎಂದು ಹೇಳುತ್ತಾ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಸನ್ಮಾನ್ಯ ಅಧ್ಯಕ್ಷರೇ, ಗದಗ್, ಜೇವರ್ಗಿ, ಸವದತ್ತಿ, ನವಿಲಗುಂದ ಮುಂತಾದ ಸ್ಥಳಗಳಲ್ಲಿ ನಡೆದಿರತಕ್ಕ ಘಟನೆಗಳನ್ನು, ಗಲಭೆಗಳನ್ನು ನೋಡಿದಾಗ ಯಾವುದೇ ನರರ್ಗುದ, ಒಂದು ನಾಗರೀಕ ಸರ್ಕಾರ ವಿಷಾದಪಡಬೇಕಾಗಿದೆ ಎಂಬುದು ನನ್ನ ಭಾವನೆ. ಈ ಗಲಭೆಯಲ್ಲಿ ಪೋಲೀಸಿನರು ಸತ್ತಿದ್ದಾರೆ, ನಾಗರೀಕರು ಸತ್ತಿದ್ದಾರೆ, ರೈತರು ಸತ್ತಿದ್ದಾರೆ. ಆದ್ದರಿಂದ ನಾನು ಅವರಿಗೆ ಸಂತಾಪವನ್ನು ಸೂಚಿಸುತ್ತೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾವ್ ಅವರು ಈ ಘಟನೆಯ, ಗಲಭೆಯ ಗಂಭೀರತೆಯನ್ನು ಸಂಪೂರ್ಣವಾಗಿ ಅರಿತುಕೊಂಡು ನಿರ್ವಿಕಾರ ಮನೋಭಾವನೆಯಿಂದ ಯಾವುದೇ ಪ್ರತಿಷ್ಠೆಗೆ ಅಂಟಿಕೊಳ್ಳದೆ ಮುಕ್ತವಾದ ಚರ್ಚೆಗೆ ಅವಕಾಶ ಮಾಡಿಕೊಟ್ಟು ರೈತರ ಬಗ್ಗೆ ಅವರಿಗಿರುವ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದೇ ಕಳಕಳಿಯನ್ನು ರೈತರ ಚಳುವಳಿಯನ್ನು ಬಗೆಹರಿಸುವುದರಲ್ಲೂ ಮಾಡಬೇಕು ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ಸತ್ತಿರತಕ್ಕ ಜನರಿಗೆ ಪರಿಹಾರವನ್ನು ಕೊಡುವುದಲ್ಲದೆ ಮಾನ್ಯ ಮುಖ್ಯ ಮಂತ್ರಿಗಳು ಈಗಿಂದೀಗಲೇ ಗಲಭೆಪೀಡಿತ ಪ್ರದೇಶಕ್ಕೆ ಹೋಗಿ ಅಲ್ಲಿರತಕ್ಕ ಜನರನ್ನು ಸಂದರ್ಶಿಸಿ ಅವರ ಸಮಸ್ಯೆಗಳಿಗೆ ತಾತ್ಕಾಲಿಕವಾದ ಪರಿಹಾರವನ್ನು ಕಂಡುಹಿಡಿದು ನಂತರ ಶಾಸಕರ ತಂಡವನ್ನೂ ಕಳುಹಿಸಿ ಅಧ್ಯಯನ ಮಾಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಮೂರನೆಯದಾಗಿ ಹೇಳುವುದಾದರೆ ಸ್ವಾತಂತ್ರ್ಯ ಬಂದ ಮೇಲೆ ಕಳೆದ ೩೦ ವರ್ಷಗಳಲ್ಲಿ ಯಾವುದೇ ಸರ್ಕಾರ ಬಂದರೂ ಸಹ ರೈತರ ಸಮಸ್ಯೆಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಗಂಭೀರತೆಯಿಂದ ಪರಿಹರಿಸಲಿಲ್ಲ. ಆದ್ದರಿಂದ ಈಗಲಾದರೂ ಸರ್ಕಾರ ಶಾಸಕರ ಸಮಿತಿಯನ್ನು ರೈತರ ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ರಚಿಸಿ ಆಗಾಗ ಈ ರೀತಿ ಮೇಲೇಳತಕ್ಕ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ. ಇವತ್ತು

ರೈತರ ನಿಜವಾದ ಸಮಸ್ಯೆಗಳೇನು ಎಂಬುದನ್ನು ತಿಳಿದುಕೊಂಡು ತಕ್ಷಣ ಪರಿಹರಿಸಬೇಕು. ಇಲ್ಲದಿದ್ದರೆ ಇದು ಕ್ರಾಂತಿಗೆ ನಾಂದಿಯಾಗಿ ಈ ಪ್ರವಾಹದಲ್ಲಿ ನಾವು ನೀವು ಎಲ್ಲರೂ ಕೊಚ್ಚಿ ಹೋಗುತ್ತೇವೆ. ಈ ಸರ್ಕಾರ ರೈತರ ಸಮಸ್ಯೆಗಳನ್ನು ಗಂಭೀರತೆಯಿಂದ ಪರಿಶೀಲಿಸಿ ಶಾಶ್ವತ ಪರಿಹಾರವನ್ನು ಕಂಡುಹಿಡಿಯುಬೇಕು. ಮಲಪ್ರಭಾ ಅಚ್ಚುಕಟ್ಟಿನಲ್ಲಿ ಬರತಕ್ಕ ರೈತರಿಗೆ ಬೆಟರ್‌ಮೆಂಟ್ ಲೆವಿ, ನೀರು ಕೊಡದೇ ನೀರು ತೆರಿಗೆಯನ್ನು ಹಾಕತಕ್ಕ ನೀತಿಯನ್ನು ಯಾವ ಅಧಿಕಾರಿ ಅನುಸರಿಸಿದ್ದಾನೆ ಅವನು ಎಷ್ಟೇ ದೊಡ್ಡವನಾಗಿರಲಿ ಅವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಎಂದು ಪ್ರಾರ್ಥಿಸಿ ರೈತರ ಸಮಸ್ಯೆಗಳ ಬಗ್ಗೆ ಸರ್ಕಾರ ತೀವ್ರ ಗಮನಹರಿಸಬೇಕೆಂದು ಮತ್ತೊಮ್ಮೆ ಕೇಳಿಕೊಂಡು ನನ್ನ ಮಾತಂಗಳನ್ನು ಮುಂಗಿಸುತ್ತೇನೆ.

† SRI C. M. ARUMUGHAM.—Mr. Speaker Sir, I confine myself to the demands of the farmers. Firstly they want to abolish the betterment levy, secondly reduction in the water-rate, thirdly compensation for the lands acquired for irrigation canals, Sir, 7 or 8 years ago, Government acquired lands from 3,000 to 4,000 farmers and so far they have not paid compensation and under Malaprabha project, 62 villages were sub merged: Only 75% of the cases have been settled and still 25% cases remain un-settled even today, Before probing into the tragedy that has happened yesterday, Government must take action now itself on the floor of the House and they must declare that these persons will be paid compensation immediately. Persons who are affected and persons whose lands have been acquired must be provided housesites and rehabititation. Secondly stay the collection of betterment levy and water-rate immediately. Please issue the Government order now only. Thirdly please pay the compensation for the victims who died on account of the violence, in Police firing. I suggest and urgre that Rs. 10,000/- must be paid to the family of each of the victim immediately. Fourthly I welcome the suggestion placed by Mr. Bommai that a House Committee must be sent because two officials have been killed. I was told that Police have taken extra ordinary action in bringing the persons, putting them in the lock-up and interrogation is going on. Tension is created and public are in panic. It is necessary that you must send a House Committee consisting of the members from both the Houses, headed by the Hon Minister for Revenue. They must reach the place today only and try to bring out normalcy, create peace and inuse confidence among the poor people. I was told that in the procession about 10,000 people paticipated and when there is so much of crowd the police should have taken proper precautionary measures to control the crowd. This agitation has been going on since last two months and the Police should have been alert in this regard. Yesterday there were not enough police. Why they did not post sufficient policy yesterday? Now I only appeal to the Chief Minister, before probing into the matter as to who died, how died. how the Police behaved what was the reason for firing and all, that please issue

a stay order immediately and stop collection of betterment levy and water rate ; secondly announce the payment of compensation for those who lost the lands ; thirdly please send a House Committee headed by the Revenue Minister immediately to the place, so that you can infuse confidence among the public and also try to remove the anamolies on account of this water rate and betterment levy.

12-30 P.M.

† ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಅಧ್ಯಕ್ಷರೇ, ದಯವಿಟ್ಟು ಕ್ಷಮಿಸಬೇಕು. ಮಾನ್ಯ ಸಭೆಗೆ ನಾನು ಬರುವುದಕ್ಕೆ ಸ್ವಲ್ಪ ತಡವಾಯಿತು.

ಅಧ್ಯಕ್ಷರು.—ತಾವು ಮಾತನಾಡಬಹುದು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಈ ಘಟನೆ ಕುರಿತು ನಾನೂ ಸಹ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ದಯವಿಟ್ಟು ತಾವು ಅವಕಾಶ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ನಮಗೆ ಗೊತ್ತಿಲ್ಲದೆ ಇರುವುದು ನಿಮಗೇನು ಗೊತ್ತಿದೆ? ಸುಮ್ಮನೆ ಕುಳಿತುಕೊಳ್ಳಿ. ನಿನ್ನೆ ನಡೆದಿರುವ ದುರದೃಷ್ಟ ಘಟನೆ ಬಗ್ಗೆ ನಾವೆಲ್ಲರೂ ವಿಷಾದ ಪಡಬೇಕಾಗಿದೆ. ಅದರ ಬಗ್ಗೆ ಚರ್ಚೆ ಮಾಡಲು ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ, ಚರ್ಚೆ ಯಾವ ರೂಪದಲ್ಲಿ ಬರಬೇಕಾಗಿತ್ತೋ ಆ ರೂಪದಲ್ಲಿ ಬಂದಿಲ್ಲ. ಅದಕ್ಕೆ ತಾವು ಕಾರಣರೂ ಅಲ್ಲ. ನಿಯಮ ೫೯ರ ಕೆಳಗೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ ಮೇಲೆ ಚರ್ಚೆ ಬಂದಿತ್ತೆಂದು ಕೇಳಿದೆ. ಇಲ್ಲಿ ಇರುವುದು ಕೇವಲ ಪೋಲೀಸರು ಗುಂಡು ಹಾರಿಸಿದ್ದಷ್ಟೇ ಅಲ್ಲ. ಪೋಲೀಸರು ಗುಂಡುಹಾರಿಸಿದ್ದಾಗಲೀ, ಜನರು ಸತ್ತಿರುವುದಾಗಲೀ ಅಥವಾ ಅನೇಕ ಜನರಿಗೆ ಗಾಯಗಳಾಗಿರುವುದೇ ಆಗಲೀ ಹಠಾತ್ತನೆ ಅಥವಾ ಅನಿರೀಕ್ಷಿತವಾಗಿ ನಡೆದಂಥ ವಿಚಾರವಲ್ಲ. ಇದರ ಹಿನ್ನೆಲೆಯನ್ನು ನಾವು ನೋಡಬೇಕು. ಮಾನವ ಶರೀರದಲ್ಲಿ ಕಜ್ಜಿ ಕುರ ಬರುವುದು ಯಾವಾಗ? ಕೆಲವಾರು ವರ್ಷಗಳವರೆಗೆ ಸರಿ ಇಲ್ಲದ ಆಹಾರ ಅಥವಾ ಕೆಟ್ಟ ಆಹಾರ ತಿಂದು ರಕ್ತ ಕೆಟ್ಟ ಮೇಲೆ ಕಜ್ಜಿ ಕುರಗಳಾಗುವ ಹಾಗೆ ಇದೂ ಸಹ ಹಾಗೆ ಆಗಿದೆ. ಹಠಾತ್ತನೆ ನಡೆದಿಲ್ಲ. ನನಗೆ ತಿಳಿದ ಹಾಗೆ ಮುಖ್ಯವಾಗಿ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಹೊಸದಾಗಿ ಮಲಪ್ರಭಾ ನೀರು ಹರಿಯುವ ಅಚ್ಚುಕಟ್ಟು ಪ್ರದೇಶದಲ್ಲಿರುವ ದೊಡ್ಡ ಸಮಸ್ಯೆ ಇದು. ನವಲಗುಂದ ಮತ್ತು ನರಗುಂದ ಧಾರವಾಡ ಜಿಲ್ಲೆಯಲ್ಲಿದ್ದರೆ ಸವದತ್ತಿ ಬೆಳಗಾವಿ ಜಿಲ್ಲೆಯಲ್ಲಿದೆ. ಧಾರವಾಡದ ರೋಣ ತಾಲ್ಲೂಕಿಗೂ ನೀರು ಹೋಗುತ್ತದೆ. ಹೊಸ ಅಚ್ಚುಕಟ್ಟು ಮತ್ತು ಹೊಸ ನಾಲೆ ಕೆಳಭಾಗದಲ್ಲಿ ಪ್ರದೇಶದ ಸಮಸ್ಯೆ ಇದು. ಈ ಅಚ್ಚುಕಟ್ಟು ಪ್ರದೇಶದ ಜನರು ಜಾಗೃತರಾಗಿ ಚಳುವಳಿ ಹೂಡಿರಬಹುದು. ಈ ಚಳುವಳಿ ಈಗ ಹೋಗುತ್ತಿರುವ ಧಾಟಿ ನೋಡಿದರೆ ಇದು ಇವತ್ತಿಗೇ ನಿಲ್ಲುವುದಿಲ್ಲ. ಹೊಸ ನೀರಾವರಿ ಕಾರ್ಯಗಳನ್ನು ಎಲ್ಲೆಲ್ಲಿ ಪ್ರಾರಂಭ ಮಾಡಿದ್ದಾರೆ ಅಲ್ಲೆಲ್ಲ ಚಳುವಳಿ ಪ್ರಾರಂಭವಾಗುವ ಪರಿಸ್ಥಿತಿ ಬರುತ್ತದೆ. ಇದಕ್ಕೇನು ಕಾರಣ? ಕಾರಣವೇನು ಎನ್ನುವುದನ್ನು ತಿಳಿಯದೆ ಸುಮ್ಮನೆ, ನೀವು ಹೋಗಿಬನ್ನಿ, ಮಾತನಾಡಬನ್ನಿ, ಹೇಳಿಕೆ ಕೊಡಿ ಎಂದೆಲ್ಲ ಹೇಳಿದರೆ ಇದು ಅಷ್ಟು ಸುಲಭವಾಗಿ ಬಗೆಹರಿಯತಕ್ಕ ವಿಚಾರವಲ್ಲ. ಹೊಸದಾಗಿ ನೀರಾವರಿ ಕಾರ್ಯಗಳನ್ನು ಪ್ರಾರಂಭ ಮಾಡಿರುವ ಕಡೆ ಇರುವ ಸಮಸ್ಯೆಗಳೇನು ಎನ್ನುವುದನ್ನು ಮೊದಲು ಅರ್ಥ ಮಾಡಿಕೊಂಡರೆ, ಅಲ್ಲಿಗೆ ಯಾರು ಹೋದರೂ ಅದರಿಂದ ಸ್ವಲ್ಪಮಟ್ಟಿಗೆ ಪರಿಹಾರ ಸಿಕ್ಕೀತು. ನನಗೆ ತೋರುತ್ತದೆ. ಸರ್ಕಾರಕ್ಕೆ ಇದೇನೂ ಅರ್ಥವಾಗಿಲ್ಲ, ಅರ್ಥವಾಗಿದ್ದ ಪಕ್ಷದಲ್ಲಿ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗುವ ಕಾರಣವಿರುತ್ತಿರಲಿಲ್ಲ. ಇಲ್ಲಿ ಏನಾಗಿದೆ? ನಾನು ಲೋಕಸಭೆಯ ಚುನಾವಣೆಗೆ ಸ್ವಲ್ಪ ಮುಂಚೆ ನರಗುಂದ ಮತ್ತು ನವಲಗುಂದದ ಕಡೆ ಪ್ರವಾಸ ಹೋಗಿದ್ದಾಗ ಈ ವಿಚಾರವನ್ನು ತಿಳಿಯುವುದಕ್ಕಾಗಿ ಮೂರು ನಾಲ್ಕು ಗಂಟೆಗಳ ಕಾಲ ಕಳೆದದ್ದುಂಟು. ಆ ಭಾಗದ ಭೂಮಿ ನಮ್ಮ ಭಾಗದ ಭೂಮಿಯಂತಲ್ಲ. ಅಲ್ಲಿ ಕಪ್ಪು ಮಣ್ಣಿನ ಭೂಮಿ ಇದೆ. ೬೦-೭೦ ಅಡಿ ಆಳ ಹೋದರೂ ಕಲ್ಲು ಸಿಕ್ಕುವುದಿಲ್ಲ. ಇಂತಹ ಭೂಮಿಗೆ ನೀರು ಬಿಟ್ಟರೆ ಏನಾಗುತ್ತದೆನ್ನುವುದನ್ನು ನಾವು ಕೂಲಂಕಷವಾಗಿ ನೋಡದೆ ಹೊರತು ಅರ್ಥವಾಗುವುದಿಲ್ಲ. ಇದಲ್ಲದೆ, ಅಲ್ಲಿ ಕೆಲವು ಪ್ರದೇಶಗಳಲ್ಲಿ ಹಳ್ಳ ದಿಣ್ಣೆಗಳಿರುತ್ತವೆ. ನೀರನ್ನು

ಕಾಲುವೆಯಲ್ಲಿ ಬಿಟ್ಟಾಗ, ನೀರು ಕೆಳ ಪ್ರದೇಶಕ್ಕೆ ಹೋಗಿ ತುಂಬಿಕೊಂಡುಬಿಡುತ್ತದೆ. ಅದು ಹೊರಗಡೆ ಹೋಗುವುದಕ್ಕೆ ಜಾಗವಿರುವುದಿಲ್ಲ. ಇದರಿಂದಾಗಿ ಕೃಷಿಗೆ ಯೋಗ್ಯವಾದ ಭೂಮಿ ಸವಳು ಭೂಮಿಯಾಗುತ್ತದೆ. ಇದು ಒಂದು ಮುಖ್ಯ, ಇನ್ನು ನಾಲೆಗಳನ್ನು ತೆಗೆಯುತಕ್ಕ ವಿಚಾರಕ್ಕೆ ಬರೋಣ, ಇಲ್ಲಿ ಕಂದಾಯ ಇಲಾಖೆಯವರು ಮತ್ತು ಲೋಕೋಪಯೋಗಿ ಇಲಾಖೆಯ ಉಭಯತ್ರರೂ ಸೇರಿ ಆ ಭಾಗದಲ್ಲಿ ಮಾಡುತ್ತಿರುವ ದುರ್ವ್ಯವಹಾರ, ದುರ್ನಡತೆ, ಲಂಚಗುಳಿತನ ಮತ್ತು ಅವರು ರೈತರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ ಈ ದುಸ್ಥಿತಿಯನ್ನುಂಟು ಮಾಡುವುದಕ್ಕೆ ಕಾರಣವಾಗಿದೆ. ಇತ್ತೀಚೆಗೆ ಅಲ್ಲಿ ಫೀಲ್ಡ್ ಚಾನಲ್‌ಗಳನ್ನು ತೆಗೆಯಬೇಕೆಂದು ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯವರು ಫೀಲ್ಡ್ ಚಾನೆಲ್‌ನ್ನು ತೆಗೆದಿದ್ದೇವೆಂದು ವರದಿ ಬರೆದುಕೊಂಡು ದುಡ್ಡು ವಸೂಲ್ಮಾಡಿಕೊಂಡಿರುತ್ತಾರೆ. ಆದರೆ, ವಾಸ್ತವವಾಗಿ ಅಲ್ಲಿ ಫೀಲ್ಡ್ ಚಾನಲ್ ಇರುವುದಿಲ್ಲ. ಇಂತಹ ಪ್ರದೇಶಗಳಿಗೆ ನೀರನ್ನು ಬಿಟ್ಟರೆ ಆ ಭೂಮಿಯ ಪರಿಣಾಮವೇನಾಗುತ್ತದೆಂಬುದನ್ನು ಯಾರೂ ನೋಡುತ್ತಿಲ್ಲ, ಉದಾಹರಣೆಗೆ ಹೇಳುವುದಾದರೆ. ಒಬ್ಬ ರೈತನಿಗೆ ೧೬ ಎಕರೆ ಭೂಮಿ ಇರುತ್ತದೆ. ಆದರಲ್ಲಿ ಹತ್ತು ಎಕರೆ ಭೂಮಿಗೆ ನೀರು ತುಂಬಿಕೊಂಡು ಆದು ಸವಳು ಭೂಮಿಯಾಗಿರುತ್ತದೆ. ಅಭಿವೃದ್ಧಿ ತೆರಿಗೆ ವಿಧಿಸುವ ಅಧಿಕಾರಿ ಒಟ್ಟು ೧೬ ಎಕರೆಗೂ ತೆರಿಗೆ ವಸೂಲ್ಮಾಡಲು ಹೇಳುತ್ತಾನೆ, ಆಗ ರೈತ, ನೀವು ಬಂದು ನೋಡಿ, ನನ್ನ ಭೂಮಿ ಸವಳಾಗಿದೆ, ನಾನು ಬೆಳೆ ಬೆಳೆಯಲಾಗುತ್ತಿಲ್ಲ. ಒಟ್ಟು ನನ್ನ ಭೂಮಿಗೆಲ್ಲ ಅಭಿವೃದ್ಧಿ ತೆರಿಗೆ ಹಾಕಬೇಡಿ, ನೀವು ಬಿಟ್ಟ ನೀರಿನಿಂದ ನಾನು ಬೇಸಾಯ ಮಾಡಿದ ಭೂಮಿಗಷ್ಟೇ ಅಭಿವೃದ್ಧಿ ತೆರಿಗೆ ಹಾಕಿ ಎಂದು ಅಧಿಕಾರಿಯನ್ನು ಕೋರುತ್ತಾನೆ. ಆದರೆ, ಅದನ್ನು ಕೇಳುವವರಾರು ? ಇನ್ನೂ ಕೆಲವು ಕಡೆ ನೀರನ್ನು ಬಿಟ್ಟಿಲ್ಲ, ಕಾರಣ : ಅಲ್ಲಿ ಇನ್ನೂ ಫೀಲ್ಡ್ ಚಾನಲ್‌ಗಳನ್ನು ಸರಿಯಾಗಿ ತೆಗೆದಿಲ್ಲ. ಇದರಲ್ಲಿ ಕಂಟ್ರಾಕ್ಟರ್ ಮತ್ತು ಇಂಜಿನಿಯರ್ ಇಬ್ಬರೂ ಜೊತೆಯಾಗಿದ್ದಾರೆ. ಅದನ್ನು ಯಾರೂ ಹೇಳಬೇಕಾಗಿಲ್ಲ. ಇದು ದೇಶದಲ್ಲಿ ಆಗಿರುವ ಹೊಸ ಲಗ್ನ !

ಶ್ರೀ ಎಸ್. ಬಂಗಾರಪ್ಪ.—ಹಳೇ ಲಗ್ನ !

ಶ್ರೀ ಡಿ. ದೇವರಾಜ ಅರಸ್.—ಅವರಿಬ್ಬರೂ ಹೊಸದಾಗಿ ಲಗ್ನ ಆಗಿಬಿಟ್ಟಿದ್ದಾರೆ ಹಿಂದಿನ ಕಾಲದಲ್ಲಿ ಆಗಿರುವ ಲಗ್ನವೆಂದು ನಾನು ಹೇಳಲಿಲ್ಲ. ಇತ್ತೀಚೆಗೆ ಸ್ವಾತಂತ್ರ್ಯಾನಂತರ ಉಂಟಾಗಿರುವ ಒಂದು ಪರಿಸ್ಥಿತಿ. ಮೊನ್ನೆ ತಾನೇ ಈ ಸಭೆಯಲ್ಲಿ ವಿಚಾರ ನಡೆದಿದೆ. ಉದ್ಯೋಗ ಧೃಢೀಕರಣ ಯೋಜನೆಯಲ್ಲಿ ಎಷ್ಟೋ ಕಡೆ ಗಲಾಟೆ ನಡೆದಿದೆ. ಕಂಟ್ರಾಕ್ಟರ್ ಅಧಿಕಾರಿಗಳು ಸೇರಿಕೊಂಡು ಹಣ ಹಂಚಿಕೆ ಮಾಡಿಕೊಳ್ಳುತ್ತಾರೆ. ಫೀಲ್ಡ್ ಚಾನಲ್ ತೆಗೆದಿರುವುದಿಲ್ಲ ಕಂಟ್ರಾಕ್ಟರ್ ಬಿಲ್ ಕೊಟ್ಟಿರುತ್ತಾನೆ ಸರ್ಕಾರ ಕೊಡತಕ್ಕ ದುಡ್ಡನ್ನು ಹಂಚಿಕೊಳ್ಳುತ್ತಾರೆ. ರೈತನಿಗೆ ನೀರುಗಂದಾಯ ಹಾಕದೇ ಇದ್ದರೆ, ಬೆಟರ್‌ಮೆಂಟ್‌ಲೆವಿ ತೆಗೆದುಹಾಕಿದರೆ ಸರಿ ಹೋಗುತ್ತದೆಯೆ ? ಸರಿ ಹೋಗುವುದಿಲ್ಲ. ಬೆಟರ್‌ಮೆಂಟಲೆವಿ ಬೇಡ, ನೀರುಗಂದಾಯ ಬೇಡ, ಸರ್ಕಾರ ನಡೆಸುವುದು ಬೇಡ ಅಂದರೆ ನಾವು ಇಲ್ಲದೇ ಇದ್ದಾಗ ಭರತ ಸರ್ಕಾರ ನಡೆಸಿದಹಾಗೆ ಆಗುತ್ತದೆ. ಸರ್ಕಾರ ನಡೆಸಬೇಕೆಂದರೆ ಹಣ ಬೇಕು ಹಣ ಯಾರಿಂದ ವಸೂಲು ಮಾಡಬೇಕು ? ಕೋಟಿಗಟ್ಟಲೇ ಹಣ ಖರ್ಚು ಮಾಡಿ ನೀರಾವರಿ ಸೌಕರ್ಯಗಳನ್ನು ಮಾಡುವಾಗ ಬೆಟರ್‌ಮೆಂಟ್ ಲೆವಿ ಕೊಡಬೇಕು ನೀರು ಗಂದಾಯವನ್ನು ಕೊಡಬೇಕು. I am not talking for this side or that, I want to caution the Government ; Please don't be swept away by some statement or some pressure which might be brought upon the Government. Whether the Government has taken care of it or whether it has neglected its duty ? Before Lok Sabha Election, ನಾವು ಹೋಗಿದ್ದಾಗ ನಿಲ್ಲಿಸಬೇಕೆಂದು ಹೇಳಿದ್ದು ಉಂಟು. ಪ್ರತಿಯೊಂದು ವಿಷಯವನ್ನು ಪರೀಕ್ಷೆ ಮಾಡಿ, ಯಾರಿಂದ ಬೆಟರ್‌ಮೆಂಟ್ ಲೆವಿ ವಸೂಲು ಮಾಡಬೇಕು ? ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆ ಅಂತವರಿಂದ ವಸೂಲು ಮಾಡಿ, ಯಾರಿಗೆ ತೊಂದರೆಯಾಗುತ್ತೆ ಅವರಿಂದ ವಸೂಲು ಮಾಡಬೇಡಿ ಎಂದು ತಿಳಿಸಿದ್ದೆವು. ಬೆಟರ್‌ಮೆಂಟ್ ಲೆವಿ ಹಾಕುವಾಗ ಮೋಸ ಮಾಡಿದ್ದಾರೆಂದು ಕೇಳಿದ್ದೇನೆ. ಬಹುಶಃ ಕಾನೂನಿನಲ್ಲಿ ಸ್ವಲ್ಪಮಟ್ಟಿಗೆ Lacuna ಕಾಣುತ್ತೆ. I am not certain. it has to be looked into. If I remember correct, ಇಲ್ಲಿ ಏನಾಗಿದೆ ? Minimum ೫೦೦ ಮತ್ತು Maximum ೧,೫೦೦ ರೂಪಾಯಿ ಫಿಕ್ಸ್ ಮಾಡಿದ್ದಾರೆ. ಬೇಕಾದರೆ ತರಿಸಿನೋಡಿ, ಮಾಕ್ಸಿಮಂ ಕಲೆಕ್ಟ್ ಮಾಡಿದ್ದಾರೆ. ಲಂಚಕೊಟ್ಟವನಿಗೆ ೫೦೦ ರೂಪಾಯಿ ಬರೆದಿದ್ದಾರೆ ಲಂಚ

ಕೊಡದವನಿಗೆ ೧,೫೦೦ ರೂಪಾಯಿ ಬರೆದಿದ್ದಾರೆ. ಒಂದೇ ಕಡೆ ಇದು ಕಣ್ಣಿಗೆ ಕಾಣುತ್ತೆ. ಭೂಮಿ ಫಲವತ್ತಾಗಿ ಇಲ್ಲದೇ ಇದ್ದರೂ ಮ್ಯಾಕ್ಸಿಮಮ್ ಬೆಟರ್‌ಮೆಂಟ್ ಲೆವಿ ಹಾಕಿದ್ದಾರೆ. ಇದನ್ನು ನೋಡಿದಾಗ ಸಾಮಾನ್ಯವಾಗಿ ರೈತರ ಮನಸ್ಸಿಗೆ ಜಿಗುಪ್ಸೆಯಾಗಿದೆ. ಇದು ತಮ್ಮ ಆಡಳಿತದಲ್ಲಿ ಆಗಿರತಕ್ಕಂಥ ಅವ್ಯವಸ್ಥೆ ಮತ್ತು ದುರಾಡಳಿತ. ಸ್ಥಳದಲ್ಲಿರತಕ್ಕ ಅಧಿಕಾರಿಗಳು ಮತ್ತು ಕೆಲವು ಸಂದರ್ಭದಲ್ಲಿ ಮುಂಖಂಡರುಗಳು ಎಲ್ಲರೂ ಇಲ್ಲದೇ ಹೋದರೂ ಕೆಲವರು ಸೇರಿರುತ್ತಾರೆ. ಅಧಿಕಾರಿಗಳು ಜೀಪಿನಲ್ಲಿ ಕೂರಿಸದೇ ಹೋದರೆ ಅವರನ್ನು ಟ್ರಾನ್ಸ್‌ಫರ್ ಮಾಡಿಸುವುದು. ಯಾವನು ಜೀಪಿನಲ್ಲಿ ಕೂರಿಸಿಕೊಂಡು ತಿರುಗುತ್ತಾನೆ, ಅವನ ಬಗ್ಗೆ ಶಿಫಾರಸ್ಸು ಮಾಡುವುದಕ್ಕೆ ಹೋಗುತ್ತಾರೆ. ಇದೆಲ್ಲಾ ಅಲ್ಲಿ ನಡೆದಿದೆ. ಸ್ಥಳೀಯ ಅಧಿಕಾರಿಗಳು ಬೀತಿಯಿಂದ ಕೂಡ ಈರೀತಿ ಮಾಡಿಕೊಂಡು ಬಂದಿದ್ದಾರೆ. ಹಿಂದೆ ಹೇಳಿದಂತೆ ಆಜ್ಞೆ ಪ್ರಕಾರ ಮುಂದೆ ನಡೆಯಿತೋ ಇಲ್ಲವೋ ನನಗೆ ಗೊತ್ತಿಲ್ಲ. ಅದನ್ನು ಸರ್ಕಾರದವರು ಹೇಳಬೇಕು. ಇವತ್ತು ನಡೆದಿರತಕ್ಕ ಘಟನೆಗಳಲ್ಲಿ ಒಂದು ವಿಚಾರ ಸ್ಪಷ್ಟವಾಗಿ ಕಾಣುತ್ತೆ. ಸುಮಾರು ೨ ತಿಂಗಳಿನಿಂದಲೂ ಆ ಸ್ಥಳದಲ್ಲಿ ರೈತರ ಪರವಾಗಿ ಚಳುವಳಿ ನಡೆಯುತ್ತಿತ್ತು. ಇದು ಸರ್ಕಾರದ ಗಮನಕ್ಕೆ ಬಂದಿರಲೇಬೇಕು. I am told, that even some MLAs are not able to go and face people there.

ಶ್ರೀ ಜಿ. ಬಿ. ಶಂಕರ್‌ರಾವ್.—ನಿಮ್ಮ ಕಾಲದಿಂದಲೂ ಇದೆ.

ಶ್ರೀ ಡಿ. ದೇವರಾಜ ಅರಸ್.—ಗಂಭೀರವಾಗಿ ಕೂತುಕೊಳ್ಳಿ. ನಮ್ಮ ಕಾಲದಲ್ಲಿ ನಡೆದಿದ್ದಕ್ಕೆ ನಾನು ಹೋಗಿದ್ದೆ. ನಾನು ಹೋಗಿ ನಿಲ್ಲಿಸಿ ಅಂತ ಹೇಳಿದ್ದೆ. ನಿಮಗೆ ಗೊತ್ತಿಲ್ಲದೇ ಇದ್ದರೆ ಗಂಭೀರವಾಗಿ ಕೂತುಕೊಳ್ಳಿ.

ಶ್ರೀ ಜಿ. ಬಿ. ಶಂಕರ್‌ರಾವ್.—It is not so easy......

ಶ್ರೀ ಡಿ. ದೇವರಾಜ ಅರಸ್.—I never accept his statement, ನಾನು ಪರಿಹಾರ ಹೇಳುವುದಕ್ಕೆ ಆಗಲಿಲ್ಲವೆನ್ನುವುದು ನಿಮಗೆ ಏನು ಗೊತ್ತಿದೆ.

ಶ್ರೀ ಜಿ. ಬಿ. ಶಂಕರ್‌ರಾವ್.—ನಾನು ಆ ಜಿಲ್ಲೆಯಿಂದ ಬಂದಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ನೀವು ಸ್ವಲ್ಪ ದಯಮಾಡಿ ಕೂತು ಕೊಂಡರೆ ಚೆನ್ನಾಗಿರುತ್ತೆ. Because you are responsible, you have to hold yourselves, responsible. Simply po not go on talking, you are also equally responsible, ನನ್ನನ್ನು ಕಟ್ಟಿ ಕೊಂಡು ನಿಮಗೆ ಏನಾಗುತ್ತೆ. You don't understand what you are talking ನಾನು ಇದ್ದರೆ ಹೀಗೆ ನಡೆಯುತ್ತಿರಲಿಲ್ಲ ಅಂತ ಹೇಳುತ್ತೇನೆ.

SRI G.B. SHANKAR RAO.—You should also know what you are talking.

SRI D. DEVARAJ URS.—I know what you are talking. You are talking without understanding.

SRI G.B. SHANKAR RAO.—You are not a Solemn...I am sorry...

SRI D. DEVARAJ URS.—If you feel sorry I cannot help it. These people are talking without sense...

SRI G B. SHANKAR RAO.—I protest his statement however senior he might be, he cannot say like that...

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, "ಕುಂಬಳಕಾಯಿ ಕಳ್ಳ ಅಂದರೆ ಹೆಗಲ ಮುಟ್ಟಿ ನೋಡಿಕೊಂಡ" ಎನ್ನುವಂತೆ ಇವರಿಗೆ ಯಾತಕ್ಕೆ ಕೋಪ. ಈಗ ಹೋಗಿ ಕಾಣುತ್ತೆ, ಕಳೆದ ೨-೩ ತಿಂಗಳಿಂದ ನೀವು ಯಾರಾದರೂ ಹೋಗಿದ್ದರೆ ಈ ಸಮಸ್ಯೆ ಇವತ್ತು ಬರುತ್ತಿರಲಿಲ್ಲ.

ಶ್ರೀ ಜಿ.ಬಿ. ಶಂಕರ್‌ರಾವ್.—ಅಧ್ಯಕ್ಷರೇ......

ಅಧ್ಯಕ್ಷರು.—ದಯಮಿಟ್ಟು ಸ್ವಲ್ಪ ಕೂತುಕೊಳ್ಳಿ, ಒಬ್ಬರ ಮೇಲೆ ಒಬ್ಬರು ವೈಯಕ್ತಿಕವಾಗಿ ಮಾತನಾಡುವುದು ಸರಿಯಲ್ಲ. Please resume your seat.

SRI B.B. SAYANAK.—When the leader of the opposition speaks there must be some sense of responsibility. he must be heard with attention,

SRI. R. GUNDU RAO.—Please keep quiet, let him speak what he wants to speak.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಎರಡು ತಿಂಗಳಿಂದಲೂ ಈ ಚಳುವಳಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರಲೇ ಬೇಕು.

ಶ್ರೀ ಆರ್ ಗುಂಡೂರಾವ್.—ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಧ್ಯೆ ನಮ್ಮ ಕಡೆಯಿಂದ ಯಾರೂ ಅಡಚಣೆ ಮಾಡಬಾರದು. ನಾನು ಹೇಳಲಿಕ್ಕೂ ಸಾಕಷ್ಟು ಅವಕಾಶ ಇದೆ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ. ಎರಡು ತಿಂಗಳ ಹಿಂದಿನಿಂದಲೂ ಈ ಚಳುವಳಿ ನಡೆಯುತ್ತಿರುವುದರಿಂದ ಇದು ಸರ್ಕಾರದ ಗಮನಕ್ಕೆ ಬಂದಿರಲೇಬೇಕು. ಎರಡು ತಿಂಗಳಿಂದ ಚಳುವಳಿ ಬಗ್ಗೆ ಸರ್ಕಾರ ತಾಳಿದಂಥ ಧೋರಣೆ ಏನು ? ಇದರ ಕಡೆ ಸಾಕಷ್ಟು ನಿಗಾ ಕೊಡದೇ ಇದ್ದುದರಿಂದ ಈ ರೀತಿಯಾದ ದುಷ್ಪರಿಣಾಮದಲ್ಲಿ ಪರ್ಯವಸಾನವಾಗುತ್ತಿದೆ. ಇದಕ್ಕೆ ಮೊದಲು ಸಾಕಷ್ಟು ಗಮನ ಕೊಟ್ಟಿದ್ದು ಸರ್ಕಾರ ಯಾವ ಯಾವ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡು ರೈತರಿಗೆ ಸಮಾಧಾನಕರವಾದ ರೀತಿಯಲ್ಲಿ ಅವರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸರ್ಕಾರಕ್ಕೆ ನಿಷ್ಟೆ ಇವೆ, ಕುತೂಹಲ ಇದೆ ಎಂದು ಹೇಳಿ, ಸಾರ್ವಜನಿಕರ ಮನಸ್ಸಿನಲ್ಲಿ ಒಂದು ಭಾವನೆ ಮೂಡಿಸಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ, ಸುಮಾರು ಎರಡೂವರೆ ತಿಂಗಳಿನಿಂದ ಮುಷ್ಕರ, ಚಳುವಳಿ ನಡೆಯುತ್ತಿದೆ, ಅದು ಅಷ್ಟೇ ಅಲ್ಲ. ನಾನು ತಿಳಿದ ಹಾಗೆ ಉಪವಾಸ ಸತ್ಯಾಗ್ರಹ ಕೂಡ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಆದರೂ ಸರ್ಕಾರದವರು ಇದನ್ನು ಅಷ್ಟೊಂದು ನಿಧಾನವಾಗಿಯೇ ಅಥವಾ ನಿರ್ಲಕ್ಷ್ಯ ಮನೋಭಾವದಿಂದಲೋ ಅದನ್ನು ಕಡೆಗಣಿಸಿಕೊಂಡು ಬಂದಿದ್ದರ ಪರಿಣಾಮ ಏನು ಎನ್ನುವುದು ಇವೊತ್ತು ನಮಗೆ ಪತ್ರಿಕೆಗಳ ಮೂಲಕ ವರದಿಯಾಗಿದೆ. ಅಫಿಷಿಯಲ್ ರೆಕಾರ್ಡ್ ಏನಿದೆ ಅದು ಅನಂತರ ಗೊತ್ತಾಗುತ್ತದೆ. ನಾನು ಹೇಳತಕ್ಕದ್ದು ಪತ್ರಿಕೆಗಳ ವರದಿ. ಚಳುವಳಿ ನಡೆಯುತ್ತಿರತಕ್ಕದು ಸತ್ಯ. ಗುಂಡು ಹಾರಿಸಿರುವುದು ಗೊತ್ತಿದೆ. ಅಲ್ಲಿ ಸತ್ತಿದ್ದಾರೆ ಎಂದು ಹೇಳಿದ್ದಾರೆ. ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಸತ್ತಿದ್ದಾರೆ. ರೈತರ ಪೈಕಿ ಇಬ್ಬರು ಸತ್ತಿದ್ದಾರೆ. ಇನ್ನು ಕೆಲವರು ಸೀರಿಯಸ್ ಆಗಿದ್ದಾರೆ ಅಂತ ಹೇಳಿದ್ದಾರೆ. ಈಗ ಏಟು ಬಿದ್ದಿರುವವರ ಪೈಕಿ ಯಾರು ಸಾಯುತ್ತಾರೋ ಗೊತ್ತಿಲ್ಲ. ಇದು ಇವೊತ್ತಿನ ಪರಿಸ್ಥಿತಿ ಇರತಕ್ಕದ್ದು. ಸರ್ಕಾರ ಬೆಟರ್‌ಮೆಂಟ್ ಲೆವಿ ಹಾಕಿದರೋ, ವಾಟರ್ ರೇಟ್ ಹಾಕಿದರೋ, ಅಥವಾ ಬಿಟ್ಟುಬಿಡಿ ಅಂತ ಹೇಳಿದರೋ, ಅದನ್ನು ಬಿಟ್ಟಿಲ್ಲ ಇದಕ್ಕಾಗಿ ಸರ್ಕಾರ ತಪ್ಪು ಮಾಡಿದೆ ಎಂದು ನಾನು ಹೇಳುವುದಿಲ್ಲ ಬೆಟರ್‌ಮೆಂಟ್ ಲೆವಿ ವಾಟರ್ ರೇಟ್ ನಾವು ಹಿಂದೆ ಅಧಿಕಾರದಲ್ಲಿ ಇದ್ದಾಗಲೇ ಹಾಕಿದ್ದೇವೆ, ಅದರ ಬಗ್ಗೆ ಸಭೆ ಒಪ್ಪಿದೆ. ಕಾನೂನು ಮಾಡಿ ಹಾಕಿದ್ದೇವೆ. ಇನ್ನು ನಿನ್ನೆಯ ಪತ್ರಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿದ್ಯುಚ್ಛಕ್ತಿಯ ಪ್ರಾಜೆಕ್ಟ್‌ಗಳ ಬಗ್ಗೆ ಏನೋ ಹೇಳಿದ್ದಾರೆ. ಪುನರ್‌ಪರಿಶೀಲನೆ ಮಾಡೋಣ ಎಂದು ಹೇಳಿದ್ದಾರೆ. ಒಂದು ಕಡೆ ಹೈಡ್ರೋ ಪ್ರಾಜೆಕ್ಟ್, ಒಂದು ಕಡೆ ಥರ್ಮಲ್ ಪ್ರಾಜೆಕ್ಟ್. ಈ ವರ್ಷ ದೇವರ ದಯೆಯಿಂದ ನಮ್ಮಲ್ಲಿರತಕ್ಕ ಲಿಂಗನಮಕ್ಕಿಗೆ ೧೮೧೯ ಅಡಿ ನೀರು ಬರಬೇಕಾಗಿರುವುದರಲ್ಲಿ ೧೮೦೬ ಅಡಿಯವರೆಗೆ ಬಂದಿದೆ. ಇನ್ನು ೧೩ ಅಡಿ ನೀರು ಬರಬೇಕಾಗಿದೆ. ಈಗ ಬಂದಿರುವುದಕ್ಕಿಂತ ಹೆಚ್ಚು ನೀರು ಇನ್ನು ಮುಂದೆ ಬರುವುದು ಬಹಳ ಕಷ್ಟ ಇದೆ. ಮೇಲು ಭಾಗಕ್ಕೆ ಬಂದ ಹಾಗೆಲ್ಲಾ ನೀರು ಜಾಸ್ತಿ ಬರಬೇಕಾಗುತ್ತ. ಒಂದು ಅಡಿ ಏರಬೇಕು ಅಂದರೂ ಬಹಳ ನೀರು ಬರಬೇಕಾಗುತ್ತದೆ. ೧೩ ಅಡಿ ನೀರು ಬರಬೇಕು ಅಂದರೆ ಅದು ಯಾರ ಕೈಯಲ್ಲೂ ಇಲ್ಲ. ದೇವರು ಮಳೆ ಕೊಟ್ಟರೆ ಉಂಟು. ಈಗಾಗಲೇ ಮಳೆಗಾಲ ಕಳೆಯುತ್ತಾ ಬಂದಿದೆ. ಆದ್ದರಿಂದ ಇನ್ನು ೧೩ ಅಡಿ ನೀರು ಬರುವುದು ಕಷ್ಟ ಇದೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಮಳೆ ಬರುವುದು ಇನ್ನು ಮೇಲೆ. ಜುಲೈ ಎಂಡ್‌ನಲ್ಲಿ ಜಾಸ್ತಿ.

SRI D. DEVARAJ URS.—I also pray and wish that there should be rain. We will all pray to Rain God to give us rain so that Linganmakki should fill up. But the point is-incidentally I am mentioning. ಲಿಂಗನಮಕ್ಕಿ ತುಂಬಿದರೂ ಸಹ, ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಅದರ ಅಭ್ಯಾಸ ಮಾಡಿದ್ದಾರೆ.

ಇವೊತ್ತು ವಿದ್ಯುಚ್ಛಕ್ತಿ ನಮ್ಮ ದೇಶದಲ್ಲಿ ಎಷ್ಟು ಪೂರೈಸಬೇಕೋ ಅಷ್ಟು ಸಾಕಾಗುವುದಿಲ್ಲ. ಈ ಡ್ಯಾಮ್ ಮುಚ್ಚುತ್ತೇವೆ ಎಂದು ಹೇಳದೆ ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಪುನರ್ ಪರಿಶೀಲನೆ ಎಂದು ಹೇಳಿದರೆ ಅದನ್ನು ನಿಲ್ಲಿಸಿಬಿಡುತ್ತೇವೆ ಎಂದು ಅಲ್ಲ. ಬಾಧಕ ಬಾಧಕ ನೋಡೋಣ. ಚಕ್ರ ಯೋಜನೆಯನ್ನು ನಿಲ್ಲಿಸುತ್ತೇವೆ ಎಂದು ಹೇಳಿದ್ದಾರೆ. Chakra Dam is meant as a diversionary canal to fill up Linganamakki. ಲಿಂಗನಮಕ್ಕಿಗೆ ಚ್ಯಾನಲ್‌ನಿಂದ ನೀರು ಬಿಡಬಹುದು ಎಂದು ಹೇಳಿದೆ ಸಾಕಷ್ಟು ಸಹಾಯವಾಗಲಿ ಎಂದು. ಇಷ್ಟೆಲ್ಲಾ ಆದರೂ ಕಾಳಿ ನದಿ ಪ್ರಾಜೆಕ್ಟ್ ೧೯೮೦-೮೧ನೇ ಇಸವಿಯವರೆಗೆ ಆದರೂ ನಮ್ಮ ದೇಶಕ್ಕೆ ಸಾಕಷ್ಟು ವಿದ್ಯುಚ್ಛಕ್ತಿ ಬರುವುದಿಲ್ಲ. ಥರ್ಮಲ್ ಪ್ರಾಜೆಕ್ಟ್ ಹೇಳುತ್ತಿದ್ದರು, ಇಡೀ ಭಾರತ ದೇಶದಲ್ಲಿ ಅಧಿಕಾರಿಗಳು ಇದ್ದಾರೆ ಅವರು ಅಭ್ಯಾಸ ಮಾಡಲಿ. ಯಾವುದೇ ಥರ್ಮಲ್ ಪ್ರಾಜೆಕ್ಟ್ ೧೦೦ ಪರ್‌ಸೆಂಟ್ ಕೆಪಾಸಿಟಿ ವರ್ಕ್ ಮಾಡುವುದಿಲ್ಲ. ೨೫-೩೦ ಪರ್‌ಸೆಂಟ್ ಕೊರತೆ ಇರುತ್ತದೆ.

ಶ್ರೀ ಆರ್. ಗುಂಡೂರಾವ್. —ಅಧ್ಯಕ್ಷರೆ, ನಾನು ಏನು ಹೇಳಿದ್ದೇನೆ ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪೂರ್ತಿ ಓದಲಿಲ್ಲ ಅಂತ ಕಾಣುತ್ತದೆ. ಇಷ್ಟೆಲ್ಲಾ ಆದರೂ ಸಹ ೨೫-೩೦ ಪರ್‌ಸೆಂಟ್ ಕೊರತೆ ಇರುತ್ತದೆಂದು ನಾನೇ ಹೇಳಿದ್ದೇನೆ.

ಶ್ರೀ ಡಿ. ದೇವರಾಜ ಅರಸ್. --ಈಗ ಚಕ್ರಡ್ಯಾಮ್ ಕಟ್ಟುವುದನ್ನು ನಿಲ್ಲಿಸುತ್ತೇವೆಂದು ಹೇಳಿದ್ದೀರಿ. ಪೇಪರ್‌ನಲ್ಲಿ ಬಂದಿರುವ ಹಾಗೆ If you have not said it, I accept. I am merely trying to stress the importance of the Chakra diversion. It is made to fill up the Linganmakki Dam. Even if it is filled up, the State will not be in a position to fulfil all the demands that are coming up for electricity. ಗ್ರೋಯಿಂಗ್ ಡಿಮ್ಯಾಂಡ್ಸ್ ಬೇರೆ ಬರುತ್ತದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇರುವುದು ಒಳ್ಳೆಯದು. ಅದೇ ರೀತಿ ಗಲಾಟೆ ಆದಾಗ, ಗಲಭೆ ಎಲ್ಲಾ ಮಾಡುತ್ತಾರೆ ನಿಲ್ಲಿಸಿ ಅಂತ ಹೇಳಿದರೆ I am not one of those who would say that "Stop Betterment Levy". ವಸೂಲು ಮಾಡಬೇಡಿ ಅಂತ ಅಲ್ಲ. ಸ್ಟೇ ಮಾಡಿ ಅಂತ ಹೇಳುವುದಕ್ಕೂ ನಿಲ್ಲಿಸಿ ಅಂತ ಹೇಳುವುದಕ್ಕೂ ವ್ಯತ್ಯಾಸ ಇದೆ. ಇವೊತ್ತು ಸ್ಟೇ ಮಾಡಿ ಪ್ರತಿಯೊಂದು issue ತೆಗೆದುಕೊಳ್ಳಬೇಕಾಗುತ್ತದೆ. ಅವರು ಯಾವ ರೀತಿ ನೀರು ಕೊಟ್ಟಿದ್ದಾರೆ. ಅವರು ನೀರನ್ನು ಕೊಟ್ಟಿದ್ದಾರೆಯೋ, ಇಲ್ಲವೇ, ಬೆಟರ್‌ಮೆಂಟ್ ಲೆವಿ ಹಾಕುವಾಗ, ವಾಟರ್ ರೇಟ್ ಹಾಕುವಾಗ ಏನು ಮೋಸ ನಡೆದಿದೆ. ದುಡ್ಡು ಕೊಟ್ಟವರಿಗೆ ಕಡಿಮೆ ಹಾಕಿದ್ದಾರೆ, ದುಡ್ಡು ಕೊಡದೇ ಇರುವವರಿಗೆ ಜಾಸ್ತಿ ಹಾಕಿದ್ದಾರೆ. ಇದನ್ನು ನೋಡುವ ಪರಿಸ್ಥಿತಿ ಹಿಂದಿನಿಂದಲೂ ಒದಗಿ ಬಂದಿದೆ. ಇದನ್ನು ತಿಳಿದು ನಾನು ನಿಲ್ಲಿಸಿ ಅಂತ ಹೇಳಿದ್ದು. I had given a stay. I think the then Leader of the Opposition of Mr. Bommai knows about it. ಸರ್ಕಾರಕ್ಕೆ ನನ್ನ ಸಲಹೆ ಏನು ಅಂದರೆ ಬೆಟರ್‌ಮೆಂಟ್ ಲೆವಿ, ವಾಟರ್ ರೇಟ್ ಸ್ಟೇ ಮಾಡಿ ಎಂದು. ಸ್ಟೇ ಮಾಡಿ, ನಾನ್ ಅಫಿಷಿಯಲ್ ಕಮಿಟಿ ಮಾಡಿ ಆ ಸ್ಥಳದವರನ್ನೇ ಆ ಕಮಿಟಿಯಲ್ಲಿ ಹಾಕಿಕೊಳ್ಳುವುದು ಒಳ್ಳೆಯದು. ನಾವು ಇಲ್ಲಿಂದ ಹೋಗಿ ಅಲ್ಲಿ ಎಲ್ಲವನ್ನೂ ವೆರಿಫೈ ಮಾಡಲಿಕ್ಕೆ ಆಗುವುದಿಲ್ಲ. ತಾವು ಎಂ.ಎಲ್.ಎ. ವಗೈರೆ ಹಾಕಲಿಕ್ಕೆ ಹೋಗಬೇಡಿ, ಪಾರ್ಟಿ ವಿಚಾರದಲ್ಲಿ ಹೋಗಬೇಡಿ. ಸ್ಥಳೀಯ ಜನ ಏನಿದ್ದಾರೆ ಅವರನ್ನೇ ಹಾಕಿದರೆ ಒಳ್ಳೆಯದು. ಇವೊತ್ತು ಲೋಕಲ್ ಎಂಎಲ್‌ಎ.,ಗಳ ಮೇಲೆ ನಂಬಿಕೆ ಹೊರಟುಹೋಗಿದೆ. Again you will be facing the same difficulty. What I suggest is take some local leaders who are quite conversant and are everyday moving with them. ರೈತರು ಚಳುವಳಿ ಹಿಡಿಯುವವರು ಇದ್ದಾರೆ, I am not interested in the issue to which ever party they may belong.

1-00 P.M.

ಇದರಲ್ಲಿ Above Party, Below Party ವಗೈರೆ ಎಂಬುದಾಗಿ ಮಾತನಾಡಿದ್ದಾರೆ. ಯಾವ ಪಾರ್ಟಿಯೋ ಇರಲಿ ನೀವು ಹೇಳಬೇಕಾದರೆ All party ಅಂತ ಹೇಳಿ. ಅಥವಾ Uni-

Party ಅಂತ ಹೇಳಿ. ಆ ಒಂದು ಭಾವನೆಯನ್ನು ತಾವು ಇಟ್ಟುಕೊಂಡಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ನಿಮ್ಮಲ್ಲಿ ಪ್ರಾಮಾಣಿಕವಾದ ಅಧಿಕಾರಿಗಳು ಇಲ್ಲವೇ ಇಲ್ಲ ಅಂತ ಅಲ್ಲ; ಇದ್ದಾರೆ. ಅವರನ್ನು ಹುಡುಕಬೇಕು ಅಷ್ಟೇ. ಹುಡುಕುವ ಅನುಭವ ನಿಮಗೆ ಇದೆ. ಅಂತಹವರನ್ನು ಹುಡುಕಿ ಸ್ಥಳಕ್ಕೆ ಕಳುಹಿಸಿ ಒಂದು ತಿಂಗಳ ಕಾಲ ಆಗಬಹುದು. ಅಥವಾ ೩ ತಿಂಗಳಲ್ಲಿ ಆಗಬಹುದು. ಆದರೆ ಪ್ರತಿಯೊಂದು ಕೇಸುಗಳನ್ನೂ ಒಂದು ಕಡೆಯಿಂದ ನೋಡಿ ಯಾರಿಗೆ ಬೆಟರ್‌ಮೆಂಟ್ ಲೆವಿ ಹಾಕಿದ್ದಾರೆ ಎಲ್ಲಿ ಅದನ್ನು ಕಡಿಮೆ ಹಾಕಿದ್ದಾರೆ, ಎಂಬುದಾಗಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಭೂಮಿಯನ್ನು ತುಳಿದು ನೋಡಿದರೆ ಗೊತ್ತಾಗುತ್ತದೆ. ಬೆಟರ್‌ಮೆಂಟ್ ಲೆವಿ ಆಫೀಸರ್ ಯಾರಿದ್ದಾರೆ ಅವನು......

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದೇ ಊರಿನಲ್ಲಿ ಒಬ್ಬರಿಗೆ ೩೨ ರೂ. ಹಾಕಿದ್ದಾರೆ. ಆದರೆ ಅವನ ಪಕ್ಕದಲ್ಲಿರುವ ಭೂಮಿಯ ಮೇಲೆ ೬೦೦ ರೂ.ಗಳನ್ನು ಹಾಕಿದ್ದಾರೆ.

ಶ್ರೀ ಡಿ. ದೇವರಾಜ ಅರಸು.—ಲಂಚ ಕೊಟ್ಟವನಿಗೆ ಕಡಿಮೆ, ಕೊಡದಿದ್ದವನಿಗೆ ಜಾಸ್ತಿ ಹಾಕಿದ್ದಾರೆ; ಇದು ಆ ರೈತರ ಮನಸ್ಸಿಗೆ ಬಂದು ಈ ರೀತಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ನಾವು ಅದನ್ನು ನಿಲ್ಲಿಸಿಲ್ಲ. ಸ್ಟೇ ಮಾಡಿದ್ದೇವೆ. ವಸೂಲಾತಿಯನ್ನು ಮುಂದಕ್ಕೆ ಹಾಕಿದ್ದೆವು ಅದು ಆಮೇಲೆ ಏನಾಯಿತೋ ನನಗೆ ಗೊತ್ತಿಲ್ಲ. ತಕ್ಷಣ ಈ ಚುನಾವಣೆ ಬಂತು. ಗಲಾಟೆಯಾಯಿತು, ಚುನಾವಣೆಯಲ್ಲಿ ಸೋತೆವು. ಅಧಿಕಾರವನ್ನು ಬಿಟ್ಟುಕೊಟ್ಟದ್ದು ಆಯಿತು. ಅಲ್ಲಿಂದ ಈಚೆಗೆ ಏನಾಯಿತು ಎಂಬುದನ್ನು ಅವರು ಹೇಳಬೇಕು, ನನಗೆ ಗೊತ್ತಿಲ್ಲ. ಇಷ್ಟು ಮಾತ್ರ ವಿಷಯ, ನಂತರ ೨ ತಿಂಗಳ ಮೇಲೆ ನಡೆದಿರತಕ್ಕಂತಹದ್ದು ನಿಜವಾದ ವಿಚಾರ ಅಂತ ಕಾಣುತ್ತದೆ. ಚಳುವಳಿ ನಡೆದಿದೆ; ಸತ್ಯಾಗ್ರಹ ನಡೆದಿದೆ. ಅಲ್ಲಿ ಸರ್ಕಾರದ ವತಿಯಿಂದ ಯಾರೂ ಅಲ್ಲಿಗೆ ಹೋಗಿ ಕೇಳುವುದಕ್ಕೆ ಹೋಗದೇ ಇರುವುದು. ಇದರ ಪರಿಣಾಮವಾಗಿ ಗೋಲಿಬಾರ್ ಆಯಿತು, ಇಬ್ಬರು ರೈತರು ಸತ್ತಿದ್ದಾರೆ. ಇಬ್ಬರು ಪೋಲೀಸ್ ಅಧಿಕಾರಿಗಳೂ ಸತ್ತಿದ್ದಾರೆ. ಕೆಲವು ಜನಗಳಿಗೆ ಪೆಟ್ಟು ಬಿದ್ದಿದೆ. ಪೋಲೀಸಿನವರು ಏನು ಮಾಡಿದ್ದಾರೋ, ಅದು ಸರಿಯೋ ತಪ್ಪೋ ಎಂಬುದು ಪೂರ್ಣವಾಗಿ ವಿಚಾರಣೆ ಮಾಡಿದ ಮೇಲೆ ಅದರ ವರದಿ ಬರುವವರೆಗೂ ನಮಗೆ ಅರ್ಥವಾಗುವುದಿಲ್ಲ, ಯಾರದ್ದು ಸರಿ ಯಾರದ್ದು ತಪ್ಪು, ಅದು ಅತಿರೇಖವೇ ಅಥವಾ ಇಲ್ಲವೇ ಎಂಬುದು ನಮಗೆ ಗೊತ್ತಿಲ್ಲ. ಮೆರವಣಿಗೆಯಲ್ಲಿ ಬಂದಂತಹ ಜನ ಉದ್ರೇಕಗೊಂಡುದರಿಂದ ಪೋಲೀಸಿನವರು ಮೇಲೆ ಬಿದ್ದ ಪರಿಣಾಮವಾಗಿ ಅನಿವಾರ್ಯವಾಗಿ ಗುಂಡನ್ನು ಹಾರಿಸಬೇಕಾಯಿತು ಎಂಬುದಾಗಿ ಅವರು ಹೇಳಿದ್ದಾರೆ. ವಿಷಯಗಳನ್ನು ನಾವು ಇಲ್ಲಿ ಕುಳಿತು ಚರ್ಚೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ನಮ್ಮಲ್ಲೂ ಮಾಹಿತಿ ಇಲ್ಲ. ೪ ದಿನ ಕಳೆದ ಮೇಲೆ ಸಿಗಬಹುದು. ನಾನಫಿಷಿಯಲ್‌ರವರಿಂದ ನಮಗೂ ಬರುತ್ತದೆ. ಸಧ್ಯಕ್ಕೆ ಸರ್ಕಾರಕ್ಕೆ ಗೊತ್ತಿರಬೇಕು. ನಮಗೆ ಏನೂ ಹೆಚ್ಚಿಗೆ ವಿಚಾರ ಗೊತ್ತಿಲ್ಲ. ಹೌಸ್ ಕಮಿಟಿ ಮಾಡಬೇಕೆಂದು ಶ್ರೀಮಾನ್ ಆರ್ಮುಗಂರವರು ಮತ್ತು ಬೊಮ್ಮಾಯಿಯವರು ಹೇಳಿದರು. ಹೌಸ್ ಕಮಿಟಿ ಮಾಡುವುದು ಏತಕ್ಕೆ? ಆದರೂ ಕೂಡ ನ್ಯಾಯಾಂಗ ವಿಚಾರಣೆಯನ್ನು ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ,

We are not interested, nor are we capable of going into the question of the judicial aspect of it. We can at best go there. ವಿಷಯ ಏನು ಅಂತ ತಿಳಿದುಕೊಳ್ಳಬಹುದು. ಅಷ್ಟೇ. ಇನ್ನೇನನ್ನೂ ಮಾಡುವುದಕ್ಕಾಗುವುದಿಲ್ಲ. It is a very pertinent point, i.e., always under such circumstances the police are apt to take stringent excessive measures so as to curb and make the people feel that the police are strong under any circumstances. In this process they are also likely to commit more and more mistakes and put all of us in difficulty including the Government. That is why I would like the Government to concede the point *viz.*, this House Committee, if it is constituted, I am saying that we not interested to go and probe. If you look at it from that angle, I am sorry for the Government. I cannot help and let them take the responsibility If on the other hand, they are willing to constitute a committee, yes, we will also

take a portion of the burden of the Government to diffuse the situation make the people feel that there is going to be justice given to them and towards that end that this Committee of the Legislature is interested, and not that we are interested in finding fault with Mr. X, Y or Z. We are interested in diffusing the situation as well as preventing any further police excesses and also to advise the local farmers not to indulge any more in such Sathyagrahas and Chaluvalis but to stop them. We can say that the Government are going to take steps immediately. Now you stop all collections and unless they look into each individual grievance, collection must not be done If these are the things to be done, yes, I would only tell the Government "You please consider this aspect of forming a House Committee".

Now, regarding the law and order situation wherein the report is that two Police Sub Inspectors have died and two non-officials who have been in the group or melee have also died. I do not know. Somebody said that one or two people seem to be very serious and they are also not likely to survive. This is the report we have. Under circumstances last time there was a more or less similar situation wherein firing had taken place in Srinivasapura and there were two deaths over which the Government was pleased to say, they had already instituted magisterial inquiry by the District Magistrate or the Deputy Commissioner. I did say at that time "Please consider this question of judicial inquiry". Of course, the Chief Minister did say that they had already ordered a magisterial inquiry. Subsequently if it becomes necessary he had no objection for a judicial inquiry. That is what I remember he seems to have said. We have left it at that. Even now, I say whenever such firings take place judicial inquiry is the best, because in such circumstances where the firing results in death it is better to have a judicial inquiry. Even here, it is perhaps more serious than what had taken place in Srinivasapura area. Therefore, I suggest that let there be a judicial inquiry to probe into this aspect of law and order situation, the firing the death and other attendant problems connected with this situation. These are our suggestions. Sir, I think, I will not be presumptions if I say that these are our suggestions, not only from me, but from all my friends on this side who are anxious to see that the farmer's problems are attended to at once. Secondly that this kind of police firing which has become somewhat more and more common, of late, should be stopped. How to stop it? It is not enough by merely trying to put some ointment on the surface and say that this is over. It won't be over. It is something deeper. Therefore, I say the judicial inquiry, if held, will bring out, without taking this side or that side,

facts and figures which will be useful for the Government itself more than for anybody else to tackle the situations as and when they arise and Government will also be in a position to know why such a thing has happened. Therefore, Sir, I have stressed for the judicial inquiry. I know the Chief Minister will be good enough to say at once that compensation will be paid. The compensatian will have to be paid to the families of people who have suffered from this firing and those who hav ebeen wounded I do not know the number of persons wounded. Government will have to find out and there must be a generous gesture on the part of the Government. I am sure the Chief Minister will agree to give them sufficient quantum of compensation even for the Police officers. There is rule or convention that to start with Rs. 10,000/ are to be given immediately to the families of those Sub-Inspectors who have died in this melee. Thank you Sir.

ಶ್ರೀ ಆರ್. ಗುಂಡೂರಾವ್.—(ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ನಿನ್ನೆ ನಡೆದಂತಹ ಘಟನೆ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ನಡೆದಿದೆ. ಬಹುಶಃ ಇಬ್ಬರು ಅಥವಾ ಮೂವರನ್ನು ಬಿಟ್ಟರೆ ಬಾಕಿಯುವರೆಲ್ಲಾ ವಿಷಯದ ಬಗ್ಗೆ ಮಾತನಾಡಿದ್ದಾರೆ. ಕೆಲವರು ರಾಜಕೀಯವನ್ನು ಸೇರಿಸಿಕೊಂಡು ಮಾತನಾಡಿದ್ದಾರೆ ಅವರ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವರು ಈ ವಿಷಯದ ಬಗ್ಗೆ ಯಾವ ರಾಜಕೀಯವನ್ನೂ ಬೆರೆಸದೇ ಮಾತನಾಡಿದ್ದಾರೆ. ಈ ವಿಷಯದ ಬಗ್ಗೆ ಚರ್ಚೆ ಶುರುವಾದಾಗಲೇ ನಾನು ಹೇಳಿದ್ದೇನೆ. ಆಗ ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಗೆ ಬಂದಿರಲಿಲ್ಲ. ಇದರಲ್ಲಿ ರಾಜಕೀಯ ಇಲ್ಲ. ಆ ಪಕ್ಷ ಈ ಪಕ್ಷ ಎಂದು ಹೇಳುವುದು ಬೇಡ. ಈ ವಿಷಯದ ಬಗ್ಗೆ ಕಳಕಳಿ ನಮಗೂ ಇದೆ ನಿಮಗೂ ಇದೆ. ಅಲ್ಲಿ ನಡೆದ ವಿಷಯ ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ಪೂರ್ತಿ ವರದಿ ಬರಬೇಕಾಗಿದ್ದು ಅದು ಬಂದ ಮೇಲೆ ಏನೆಂಬುದು ಗೊತ್ತಾಗುತ್ತದೆ. ಅಲ್ಲಿ ಏಕೆ ಘಟನೆ ನಡೆಯಿತು ಹೇಗೆ ನಡೆಯಿತು, ಅಲ್ಲಿ ರೈತರ ತಪ್ಪು ಇದೆಯೋ, ಪೋಲೀಸರ ತಪ್ಪು ಇದೆಯೋ, ರೆವಿನ್ಯೂ ಇಲಾಖೆಯವರ ತಪ್ಪು ಇದೆಯೆ ಎಂಬುದೆಲ್ಲಾ ವರದಿ ಬಂದ ಮೇಲೆ ಗೊತ್ತಾಗುತ್ತದೆ. ಪತ್ರಿಕೆಯವರಿಗೂ ಸಹಾ ಈ ಬಗ್ಗೆ ಪೂರ್ತಿ ತಿಳಿದಿರುವುದಿಲ್ಲ. ಯಾಕೆಂದರೆ ಅಲ್ಲಿ ಅಶಾಂತಿ ವಾತಾವರಣ ಇದೆ. ಈ ಬಗ್ಗೆ ೨ ಗಂಟೆ ಇಲ್ಲದಿದ್ದರೆ ೩ ಗಂಟೆ ಕುಳಿತು ಚರ್ಚೆ ಮಾಡೋಣ. ಏನು ನಡೆದಿದೆ ಎಂಬ ಬಗ್ಗೆ ಪೂರ್ತಿ ವರದಿಯನ್ನು ತರಿಸಿ ಇಡುತ್ತೇನೆಂದು ಹೇಳಿದ್ದೇನೆ. ನಾನು ನಿನ್ನೆ ಸುದ್ದಿ ತಿಳಿದ ತಕ್ಷಣ ರಾಜ್ಯದ ಐ ಜಿ.ಪಿ. ಯವರನ್ನು ತಕ್ಷಣ ಕಳುಹಿಸಿಕೊಟ್ಟಿದ್ದೇನೆ. ಅವರು ಕೂಡಲೇ ಹೋದರು. ನಾನೂ ಕೂಡ ಹೋಗಬೇಕೆಂದು ಇದ್ದೆ. ಈ ದಿನ ಈ ಪ್ರಾಮುಖ್ಯವಾದಂತಹ ವಿಷಯ ಸದನದಲ್ಲಿ ಚರ್ಚೆಯಾಗುವುದರಿಂದ ನಾನು ಇಲ್ಲಿ ಇರುವುದು ಸೂಕ್ತವಾದುದೆಂದು ನಾನು ಹೋಗಲಿಲ್ಲ. ವರದಿ ಏನು ಬರುತ್ತದೆ ಅದನ್ನು ನೋಡಿ ಹೋಗೋಣವೆಂದು ಇದ್ದೆ. ಇನ್ನು ಎರಡು ಅಥವಾ ಮೂರು ಗಂಟೆಯ ಒಳಗೆ ಅಲ್ಲಿನ ಪೂರ್ಣ ವರದಿ ಬರುವುದಿದೆ. ಆ ವರದಿ ಬಂದ ಮೇಲೆ ಪೂರ್ತಿ ವರದಿಯನ್ನು ಸದನದ ಮುಂದೆ ಇಡುತ್ತೇನೆ. ಇದರಲ್ಲಿ ರಾಜಕೀಯವನ್ನು ಮಾಡುವುದಕ್ಕೆ ಹೋಗುವುದಿಲ್ಲ ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅದನ್ನೂ ನಾನು ಒಪ್ಪುತ್ತೇನೆ. ಕೆಲವರು ಹಿಂದೆ ಬಹಳ ಚೆನ್ನಾಗಿತ್ತು ಈಗ ಏನೋ ಮಹಾ ಆಗಿಹೋಗಿದೆ ಎಂಬಂತೆ ಮಾತನಾಡಿದರು. ಆ ಬಗ್ಗೆ ನಾನು ಈಗ ಹೋಗುವುದಿಲ್ಲ. ಬೇರೆ ಇಲಾಖೆಗಳ ಬೇಡಿಕೆ ಮೇಲೆ ಚರ್ಚೆ ಬಂದಾಗ ಮಾತನಾಡುತ್ತೇನೆ. ಆದ್ದರಿಂದ ವರದಿ ಬಂದಮೇಲೆ ಮಧ್ಯಾಹ್ನ ಸಭೆಯ ಮುಂದೆ ಇಡುತ್ತೇನೆ. ಅದರ ಮೇಲೆ ಏನು ಬೇಕಾದರೂ ಕ್ರಮ ಕೈಗೊಳ್ಳೋಣ.

The Hon' le Leader of Opposition and other non Members have suggested to set up a Judicial Enquiry and also to send a team consisting of Members of this House to assess the situation. They have also pleaded to announce the compensation to the persons who

have died in this incident. We will announce the compensation soon after the report is received. In addition we have to look into othor suggestions ma de bythe hon.Members. All these matters can be consedered after my statement. Which I am going to make this afternoon. Till then let the House take up other business.

ಶ್ರೀ ಭೀಮಣ್ಣ ಖಂಡ್ರೆ.—ಭದ್ರಾವತಿ ಜಿಲ್ಲೆಯಲ್ಲಿ ಮಳೆ ಇಲ್ಲ, ಬೆಳೆ ಒಣಗಿ ಹೋಗುತ್ತಾ ಇದೆ. ಈ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದೆ.

ಶ್ರೀ ಮಳ್ಳೂರು ಆನಂದರಾವ್.—ಮಧ್ಯಾಹ್ನ ಸಭೆ ಪ್ರಾರಂಭ ಆದಾಗ ಸದಸ್ಯರಿಗೂ ಚರ್ಚೆ ಮಾಡಲು ಅವಕಾಶವನ್ನು ಕೊಡುತ್ತೀರೋ ಅಥವಾ ಮಂತ್ರಿಗಳಿಂದ ಉತ್ತರ ಕೊಡಲು ಸೂಚಿಸುತ್ತೀರೋ ?

ಅಧ್ಯಕ್ಷರು.—ರೆವಿನ್ಯೂ ಮಂತ್ರಿಗಳು ಇವತ್ತು ತಮ್ಮ ಬೇಡಿಕೆಗಳ ಮೇಲಿನ ಉತ್ತರವನ್ನು ಮುಗಿಸಬೇಕೆಂದಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಕೆಲವು ಸದಸ್ಯರು ಬೇಡಿಕೆ ಮೇಲೆ ಮಾತನಾಡುವವರಿದ್ದಾರೆ. ಅವರು ಮಾತನಾಡಲು ಅವಕಾಶವನ್ನು ಕೊಡಲಾಗುತ್ತದೆಯೋ ?

SRI R. GUNDU RAO.—I am sorry. We cannot postpone other demands that are before the House. In fact so many Members have spoken on Revenue and Agriculture Department. Now, let the Hon'ble Minister commence his reply. In the meantime if I receive the report I will make a statement about the police firing at Dharwar. This is point No. I. Secondly, there are so many other demands to be discussed. Let the hon.Members take opportunity to participate in other demands. Now let us conclude the demand on Revenue and Agriculture. This is my view.

ಶ್ರೀ ಮಳ್ಳೂರು ಆನಂದರಾವ್.—ಮುಖ್ಯ ಮಂತ್ರಿಗಳ ಒಂದು ಅಭಿಪ್ರಾಯ ಅದು. ಮಾನ್ಯ ಅಧ್ಯಕ್ಷರು ಏನು ಹೇಳುತ್ತಾರೆ ಅದಕ್ಕೆ ನಾವು ತಲೆಬಾಗುತ್ತೇವೆ. ಕೆಲವು ಬೇಡಿಕೆಗಳ ಮೇಲೆ ಚರ್ಚೆ ನಡೆಯಲೇ ಇಲ್ಲ. ಮುಜರಾಯಿ ಇಲಾಖೆ ಮೇಲೆ ಸರಿಯಾಗಿ ಚರ್ಚೆ ಆಗಲಿಲ್ಲ. ತಾವು ಮಾತನಾಡಲು ಅವಕಾಶ ಕೊಟ್ಟರೆ ಚರ್ಚೆ ಬೇಡ. ಇನ್ನೂ ಕೆಲವರು ಮಾತನಾಡಬೇಕಾಗಿದೆ. ಈ ಬಗ್ಗೆ ತಮ್ಮ ನಿರ್ಣಯ ನಮಗೆ ತಲುಪಬೇಕಾಗುತ್ತದೆ.

ಅಧ್ಯಕ್ಷರು.—ವಾಸ್ತವವಾದ ಅಂಶವನ್ನು ಸಭೆಯ ಮುಂದೆ ಇಟ್ಟಿದ್ದೇನೆ. ನಾನೂ ಸಭೆಗೆ ತಲೆಬಾಗಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೂ ಸಹಾ ಸಲಹೆಯನ್ನು ಕೊಟ್ಟಿದ್ದಾರೆ. ಈಗಿನ ಒಂದು ಪರಿಸ್ಥಿತಿಯಲ್ಲಿ ೨–೩ ಬೇಡಿಕೆಗಳು ಹಿಂದೆ ಬಿದ್ದಿವೆ. ಈ ದಿನ ಬೆಳಿಗ್ಗೆ ಸದನದಲ್ಲಿ ಒಂದು ಪ್ರಾಮುಖ್ಯವಾದ ವಿಷಯದ ಬಗ್ಗೆ ಚರ್ಚೆಯಾದ್ದರಿಂದ ಈ ದಿನ ನಡೆಯಬೇಕಾದ ಚರ್ಚೆ ಮುಂದೂಡಿದೆ. ಇನ್ನೂ ಪ್ರಾಮುಖ್ಯವಾದಂತಹ ಬೇಡಿಕೆಗಳು ಇದ್ದು ಅವುಗಳ ಚರ್ಚೆಗೆ ಕಾಲಾವಕಾಶ ಸಿಗುವುದಿಲ್ಲ. ಆದ್ದರಿಂದ ಏನು ಒಂದು ಷೆಡ್ಯೂಲ್ ಇದೆ ಅದರ ಪ್ರಕಾರ ನಾವು ಹೋಗಬೇಕಾಗುತ್ತದೆ.

ಶ್ರೀ ಅಜೀಜ್ ಸೇಟ್.—ಎಲ್ಲವನ್ನೂ ಒಂದು ಮಾಡಿ ಒಂದೇ ಸಾರಿ ಪಾಸ್ ಮಾಡಿಬಿಟ್ಟರೆ ಹೇಗೆ ?

ಶ್ರೀ ಭೀಮಣ್ಣ ಖಂಡ್ರೆ.—ಗುಲ್ಬರ್ಗ, ರಾಯಚೂರು, ಬೀದರ್‌ನಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ನಾಳೆಯಿಂದ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳಲಾಗುವುದಿಲ್ಲವೆಂದು ತಿಳಿಯಿತು. ಈ ದಿನವೇ ಒಂದು ಅರ್ಧ ಗಂಟೆ ಕಾಲ ತೆಗೆದುಕೊಂಡು ಪ್ರಸ್ತಾಪ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ವಿನಂತಿ ಮಾಡಿಕೊಂಡಿದ್ದೆ. ಹೊಸಪೇಟೆ ಕಾರ್ಮಿಕರ ಸ್ಥಿತಿ ಬಹಳ ಚಿಂತಾಜನಕವಾಗಿರುತ್ತದೆ. ಪೋಲೀಸಿನವರು ದಾಳಿ ಬಹಳವಾಗಿರುತ್ತದೆ. ಲ್ಯಾಂಡ್‌ಲಾರ್ಡ್‌ಗಳು ಮನೆಗಳನ್ನು ಕಿತ್ತು ಹೊರಗೆ ಹಾಕಿರುತ್ತಾರೆ. ಆದ್ದರಿಂದ ಪರಿಸ್ಥಿತಿ ಮಿತಿಮೀರಿ ಹೋಗುವುದಕ್ಕೆ ಮುಂಚಿತವಾಗಿ ಸಂಬಂಧ ಪಟ್ಟವರ ಜೊತೆಯಲ್ಲಿ ವ್ಯವಹಾರ ನಡೆಸಬೇಕು. ಲಾಟಿಚಾರ್ಜ್ ಗೋಲಿಬಾರ್ ಆಗಿ ಜನರು ಸತ್ತಮೇಲೆ ಕ್ರಮ ತೆಗೆದುಕೊಳ್ಳುವುದರಿಂದ ಏನು ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಭಾಸ್ಕರ ನಾಯ್ಡು.—ಮಾನ್ಯ ಅಧ್ಯಕ್ಷರೇ ಈಗಾಗಲೇ ಒಂದೂವರೆ ಗಂಟೆಯಾಗುತ್ತಾ ಬಂದಿರುತ್ತದೆ. ಈಗ ಸಭೆ ಎದ್ದು ಮತ್ತೆ ಯಾವಾಗ ಸೇರುತ್ತದೆಂಬುದನ್ನು ತಿಳಿಸುತ್ತೀರಾ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಈಗ ಸಭೆ ಎದ್ದು ಮತ್ತೆ ಎರಡೂವರೆ ಗಂಟೆಗೆ ಸೇರುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಗಮನಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಈಗ 6 ಡಿಮ್ಯಾಂಡ್ಸ್ ಏನು ಇವೆ ಅವನ್ನು ಮಾನ್ಯ ಅಜೀಜ್‌ಸೇಟ್‌ರವರು ಹೇಳಿದ ಹಾಗೆ ಗಿಲಟಿನ್ ಹಾಕಿಬಿಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇಲ್ಲ ಚರ್ಚೆಯಾಗಬೇಕೆಂಬುದೇ ಸರ್ಕಾರದ ಅಭಿಪ್ರಾಯವಾಗಿರುತ್ತದೆ, ಈಗ ಅಂಗೀಕೃತವಾಗಿ ಬಂದಿರುವ ರೆವಿನ್ಯೂ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಇಷ್ಟು ಹೊತ್ತಿಗೆ ರಿಪ್ಲೈ ಆಗಿ ಮುಗಿದು ಹೋಗಬೇಕಾಗಿತ್ತು.

ಶ್ರೀ ಜೆ. ಎಚ್. ಪಟೇಲ್.—ಡಿಮ್ಯಾಂಡ್ಸ್ ಬಗ್ಗೆ ಡಿಸ್‌ಕಶನ್ ಮಾಡುವುದು ಬೇಡ, ಕಾಲಾವಕಾಶವಿಲ್ಲವೆಂದು ಹೇಳಿದರೆ ಗಿಲಟಿನ್‌ಗೆ ಹಾಕತಕ್ಕಂಥ ಸಂದರ್ಭ ಬರುತ್ತದೆ.

ಶ್ರೀ ಮಳ್ಳೂರ್ ಆನಂದರಾವ್.—ಮಾನ್ಯ ಅಧ್ಯಕ್ಷರೇ ಮುಜರಾಯಿ ಖಾತೆ ಮಂತ್ರಿಗಳು ನೆನ್ನೆಯಿಂದಲೂ ಕಾದು ಕುಳಿತಿರುತ್ತಾರೆ. ಅವರು ಏತಕ್ಕೆ ಸುಮ್ಮನೆ ಕುಳಿತಿರಬೇಕು? ಅವರ ಡಿಮ್ಯಾಂಡ್ ತೆಗೆದುಕೊಳ್ಳುವುದು ಬೇಡ, ಚರ್ಚೆ ಯಾಗುವುದು ಬೇಡವೇ ಎಂದು ಕೇಳುತ್ತೇನೆ. ಮೂರು ದಿವಸಗಳಿಂದಲೂ ಅವರನ್ನು ಕೇಳುವವರೇ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಮನೆಯಲ್ಲಿ ಬೇರೆ ಬೇರೆ ವಿಷಯಗಳು ಅಂದರೆ ನವಲಗುಂದ್, ನರಗುಂದ್ ವಿಷಯಗಳು ಬಂದಕಾರಣ ಈ ವಿಷಯವನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ.

Sri Azeez Sait.—Tne Hon'ble Minister has dragged in my name and said that I wanted the demands to be guillotined. I do stand by my statement. Never in the history of this House the rights have been taken away by mere discussion in the Business Advisory Committee. Yesterday I said this is a very bad pracedent and it so happened yesterday, there was firing, and today it has come up for discussson here. Tommorrow there may be some other firing. So taking away the rights of members to give notice of adjournment motion, calling attention notice and notices matter under Rule 312 is not proper. Adjournment motion, calling attention and matter under Rule 312 are the rights of the members. This Business Advisory Committee has no business to take away that right. You cannot take away that right under the guise of the decision of the Business Advisory Committee. To take away these rights, is a bad precedent. That is why I said, you simply apply the guillotine and why do you want to sit in the morning and evening like this. We are the representatives and servants of the people, but not the serveants of any body else. The leaders must take the members into confidence.

SRI R. GUNDU RAO.—It is already 1. 30 P. M.

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸದನದ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಡಿಸಾಲ್ವ್ ಮಾಡಿ ಈ ಸದನದಲ್ಲಿಯೇ ಟ್ರೆಜರಿಬೆಂಚ್ ಹಾಗು ವಿರೋಧ ಪಕ್ಷದ ಸದಸ್ಯರು ಈ ಮನೆಯ ಕಾರ್ಯ ಕಲಾಪಗಳನ್ನು ನಡೆಸಲು ತೀರ್ಮಾನ ತೆಗೆದು ಕೊಳ್ಳುವಂತೆ ಮಾಡಿ. ಬಿಸಿನೆಸ್ ಅಡ್ವೈಸರಿ ಕಮಿಟಿಯೊಂದು ಇದ್ದು ಅದರಿಂದ ನಮಗೇನು ಟಿ.ಎ.ಡಿ.ಎ ಏನು ಸಿಗುವುದಿಲ್ಲ.

## ANNOUNCEMENT

MR. SPEAKER.—The Business Advisory Committee is constituted by this House; it is a creature of this House. So the recommendations of the Business Advisory Committee are usually accepted by the House. That is the convention, Yesterday certain recommendations of the Business Advisory Committee were submitted before the House and the House approved almost all of them. Since the rules provide for Business Advisory Committee, unless the rules are amended, they will be in vogue.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಬಹಳ Lighter vein ನಲ್ಲಿ ಹೇಳಿದೆ ಎಂದು ಯಾರೂ ತಿಳಿದುಕೊಳ್ಳಬಾರದು. ನಾನು ಯಾವತ್ತೂ ಯಾವುದೇ ವಿಷಯವನ್ನೂ ಕೂಡ lighter vein ನಲ್ಲಿ ಹೇಳುವುದಕ್ಕೆ ಹೋಗು ವುದಿಲ್ಲ. ಅಲ್ಲದೆ ವ್ಯಕ್ತಿಶಃ ಕೂಡ ಯಾರಿಗೂ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಅಜೀಜ್ ಸೇಠ್‌ರು ತಮ್ಮ ಅಭಿಪ್ರಾಯವನ್ನು ಹೇಳಿದರು. ಆದರೆ ನನ್ನ ಮಾತಿನಿಂದ ಯಾವ ಸದಸ್ಯರ ಮನಸ್ಸಿಗೂ ನೋವಾಗುವುದು ಬೇಡ. ಈ ಸಭೆಯ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸುವುದಕ್ಕೆ ಸ್ವತಃ ನಿಮಗೆ ಅಧಿಕಾರ ಇದೆ. ತಾವು ಎರಡೂ ಕಡೆಯ ಸದಸ್ಯರನ್ನು ಈ ಸದನದಲ್ಲಿಯೇ ಕೇಳಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಅದರ ಪ್ರಕಾರ ಸದನದ ಕಾರ್ಯಕಲಾಪಗಳನ್ನು ನಡೆಸಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಬಿಸಿನೆಸ್ ಅಡ್ವೈಸರಿ ಕಮಿಟಿಯು ನೀತಿ ನಿಯಮಗಳಿಗೆ ತಿಲಾಂಜಲಿಯನ್ನು ಬಿಟ್ಟಿದ್ದಾರೆಂದು ಕೇಳಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ಗೆ ಇನ್ನು ಮುಂದೆ ನಾನೂ ಹೋಗುವುದಿಲ್ಲ, ಮಾನ್ಯ ಬೊಮ್ಮಾಯಿಯವರೂ ಹೋಗುವುದಿಲ್ಲ. ನಮಗೂ ಆತ್ಮ ಗೌರವ ಎಂಬುದು ಇದೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಜೀಜ್ ಸೇಠ್‌ರು ಬಹಳ ಹಿರಿಯ ಹಾಗೂ ಒಳ್ಳೆಯ ಅನುಭವೀ ಸದಸ್ಯರು. ಅಲ್ಲದೆ ಹಿಂದೆ ಮಂತ್ರಿಯಾಗಿದ್ದವರು. He is not expected to speak like this on Business Advisory Committee. ಅಪರೊಬ್ಬರು ಏನೋ ಮಾತನಾಡಿದರೆಂದು ಮಾನ್ಯ ದೇವೇಗೌಡರಾಗಲಿ, ಮಾನ್ಯ ಬೊಮ್ಮಾಯಿಯವರಾಗಲಿ ಈ ವಿಚಾರದಲ್ಲಿ ಮನಸ್ಸಿಗೆ ಬೇಸರ ಮಾಡಿಕೊಳ್ಳಬೇಕಾದ ಪ್ರಮೇಯವಿಲ್ಲ. We will request the Leader of the Opposition because the hon'ble Member belongs to that party. When once the Business Advisory Committee takes the decision, it is binding on all the Members.

SRI AZEEZ SAIT.—If the House wishes to change the decision of the Business Advisory Committee, it can.

ಶ್ರೀ ಆರ್. ಗುಂಡೂರಾವ್.—ಈ ಸದನದಲ್ಲಿ ಚರ್ಚೆಗಳು ಬರುವಾಗ.........

ಶ್ರೀ ಅಜೀಜ್ ಸೇಠ್.—ನಾನು ಹೇಳುವುದನ್ನು ಹೇಳಿದ್ದೇನೆ. ಅದು ನನ್ನ ಅಭಿಪ್ರಾಯ,

SRI QAMARUL ISLAM.—The House is at liberty to aprove or disapprove the decisions of the Business Advisory Committee.